ಐಕ್ಯರಂಗ

ದುಡಿವ ಜನರ ಪ್ರಾಣ ಮಿತ್ರ

ಸಂಪುಟ 25 ಸಂಚಿಕೆ 17
ಏಪ್ರಿಲ್ 27, 2003 ಬೆಲೆ ರೂ. 3.00




ಬೀಡಿ ಕಾರ್ಮಿಕರ ಚಳುವಳಿ ಹಿಂದಿರುಗಿ ನೋಡಿದಾಗ



ಗುಮ್ಮನಹಳ್ಳಿ ದಲಿತರ ಮೇಲಿನ ದೌರ್ಜನ್ಯದ ಸುತ್ತ!

ಇರಾಕ್ ಅತಿಕ್ರಮಣ ಬುಶ್-ಬ್ಲೇರ್ ಅಪರಾಧಗಳು






ಚುನಾವಣೆ ತಂತ್ರ ಸಿದ್ಧವಾಗುತ್ತಿರುವ ಯಂತ್ರ!

ಭಾರತೀಯ ಜನತೆಗೆ ದ್ರೋಹ ಬಗೆದ ಕಾಂಗ್ರೆಸ್

ವಿಮೋಚನಾ ಸಮರದಲ್ಲಿ....



ಮೇಜರ್ ಜಯಪಾಲ್ ಸಿಂಗ್

ಆತ್ಮಕಥನ

24



ಹಿಂದಿನ ಸಂಚಿಕೆಯಲ್ಲಿ ಬರ್ಮಾ ದೇಶಪ್ರೇಮಿ ಅಧಿಕಾರಿಗಳನ್ನು ದೇಶದ್ರೋಹಿಗಳೆಂದ ಬ್ರಿಟಿಷ್ ಸೇನಾ ಅಧಿಕಾರಿ ಹಾರ್ವಸನ್, ಸಾಮ್ರಾಜ್ಯಶಾಹಿ ಪರ ವಾದದಲ್ಲಿ ಅಧಃಪತನಗೊಂಡ ಬರ್ಮಾ, 1945 ರಲ್ಲಿ ಮುಂಬಯಿ ಮತ್ತು ಕರಾಚಿ ಬಂದರುಗಳಲ್ಲಿ ಭಾರತೀಯ ಸೈನಿಕರಿಗೆ ಕರಪತ್ರ ಹಂಚಿದ ಸಂಘಟನೆ, ಸಾಹಸ, 1945 ಆಗಸ್ಟ್ 6 ರಂದು ಜಪಾನಿನ ಹಿರೋಶಿಮಾದ ಮೇಲೆ ಅಣುಬಾಂಬ್ ಹಾಕಿದ ಅಮೇರಿಕ, ಮಿತ್ರಪಡೆಗಳ ಜೊತೆ ಕದನ ವಿರಾಮ ಘೋಷಿಸಿದ ಜಪಾನ್ ಮತ್ತು ಪ್ರಾಂತೀಯ ಸ್ವಾಯತ್ತತೆ ಬಯಸಿದ ಕಾಂಗ್ರೆಸ್ ಮುಂದೆ.....

ಕನ್ನಡಕ್ಕೆ: ಬಿಶ್ವ ಕುಂದಾಪುರ

ಗಾಂಧಿಗೆ ಭಯ

ಜನರಲ್ಲಿನ ಯುದ್ಧೋತ್ತರ ಕ್ರಾಂತಿಕಾರಿ ಮನೋಭಾವದ ಬಗ್ಗೆ ಗಾಂಧೀಜಿ ಮತ್ತು ಕಾಂಗ್ರೆಸ್ಸನಲ್ಲಿನ ಅವರ ಪ್ರಮುಖ ಗೆಳೆಯರಿಗೆ ಭೀತಿ ಉಂಟಾಗಿತ್ತೆನ್ನುವುದು ನಿಜ. ಇದನ್ನು ನಾನು ಆಗಲೂ ನಂಬಿದ್ದೆ, ಈಗಲೂ ನಂಬುತ್ತೇನೆ. ಜಾಗತಿಕ ಯುದ್ಧದಲ್ಲಿ ಗೆಲವು ಸಾಧಿಸಿದ ಸಾಮ್ರಾಜ್ಯಶಾಹಿಗಳ ಶಕ್ತಿಯ ಕುರಿತು ಅವರು ಖಂಡಿತವಾಗಿಯೂ ಅತಿಶಯ ಅಂದಾಜು ಮಾಡಿದ್ದದರು. ಆದರೆ ನಿಜ ಹೇಳಬೇಕೆಂದರೆ ಸಾಮ್ರಾಜ್ಯಶಾಹಿ ದುರ್ಬಲಗೊಂಡಿತ್ತು. ಅದರ ಅಡಿಗಲ್ಲು ದುರಸ್ತಿ ಮಾಡಲಾಗದಷ್ಟು ಹಾಳಾಗಿಹೋಗಿತ್ತು. ಕಾಂಗ್ರೆಸ್ ನಾಯಕರು ಸಾಮ್ರಾಜ್ಯಶಾಹಿಯ ಮೇಲ್ನೋಟದ ಗೆಲುವನ್ನಷ್ಟೇ ಕಂಡು ಅದರ ಶಕ್ತಿಯ ಬಗ್ಗೆ ಲೆಕ್ಕಾಚಾರ ಹಾಕಿದ್ದರು.

ಪ್ರಥಮ ದರ್ಜೆ ಬೋಗಿಯೊಂದರಲ್ಲಿ ಕುಳಿತಿದ್ದ ನಾನು ಶಿಮ್ಲಾ ಸಮ್ಮೇಳನಕ್ಕಾಗಿ ಹೊರಡುವ ಸಂಭ್ರಮದಲ್ಲಿ ಓಡಾಡುತ್ತಿದ್ದ ಖದ್ದರ್ ಧಾರಿ ಕಾಂಗ್ರೆಸ್ಸಿಗರನ್ನು ನೋಡಿದೆ. ನನಗೆ ತುಂಬಾ ಬೇಜಾರಾಯಿತು. ಶಕ್ತಿಯ ಇಷ್ಟೊಂದು ಪ್ರಬಲ ಆಣೆಕಟ್ಟು ಇದ್ದರೂ ಈ ಜನರು ಸಾಮ್ರಾಜ್ಯಶಾಹಿಗಳ ಪದತಲಕ್ಕೆ ಮಣಿಯುವ ಪರಿ ಕಂಡು ಖೇದವಾಯಿತು.

"ಅಹಿಂಸೆಯಂತೆ ಅಹಿಂಸೆ, ಮೈ ಫುಟ್" ಎಂದು ಅಮೆರಿಕನ್ ಅಧಿಕಾರಿಯೊಬ್ಬ ಪರಿಹಾಸ್ಯ ಮಾಡಿದ. ನನ್ನ ಮುಂದಿನ ಬರ್ತ್‌ನಲ್ಲಿ ಆತ ಕುಳಿತಿದ್ದ.

ಯುದ್ಧ ಕೊನೆಗೊಂಡಿತು. ಬಂಡಾಯದ ಸಾಧ್ಯತೆಯ ಯೋಚನೆ ನನ್ನ ತಲೆ ತುಂಬಿ ಕೊಂಡಿತು. ನಾನು ಕೋಲ್ಕತ್ತಾದಿಂದ ಅಕ್ಯಾಬ್‌ಗೆ ತೆರಳಿದೆ. ಥಾಯ್‌ಲ್ಯಾಂಡ್, ಇಂಡೋಚೀನಾ ಮೊದಲಾದೆಡೆ ತೆರಳಿ ಅಲ್ಲಿ ಅಳಿದುಳಿದಿರಬಹುದಾದ ಐಎನ್‌ಎ ಶಕ್ತಿಗಳನ್ನು ಸಂಪರ್ಕಿಸಲು ಬಯಸಿದೆ.

ಬ್ರಿಟೀಷ್ ಮತ್ತು ಭಾರತೀಯ ಪಡೆಗಳು ಈ ದೇಶಗಳಿಗೆ ವಿಮಾನದಲ್ಲೇ ಸಾಗಿದವು. ಯುದ್ಧ ಮುಗಿದ ಐದು ದಿನಗಳ ನಂತರ ನಾನು ಬ್ಯಾಂಕಾಕ್‌ನಲ್ಲಿದ್ದೆ, ಏಳು ದಿನಗಳ ನಂತರ ಸೈಗಾನ್‌ನಲ್ಲಿದ್ದೆ. ವೈಮಾನಿಕ ಸರಬರಾಜು ಘಟಕದ ಕಮಾಂಡಿಂಗ್ ಆಫೀಸರ್ ಆಗಿದ್ದರಿಂದ ನನಗಿದು ಸಾಧ್ಯವಾಯಿತು.

ಕಳ್ಳಸಾಗಣೆದಾರನ ಕರಾಮತ್ತು

ಬ್ಯಾಂಕಾಕ್‌ನಲ್ಲಿ ದುಗುಡ ದುಮ್ಮಾನದಿಂದ ಕಳೆಗುಂದಿದ ಭಾರತೀಯ ಕ್ವಾರ್ಟರ್ಸ್‌ಗೆ ನಾನು ಪ್ರವೇಶಿಸಿದೆ. ಅಲ್ಲಿ ಅನೇಕ ವರ್ಷಗಳಿಂದ ವಾಸವಿದ್ದ ಪಾರ್ಸಿ ವ್ಯಕ್ತಿಯೊಬ್ಬನನ್ನು ಭೇಟಿಯಾದೆ. ಐಎನ್‌ಎಯ ಕ್ರಾಂತಿಕಾರಿ ಕೇಂದ್ರದ ಜತೆ ಸಂಪರ್ಕ ಸಾಧಿಸಲು ನನಗೆ ನೆರವಾಗಲು ಆತ ಒಪ್ಪಿದ. ಐಎನ್‌ಎಯ ಮುಂಚೂಣಿ ಶಕ್ತಿಗಳು ಭಾರತಕ್ಕೆ ತೆರಳಿದ್ದಾರೆ ಎಂದು ಆತ ನನಗೆ ತಿಳಿಸಿದ.

ಭಾರತದಲ್ಲಿ ಬಂಡಾಯ ಸಂಘಟಿಸಲು ನಾವು ಸನ್ನದ್ಧರಾಗಲಿದ್ದೆವು. ನಾನು ಹಿಂದೆ ಉಳಿದುಬಿಟ್ಟೆ. ನನ್ನನ್ನು ಭಾರತಕ್ಕೆ ವಾಪಸ್ ಕರೆದುಕೊಂಡು ಹೋಗುವಿರಾ ಎಂದು ಕೇಳಿದ ಪಾರ್ಸಿ ವ್ಯಕ್ತಿ, ಅಲ್ಲಿ ನನಗೆ ಐಎನ್‌ಎಯವರನ್ನು ಪರಿಚಯಿಸುವುದಾಗಿ ನುಡಿದರು. ನಾನು ಒಪ್ಪಿದೆ, ಆತನಿಗೆ ಐಡೆಂಟಿಟಿ ಕಾರ್ಡ್ ನೀಡಿದೆ. ಸಮವಸ್ತ್ರ ಹಾಗೂ ಅಧಿಕಾರಿಯ ಚಿಹ್ನೆಯನ್ನು ಒದಗಿಸಿದೆ. ಮರುದಿನ ಆತ ನಮ್ಮ ಒಂದು ಜಾಗದಲ್ಲಿರುವಂತೆ ನೋಡಿಕೊಂಡೆ. ಆತನನ್ನು ವಿಮಾನದಲ್ಲಿ ಕರೆದುಕೊಂಡು ಹೋಗುವಂತೆ ಅಕ್ಯಾಬ್‌ನಲ್ಲಿನ ಘಟಕಕ್ಕೆ ಸೂಚನೆ ಕೊಟ್ಟೆ. ಆತ ಭಾರತ ತಲುಪಿದ. ಆದರೆ ಅದರ ನಂತರ ಆತನನನ್ನು ಹುಡುಕಲೇ ಆಗಲಿಲ್ಲ. ಆತ ನನಗೆ ಸುಳ್ಳು ವಿಳಾಸ ನೀಡಿದ್ದ, ಮೋಸ ಮಾಡಿದ್ದ. ಒಬ್ಬ ಕಳ್ಳ ಸಾಗಣೆದಾರ ಅಪಾರ ಪ್ರಮಾಣದ ಚಿನ್ನದೊಂದಿಗೆ ಭಾರತಕ್ಕೆ ಮರಳಿದ್ದ. ಭಾರತದಲ್ಲಿ ಬಂಡಾಯದ ಕಿಚ್ಚು ಹಚ್ಚಬೇಕೆಂಬ ಪ್ರಭಲ ಆಕಾಂಕ್ಷೆ ಹೊತ್ತಿದ್ದ ನಾನು ಮೋಸಹೋದೆ.

1945 ನವೆಂಬರ್‌ನಲ್ಲಿ ನನ್ನ ಘಟಕದೊಂದಿಗೆ ಚಕ್ಲಲಾಕ್ಕೆ ಮರಳಿದೆ. ರಾಜಕೀಯ ಮಾತುಕತೆಗಳು ಬೇಗ ಮುಕ್ತಾಯವಾಗಲೆಂದು ಹಾರೈಸಿದೆವು. ಐಎನ್‌ಎ ವಿಚಾರಣೆಗಳು ನಡೆದವು. 1946 ರ ಆರಂಭದಲ್ಲಿ ಪ್ರಾಂತ್ಯಗಳಲ್ಲಿ ಕಾಂಗ್ರೆಸ್ ಪಕ್ಷ ಸರಕಾರ ರಚಿಸಿತು. ಬ್ರಿಟೀಷರು ಆತುರಾತುರವಾಗಿ ಭಾರತೀಯ ಸೇನೆಯನ್ನು (ಕಳಚಿ ಹಾಕತೊಡಗಿದರು) ವಾಪಸ್ ಪಡೆಯ ತೊಡಗಿದರು. ಸಂಘಟನೆಯಲ್ಲಿದ್ದ ನಮ್ಮ ಸೈನಿಕರು ಸಮಾಜವಾದಿಗಳನ್ನು ಸಂಪರ್ಕಿಸಿ ದರು. "ಹೋಲ್ಡ್ ಆನ್" ಎನ್ನುವುದೇ ಉತ್ತರವಾಗಿತ್ತು. ಅವು ಹತಾಶೆಯ ದಿನಗಳಾಗಿದ್ದವು. ಗಾಂಧೀಜಿಯ ಸಂತ ಭಾವನೆಯ ವಿವೇಚನೆಯಲ್ಲಿ ನಂಬಿಕೆಯಿಟ್ಟ ಚಳುವಳಿ ತನ್ನದೆ ಶಕ್ತಿಯಿಂದ ಉಸಿರುಗಟ್ಟಿಸಿಕೊಳ್ಳುತ್ತಿತ್ತು. ಮಾತುಕತೆ ಸಂಧಾನ ದೀರ್ಘಕಾಲ ಮುಂದುವರಿಯಿತು. ವಿಮೋಚನೆ ಮತ್ತು ಸ್ವಾತಂತ್ರ್ಯದ ಪ್ರಶ್ನೆಗಳು ನಿರ್ಲಕ್ಷಿತವಾದವು. "ಜಿನ್ನಾ ಒಪ್ಪಿದರೆ ಮಾತ್ರ ನಾವು ಸ್ವಾತಂತ್ರ ಪಡೆಯುತ್ತೇವೆ" ಬಡಪಾಯಿಗಳು. ಇದರ ಜತೆಯಲ್ಲಿ, ಒಂದು ಹತಾಶ ಕೂಗು ಜನರಿಂದ ಹೊರಬಿದ್ದಿತು. 'ನೇತಾಜಿ ಇದ್ದಿದ್ದರೆ... ಎಂಬುದು ಅವರ ಆಶಯವಾಗಿತ್ತು. ಅವರು ಹೋರಾಟದ ಮೂಡ್‌ನಲ್ಲಿದ್ದರು. 1945 ರ ಕೊನೆ ಭಾಗ ಅಥವಾ 1946 ರ ಆರಂಭದಲ್ಲಿ ಈ ಸಂಘರ್ಷ ಆರಂಭವಾಗಿದ್ದರೆ ಸಾಮ್ರಾಜ್ಯಶಾಹಿಗಳು ಮತ್ತು ಅವರ ಕುನ್ನಿಗಳನ್ನು ಅವರದೇ ರಕ್ತದಲ್ಲಿ ಮುಳುಗಿಸಿಬಿಟ್ಟಿರುತ್ತಿತ್ತು.

ಅಂದಿನ ಕಾಂಗ್ರೆಸ್ ನಾಯಕತ್ವ ಆ ದಿನಗಳಲ್ಲಿ ಭಾರತೀಯ ಜನತೆಗೆ ಭಾರಿ ದ್ರೋಹ ಬಗೆದಿತ್ತು ಎಂಬುದು ನನ್ನ ಆರೋಪವಾಗಿದೆ. 'ಜಿನ್ನಾಗೆ ಪಾಕಿಸ್ತಾನವಿಲ್ಲ' ಎಂದವರು ರೊಚ್ಚಿ ಹಿಡಿದರು, ಭಾರತೀಯ ರಾಜಕೀಯದಿಂದ ಆ ಸಾಮ್ರಾಜ್ಯಶಾಹಿ ಅಂಟುಜಾಡ್ಯವನ್ನು ತೊಲಗಿಸಲು ಸಕಾಲಿಕ ಕ್ರಮವನ್ನು ಕೈಗೊಳ್ಳಲಿಲ್ಲ. ಆ ಕೆಲಸ ಮಾಡುವ ಶಕ್ತಿಗಳಿದ್ದವು. ಆದರೆ ಅವರ ಬಗ್ಗೆ ಕಾಂಗ್ರೆಸ್‌ನವರಿಗೆ ಭಯವಿತ್ತು, ಸಂಧಾನದ ಮೂಲಕ ಒಪ್ಪಂದಕ್ಕೆ ಬರುವುದು ಅವರ ಬಯಕೆಯಾಗಿತ್ತು.

ಭಾರತೀಯ ಶ್ರೀಮಂತರ, 'ಹಿಂದೂ ಮತ್ತು ಮುಸ್ಲಿಂ' ಎರಡೂ ಧರ್ಮದ ಶ್ರೀಮಂತರ ಹಿತಕಾಪಾಡಿ ಇನ್ನಷ್ಟು ಬಲಗೊಳಿಸುವಂಥ ಒಪ್ಪಂದ ಅವರಿಗೆ ಬೇಕಿತ್ತು. ಜನರಲ್ಲಿ ಆಕ್ರೋಶ ಕೊತಕೊತನೆ ಕುದಿಯುತ್ತಿತ್ತು. ಆದರೆ ಅವರು ತಮ್ಮ ಕತ್ತಿಯನ್ನು ವೈರಿಯ ವಿರುದ್ಧ ಝಳಪಿಸದಂತೆ ಜಾಗ್ರತಿ ವಹಿಸಲಾಗಿತ್ತು. ಭಾರತೀಯ ಜನತೆಗಾಗಿ ಇತಿಹಾಸ 'ಖಡ್ಗ' ಸೃಷ್ಟಿಸಿತ್ತು. ಅದನ್ನು ಜನರು ಹಿಡಿಯುವುದನ್ನು ತಡೆಯಲು ಎಷ್ಟೆ ದೊಡ್ಡ ವ್ಯಕ್ತಿಗೆ ಆಗಲಿ, ಯಾವುದೇ ಸಾಮ್ರಾಜ್ಯಕ್ಕೆ ಆಗಲಿ ಸಾಧ್ಯವಿಲ್ಲ. ಆ ಖಡ್ಗವನ್ನು ಹಿಡಿಯಲೇಬೇಕಿತ್ತು. ಹಿಡಿದರೂ ಕೂಡ ಆದರೆ ಬ್ರಿಟೀಷರ ವಿರುದ್ಧವಲ್ಲ. ಜನರು ಪರಸ್ಪರ ಖಡ್ಗ ಹಿಡಿದರು! ತಮ್ಮದೇ ಕತ್ತುಗಳನ್ನು ಕುಯ್ದುಕೊಂಡರು, ತಮ್ಮದೇ ಹೆಂಗಸರು ಮಕ್ಕಳನ್ನು ಕೊಂದು ಹಾಕಿದರು. ಇದಕ್ಕೆ ಜಿನ್ನಾ ಆಗಲಿ ಸಾಮ್ರಾಜ್ಯಶಾಹಿಗಳಾಗಲಿ ಕಾರಣವಲ್ಲ. ಅವರು ಆ ರೀತಿ ವರ್ತಿಸಲು ಹುನ್ನಾರ ನಡೆಸುವುದು ನಿರೀಕ್ಷಿತವೇ. ವಿದೇಶಿ ಶತ್ರುಗಳ ವಿರುದ್ಧ ಹಿಡಿಯಲು ಇತಿಹಾಸ ಸೃಷ್ಟಿಸಿದ್ದ ಖಡ್ಗಕ್ಕೆ ಹತ್ತು ಲಕ್ಷ ಭಾರತೀಯರು ಬಲಿಯಾಗಲು ಕಾಂಗ್ರೆಸ್ ಪಕ್ಷವೇ ಹೊಣೆ. ಅದರ ಕೈಗಳು ಈ ರಕ್ತದಿಂದ ಅಪವಿತ್ರವಾಗಿವೆ.

1945 ರ ಕೊನೆಯ ಹೊತ್ತಿಗೆ ಇಡೀ ದೇಶವೇ ಕೊತಕೊತನೆ ಕುದಿಯುತ್ತಿದ್ದ ಕಡಾಯಿಯಂತಿತ್ತು. ಬ್ರಿಟೀಷರ ಜತೆಗಿನ ಸಂಧಾನಗಳನ್ನು ಇಡೀ ದೇಶವೇ ದ್ವೇಷಿಸಿತು. ಆದರೆ ಸಂಧಾನ ಮುಂದುವರಿಯಬೇಕೆಂದು ಗಾಂಧೀಜಿ ಪಟ್ಟು ಹಿಡಿದರು. ಬ್ರಿಟೀಷರು ಭಾರತ ಬಿಟ್ಟು ಯಾವಾಗ ತೊಲಗಬೇಕೆಂಬ ವಿಷಯ ಮುಖ್ಯವಾಗಲಿಲ್ಲ. ಬ್ರಿಟೀಷರು ತಮ್ಮ ವಿಶಿಷ್ಟ ಬೂಟಾಟಿಕೆಗೆ ಅನುಗುಣವಾಗಿ ಭಾರತದ ಸ್ವಾತಂತ್ರ್ಯದ ಪ್ರಶ್ನೆ ಅಮುಖ್ಯಗೊಳಿಸಿ ಹಿಂದೂ- ಮುಸ್ಲಿಂ ಏಕತೆಯ ಪ್ರಶ್ನೆ ಮೇಲೆದ್ದು ಬರುವಂತೆ ಮಾಡಿದರು. (ಮುಂದುವರಿಯುವುದು)

ಸಾದರ ಸ್ವೀಕಾರ....

ನೀರು...ನೀರು..ನೀರು..	ಎಂ.ಜಿ.ಗಂಗನಹಳ್ಳಿ	ರೂ. 8.00
ನಮ್ಮ ವಿಶ್ವದ ಕಥೆ	ಅಬ್ದುಲ್ ಲತೀಫ್	ರೂ. 8.00
ಚಕ್ಕಡಿಗೊಂಡು ಮೋಟಾರು	ಪ್ರೊ. ವಿರೂಪಾಕ್ಷಪ್ಪ ಕೊಡಗಲ್	ರೂ. 8.00
ತಕ್ಕಡಿ	ಪ್ರೊ. ಆರ್.ಎಸ್.ಗುರುಮಠ	ರೂ. 8.00

ಪ್ರಕಾಶಕರು :
ಭಾರತ ಜ್ಞಾನ ವಿಜ್ಞಾನ ಸಮಿತಿ
ಭಾರತೀಯ ವಿಜ್ಞಾನ ಮಂದಿರ ಆವರಣ, ಬೆಂ.12.

ನನಗೂ ಬೈಪಾಸ್ ಆಯಿತು	ಡಾ. ಹೆಚ್.ಡಿ.ಚಂದ್ರಪ್ಪಗೌಡ	ರೂ. 65
ಗುತ್ತಿನಿಂದ ಸೈನಿಕ ಜಗತ್ತಿಗೆ	ಎಸ್.ಆರ್.ಹೆಗಡೆ, ಇಂದಿರಾ ಹೆಗಡೆ	ರೂ. 50.
ಆಪತ್ಕಾಲಕ್ಕೆ ಅಂತರ್ಜಲ	ಎನ್.ಪಿ.ಶ್ರೀಕಾಂತ	ರೂ. 20
ಮಾರುಕಟ್ಟೆಯಲ್ಲಿ ಬಳಕೆದಾರ	ವೈ.ಜಿ.ಮುರುಳಿಧರ	ರೂ. 16
ನಾಳೆ ನಮ್ಮದು	ಡಾ. ಜಾನಕಿ ಸುಂದರೇಶ್	ರೂ. 30.
ಬಣ್ಣರು ವೀಮ	ಪಳಕಳ ಸೀತಾರಾಮಭಟ್	ರೂ. 20

ಪ್ರಕಾಶಕರು :
ನವಕರ್ನಾಟಕ ಪಬ್ಲಿಕೇಷನ್ ಪ್ರೈ. ಲಿ.
ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಬೆಂಗಳೂರು - 560 001

ಇಂದಿಗಾಗಿ ನಾಳಿನ ಕಾರ್ಯಕ್ರಮಗಳು

ಏಪ್ರಿಲ್ 18 ರಿಂದ ಮೇ 5 ರವರೆಗೆ
8 ರಿಂದ 16 ವರ್ಷದ ಮಕ್ಕಳಿಗಾಗಿ ವಿಶೇಷ ರಂಗ ತರಬೇತಿ ಶಿಬಿರ
ಸಂಘಟಕರು : ಸಮುದಾಯ-ಬೆಂಗಳೂರು
ಸ್ಥಳ: ಬಸವನಗುಡಿ ನ್ಯಾಷನಲ್ ಹಿರಿಯ ಪ್ರಾಥಮಿಕ ಶಾಲೆಯ ಆವರಣ
ಸಮಯ: ಬೆಳಿಗ್ಗೆ 10 ಗಂಟೆಯಿಂದ ಮಧ್ಯಾಹ್ನ 1.30 ರವರೆಗೆ

ಏಪ್ರಿಲ್ 24, 2003
ಜನಸಾಮಾನ್ಯರ ಆಹಾರ ಭದ್ರತೆಗಾಗಿ, ಸಮಗ್ರ ಪಡಿತರ ವ್ಯವಸ್ಥೆಗೆ ಆಗ್ರಹಿಸಿ, ದೆಹಲಿ ಚಲೋ
ಜನವಾದಿ ಮಹಿಳಾ ಸಂಘಟನೆ

ಏಪ್ರಿಲ್ 25, 2003
ವಿಆರ್‌ಎಲ್ ಮಾಲೀಕರ ದೌರ್ಜನ್ಯ ವಿರೋಧಿಸಿ ರಾಜ್ಯ ಹಮಾಲಿ ನೌಕರರ ಸಂಘದಿಂದ ಗಂಗಾವತಿಯಲ್ಲಿ ಪ್ರತಿಭಟನೆ

ಮೇ 1, 2003
ಎಲ್ಲೆಡೆ ಮೇ ದಿನಾಚರಣೆ
ಬೆಂಗಳೂರಿನಲ್ಲಿ ಬನ್ನಪ್ಪ ಪಾರ್ಕ್, ಕಾರ್ಪೊರೇಷನ್ ಕಛೇರಿ ಬಳಿ ಸಭೆ.
ಕಾರ್ಮಿಕ ಸಂಘಗಳ (JCTU)ಜಂಟಿ ಆಶ್ರಯದಲ್ಲಿ
ಸಮಯ: ಸಂಜೆ 3 ಗಂಟೆಗೆ, ವಿವಿಧ ಕಡೆಗಳಿಂದ ಮೆರವಣಿಗೆ

ಮೇ 5, 2003
ವಿದ್ಯುತ್ ಪಂಪ್‌ಸೆಟ್ ಹಾಗೂ ಭಾಗ್ಯಜ್ಯೋತಿ ಬಳಕೆದಾರರ ಸಂಘದಿಂದ ದರ ಏರಿಕೆ, ಮೀಟರೀಕರಣ, ಖಾಸಗೀಕರಣ ವಿರುದ್ಧ ರಸ್ತೆ ತಡೆ


ಮೇ 19,20,21, 2003
ಅಖಿಲ ಭಾರತ ಔಷಧಿ ಪ್ರತಿನಿಧಿಗಳು (FMRAI) ಮುಷ್ಕರ

ಮೇ 21, 2003
ಕೇಂದ್ರ ಸರ್ಕಾರದ ಖಾಸಗೀಕರಣ ನೀತಿ, ಆರ್ಥಿಕ ನೀತಿಗಳ ವಿರುದ್ಧ ಅಖಿಲ ಭಾರತ ಮುಷ್ಕರ

ಚುನಾವಣಾ ತಂತ್ರ ಸಿದ್ಧಗೊಳ್ಳುತ್ತಿರುವ ಯಂತ್ರ

ಈ ವಾರ ಕರ್ನಾಟಕ ಒಂದು ನೋಟ — ಎಸ್.ವೈ.ಗುರುಶಾಂತ್

ಆಡಳಿತ ಪಕ್ಷದವರು ವಿರೋಧ ಪಕ್ಷದವರು ಕುಂತಲ್ಲಿ ಕೂರದೆ ಓಡಾಡುತ್ತಿದ್ದಾರೆ. ಮುಖ್ಯಮಂತ್ರಿ ಎಸ್.ಎಂ. ಕೃಷ್ಣರವರು ಒಂದು ಬಾರಿಯೂ ಭೇಟಿ ನೀಡದ ಊರುಗಳಿಗೆ ಹೋಗಿಬರುತ್ತಿದ್ದಾರೆ. ಅಭಿವೃದ್ಧಿಯ ಹಲವಾರು ಯೋಜನೆಗಳಿಗೆ ಅಡಿಗಲ್ಲು ಇಡುತ್ತಿದ್ದಾರೆ. ಜಿಲ್ಲೆಗಳ ಜನರನ್ನು ಶ್ಲಾಘಿಸುತ್ತಿದ್ದಾರೆ. ಇನ್ನೊಂದು ಸುತ್ತಿನಲ್ಲಿ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾದ ಜನಾರ್ಧನ ಪೂಜಾರಿಯವರು 'ಮತದಾರರಿಗೆ' ಕಾಂಗ್ರೆಸ್ ಕ್ವಿಜ್ (ಪ್ರಶ್ನೋತ್ತರ ಸ್ಪರ್ಧೆ) ಏರ್ಪಡಿಸುತ್ತಾ ಕೈ, ಸೋನಿಯಾ, ಇಂದಿರಾಗಾಂಧಿ ಹೆಸರು ಹೇಳಿದವರಿಗೆ ಒಂದು ನೂರು ರೂಗಳ ಬಹುಮಾನ ಕೊಡುತ್ತಿದ್ದಾರೆ. (ಇದು ಚುನಾವಣಾ ಅಡ್ವಾನ್ಸ್ ಇರಬಹುದೆ) ಭರ್ಜರಿ ಭಾಷಣ ಮಾಡುತ್ತಿದ್ದಾರೆ. 'ಅಧಿಕೃತ ವಿರೋಧ' ಪಕ್ಷದ ನಾಯಕರಾದ ಬಿಜೆಪಿಯ ಯಡಯೂರಪ್ಪ, ಜಗದೀಶ್ ಶೆಟ್ಟರ್, ಬಸವರಾಜಪಾಟೀಲ್ ಸೇಡಂ, ಅನಂತಕುಮಾರ್ ಮುಂತಾದವರು ಸುಮ್ಮನೆ ಕುಂತಿಲ್ಲ. ಸಂಘ ಪರಿವಾರದವರು ಊರು-ಕೇರಿಗಳಲ್ಲಿ ಕೋಮು ವ್ಯಾಜ್ಯ ಹಚ್ಚುತ್ತಿದ್ದರೆ, ಹೊತ್ತಿಕೊಂಡ ಬೆಂಕಿಗೆ ಮೈ ಕಾಯಿಸಲು ಬಿಜೆಪಿ ನಾಯಕ ಗಣ ಓಡಾಡುತ್ತಿದೆ. ಪದಾಧಿಕಾರಿಗಳ ಸಭೆ, ಸಂಸ್ಥಾಪಕರ ದಿನಾಚರಣೆ ಕೇಂದ್ರದ ಸಚಿವರು ಸಿನೆಮಾ ನಟರಾಗಿದ್ದ ಶತೃಘ್ನ ಸಿನ್ಹರಂತವರು ಕೈಬೀಸಿ ಹೋಗಿದ್ದಾರೆ. ಎಂದೂ ಬ್ರಿಟೀಷರ ವಿರುದ್ಧ ಚಕಾರವೆತ್ತದ, ಸಹಕಾರ ನೀಡಿದ ಇಂದೂ ಅಮೇರಿಕದ ಹೊಗಳು ಭಟ್ಟರಾದ ಬಿಜೆಪಿ ಜನಸಂಘದ ವಾರಸುದಾರರು ಶಂಕರ ಮೂರ್ತಿಯವರ ಮೂಲಕ ಟಿಪ್ಪುಸುಲ್ತಾನರ ದೇಶಪ್ರೇಮವನ್ನು ಪ್ರಶ್ನಿಸಲು ಹಚ್ಚಿದ್ದರೆ. ದೇಶದ್ರೋಹಿಗಳು ದೇಶಪ್ರೇಮದ ವಾಗ್ದಾನದಿಂದ ಅವರ ಅಜ್ಞಾನ ಮತ್ತು ಕುರುಡು ದ್ವೇಶ ಮತ್ತೆ ಹೊರಬಂದಿದೆ. ಇನ್ನೂ ಜನತಾದಳದವರೆ ಕೆಲವು ಮಾಜಿಗಳನ್ನು ಪಕ್ಷಕ್ಕೆ ಸೇರಿಸಿಕೊಳ್ಳುತ್ತಾ ವಿಲೀನದ ವಿಳಂಬದಲ್ಲಿ ಸುಸ್ತಾಗುತ್ತಿದ್ದಾರೆ. ಜನರ ಭಾದೆಗಳಿಗೆ ಧ್ವನಿಕೊಡದೆ ವಿಲೀನದ ಮಾತುಕತೆಯಲ್ಲಿ ಕೈ ಚಾಚುವುದೇ ಪ್ರಮುಖವಾಗಿದೆ. ಅಂತೂ ಎಲ್ಲರೂ ಸಿದ್ಧರಾಗುತ್ತಿದ್ದಾರೆ. ಖಾದಿಗೆ, ಖಾವಿಗೆ ಖದರು ಬರುತ್ತಿದೆ. ಎಲ್ಲರ ಕಣ್ಣು, ಕಾಲು, ಬಾಯಿ, ಮುಂದಿನ ವರ್ಷ ನಡೆಯಲಿರುವ ಚುನಾವಣೆಗಳಿಗೆ ತಾಲೀಮು ಆರಂಭಗೊಂಡಿದೆ.



'ಇದು ಚುನಾವಣೆಯ ಮೇಲೆ ಕಣ್ಣಿರಿಸಿದ ಬಜೆಟ್' ಎಂದು ಟೀಕಿಸುವವರಿಗೆ ಉತ್ತರ ಹೇಳುತ್ತಾ ವಿಧಾನಸಭೆಯಲ್ಲಿ ಎಸ್.ಎಂ.ಕೃಷ್ಣರವರು "ಹೌದು ನಾನೇನು ಖಾದಿ ತೊಟ್ಟ ಸನ್ಯಾಸಿಯಲ್ಲ' ಎಂದಿದ್ದಾರೆ. ಬಜೆಟ್‌ನೊಂದಿಗೆ ಚುನಾವಣಾ ತಯಾರಿ ಯಾರಿಗೂ ಎದ್ದು ಕಾಣುವಂತಹದ್ದು. ವಿಶ್ವ ಬ್ಯಾಂಕ್ ನಿರ್ದೇಶನಗಳ ಜಾರಿಯತ್ತ ಸಾಗಿರುವ ಬಜೆಟ್, ಬಹುತೇಕ ಇಂಜಿನಿಯರಿಂಗ್ ದಾರಾಳ ಅಧ್ಯತೆ, ವಿದ್ಯುತ್ ಕ್ಷೇತ್ರದ ಖಾಸಗೀಕರಣ ಹಾಗೂ ದರಗಳ ಹೆಚ್ಚಳದಂತಹ ಆಘಾತಕಾರಿ ಗಾಳಿಗಳನ್ನು ಮುಚ್ಚಿಕೊಳ್ಳಲು ಪಂಚಾಯತ್ ಸಂಸ್ಥೆಗಳಿಗೆ ಒಂದಷ್ಟು ಹಣ, ಮಹಿಳಾ ವಿಶ್ವವಿದ್ಯಾಲಯ ಸ್ಥಾಪನೆ (ವಿಜಾಪುರದಲ್ಲಿ), ಕಾವೇರಿ ನಿಗಮಕ್ಕೆ ಒಂದು ಸಾವಿರ ಕೋಟಿ ರೂ ನೀಡಿಕೆ ಬರವಸೆ, ಕಾಲುವೆ ನಿರ್ಮಾಣಕ್ಕಲ್ಲ ಬದಲು ರಿಪೇರಿಗೆ ನೂರಾರು ಕೋಟಿ ರೂಪಾಯಿಗಳು, ಅಲ್ಪಸಂಖ್ಯಾತರಿಗಾಗಿ ಶಾದಿ ಮಹಲ್ ನಿರ್ಮಾಣ, ಉರ್ದುಶಾಲೆಗಳ ಆರಂಭ, ವಿಚ್ಛೇದಿತ ಮುಸ್ಲಿಂ ಮಹಿಳೆಯರಿಗೆ ರೂ. 500 ಮಾಶಾಸನ, ದಲಿತರಿಗಾಗಿ ಅಂಬೇಡ್ಕರ್ ಭವನಗಳು, ಹಾಸ್ಟೆಲ್‌ಗಳ ಆರಂಭ, ದಲಿತ ಮಹಿಳೆಯರಿಗೆ ಹೊಲಿಗೆ ತರಬೇತಿ, "ಕೌಸಲ್ಯ"ದ ಆರಂಭ, ಇಂತಹ ಹಲವಾರು 'ಸ್ಕೀಂ'ಗಳನ್ನು ಪ್ರಕಟಿಸುತ್ತಾ ಹೊರಟಿದ್ದಾರೆ. ಹೀಗೆ ಒಂದೆಡೆ ಜನಪ್ರಿಯ ಯೋಜನೆಗಳ ಪ್ರಕಟಣೆ ಮಾಡುವ, ಇನ್ನೊಂದೆಡೆ ಸಂಘಟನಾತ್ಮಕ ಸಿದ್ಧತೆಗೆ ಇಳಿದಿದ್ದಾರೆ. ಕಾಸಿಲ್ಲದೆ ಕಾಂಗ್ರೆಸ್ ಯಂತ್ರ ಮುಂದೆ ಸಾಗುವುದಿಲ್ಲ ಎಂಬುದು ಕೃಷ್ಣ, ಪೂಜಾರಿಗೆ ಚೆನ್ನಾಗಿ ಗೊತ್ತು. ಹಾಗಾಗಿಯೇ ಕಾವೇರಿ ನಿಗಮದ ಹಣ, ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಮತ್ತು ಕಾಲುವೆ ಕಾವೇರಿಯಂತಹ ಕಾಮಗಾರಿ ಕಂಟ್ರಾಕ್ಟ್ ಗಳನ್ನು ಕಾಂಗ್ರೆಸ್‌ನ ಹಿರಿ-ಕಿರಿ ಪುಡಾರಿಗಳಿಗೆ ಹಣತೋರಿಸುವ ಮೂಲಕ 'ಕಾರ್ಯಕರ್ತರನ್ನು' ಸಂತುಷ್ಟಗೊಳಿಸಿ, ಸಜ್ಜುಗೊಳಿಸುವ, ಸಂಘಟನಾ ಯಂತ್ರಕ್ಕೆ ಕೀಲೆಣ್ಣೆ ಬಿಡುತ್ತಿದ್ದಾರೆ. ಕಾವೇರಿ ನಿಗಮಕ್ಕೆ ಸಾವಿರ ಕೋಟಿ ಎಂಬುದು ಸಿಟ್ಟಿಗೆದ್ದಿರುವ ಆ ಭಾಗದ ಜನರಿಗೆ ಸಂತೈಸುವ ಪ್ರಯತ್ನ. ಹೀಗೆ ಚುನಾವಣಾ ಕಾರ್ಯತಂತ್ರಕ್ಕಾಗಿ ಚುನಾವಣಾ ಯಂತ್ರ ಸಿದ್ಧತೆ.

ಇದನ್ನು ಹೊಂದಿಕೊಂಡು ಜನಾರ್ಧನ್ ಪೂಜಾರಿಯವರು ರಾಜ್ಯದಾದ್ಯಂತ ಓಡಾಡುತ್ತಿದ್ದಾರೆ.

ಜನತಾದಳ(ಎಸ್) ಮತ್ತು ಅಖಿಲ ಭಾರತ ಜನತಾದಳದ ಬಣಗಳು ಕೆಲ ತಿಂಗಳ ಹಿಂದೆ ಬಹಳ ಚುರುಕಿನಿಂದ ಓಡಾಡಿದರು. ಜೆ.ಡಿ.(ಎಸ್) ಗೆ ಉತ್ತರ ಕರ್ನಾಟಕದಲ್ಲಿ ಒಳ್ಳೆ ಪ್ರತಿಕ್ರಿಯೆ ದೊರಕಿತ್ತು. ವಿಲೀನವನ್ನು ದೂರದ ಮಾತು ಎಂದು ಮನಗಂಡ ಅವರು ಸ್ವಂತ ಶಕ್ತಿಯ ಕ್ರೋಢೀಕರಣಕ್ಕೆ ಇಳಿದಿದ್ದರು. ಆದರೆ ಈಚಿನ ಅವಧಿಯಲ್ಲಿ ಅಂತಹ ಯತ್ನಗಳು ಅಷ್ಟಾಗಿ ಕಾಣುತ್ತಿಲ್ಲ. ಮತ್ತೆ ವಿಲೀನದ ಮಾತುಗಳಿಗೆ ಚಾಲನೆ ಬಂತು, ಸುತ್ತೂರು ಮಠದ ಸ್ವಾಮಿಗಳು ಬಿಜೆಪಿಯಲ್ಲಿರುವ ರಾಜಶೇಖರ ಮೂರ್ತಿಗಳು ಈ ಸುತ್ತಿನ ಮುಖ್ಯಸ್ಥರು. ಆದರೆ ಏನೂ ಆಗಲಿಲ್ಲ. ಈಗೀಗಂತೂ ವಿಲೀನದ ಚರ್ಚೆಗಳು ಆರಂಭವಾದಾಗಲೆಲ್ಲಾ ಜನತಾದಳ ದ್ಯೋತಕವೆಂಬಂತೆ ಜನರ ಕಣ್ಣಿಗೆ ಕಾಣಿಸುತ್ತಿದೆ.

ಆದರೆ ಬಿಜೆಪಿ ತನ್ನ ತಂತ್ರಗಳನ್ನು ಕೈಬಿಟ್ಟಿಲ್ಲ, ಆರ್.ಎಸ್.ಎಸ್. ಮುಖ್ಯವಾಗಿ ವಿಶ್ವಹಿಂದೂ ಪರಿಷತ್ ಬಜರಂಗದಳದ ಸಂಘಟನೆಗಳಿಗೆ ಹೆಚ್ಚಿನ ಒತ್ತು ನೀಡುತ್ತಿದೆ. ಚುನಾವಣಾ ಪೂರ್ವಬಾವಿಯಾಗಿ ಮಂಗಳೂರು, ಹುಬ್ಬಳ್ಳಿ ಮುಂತಾದೆಡೆ ಭಾರೀ ಪ್ರಮಾಣದಲ್ಲಿ ಹಿಂದೂ ಸಮಾವೋತ್ಸವ ನಡೆಸದೆ ತೊಗಾಡಿಯಾ ಭಾಗವಹಿಸಿ ಉದ್ರೇಕಕಾರಿ ಭಾಷಣ ಮಾಡಿದ್ದಾರೆ. ಅಲ್ಪಸಂಖ್ಯಾತರಲ್ಲಿ ಭಯದ ವಾತಾವರಣ ಸೃಷ್ಟಿಸಿದ್ದಾರೆ. ಇನ್ನು ಗ್ರಾಮಾಂತರಕ್ಕೂ, ಕೋಮುಗಲಭೆ ಹಬ್ಬಿಸುವ ಪ್ರಯತ್ನ ನಡೆದೇ ಇದೆ. ಶ್ರೀರಂಗಪಟ್ಟಣದ ಮಸೀದಿ, ಬಾಬಾಬುಡನ್ ಗಿರಿ, ಕಾರವಾರದ ಬಳಿಯ ಅಂಜುದ್ವೀಪದ ಚರ್ಚ್ ದುರ್ಗಾದೇವಿ ಮಂದಿರವೆಂದು ಅಪಪ್ರಚಾರ ಆರಂಭಗೊಂಡು ಪ್ರಕ್ಷುಬ್ಧ ಸ್ಥಿತಿ ಹುಟ್ಟಿ ಹಾಕುತ್ತಿದ್ದಾರೆ. ಬಿಜೆಪಿಯ ನಾಯಕರು ಇದಕ್ಕೆ ಧ್ವನಿಗೂಡಿಸಿದ್ದಾರೆ. ಸದ್ಯಕ್ಕ, ಶಾಖೆಗಳ ರಚನೆಗೂ ಇಳಿದಿದ್ದಾರೆ.

ಇಷ್ಟೆಲ್ಲಾ ಭರಾಟೆಗಳು ನಡೆದಿದ್ದರೂ ಜನರ ನಿತ್ಯದ ಬವಣೆ ರಾಜ್ಯವನ್ನು ರಾಷ್ಟ್ರವನ್ನು ಬಾಧಿಸುವಂತಹ ಸಮಸ್ಯೆಗಳೆದುರು ಕಾಂಗ್ರೆಸ್, ಬಿಜೆಪಿ ಚಕಾರವೆತ್ತಿಲ್ಲ. ಜನತಾದಳ(ಎಸ್) ಇತರೆ ಬಣಗಳೂ ಒಂದು ಚಳುವಳಿ ರೂಪಿಸಲಲು ಮಂದಾಗುತ್ತಿಲ್ಲ. ಸಿಪಿಐ(ಎಂ)ನ ಪ್ರಸ್ತಾವಗಳನ್ನು ಗಂಭೀರವಾಗಿ ತೆಗೆದುಕೊಂಡಿಲ್ಲ. ಚುನಾವಣಾ ಸಿದ್ಧತೆ ಎಂದರೆ ಬೇರೆಯೇ ಎಂಬುದು, ಅವರಿವರ ಅತೃಪ್ತಿಯನ್ನು ಬಳಸಿಕೊಳ್ಳುವುದು ಎಂಬುದು ಲೆಕ್ಕಾಚಾರವಿದ್ದಂತಿದೆ.

ಇಂತಹ ಸಂದರ್ಭದಲ್ಲಿ ಸಿಪಿಐ(ಎಂ) ರಾಜ್ಯದ ಕೇಂದ್ರ ಸರ್ಕಾರದ ಬಜೆಟ್‌ಗಳ ಭೀಕರ ಧಾಳಿಗಳನ್ನು ಪ್ರತಿಭಟಿಸಿ ಪ್ರತಿಭಟನಾ ಕಾರ್ಯಕ್ರಮ ಜನ ಜಾಗೃತಿ ಜಾಥಾಗಳನ್ನು ನಡೆಸಿದೆ. ವಿದ್ಯುತ್ ಕ್ಷೇತ್ರದ ಸುಧಾರಣೆಗಳೆಂಬ ವಿನಾಶದ ವಿರುದ್ಧ ಸತತ ಚಳುವಳಿ ಹೂಡಿದೆ. ಇನ್ನೂ ಹೋರಾಟಗಳು ವಿಸ್ತೃತವಾಗಬೇಕಿದೆ. ಸೂಕ್ಷ್ಮ ಸಮಸ್ಯೆಗಳೆದುರು ಅಷ್ಟಿಷ್ಟಾದರೂ ಹೋರಾಡುತ್ತಿರುವುದು ಎಡ ಪಕ್ಷಗಳೇ.

ಈ ನಡುವೆ ರಾಜ್ಯದಲ್ಲಿ ಮುಖ್ಯವಾಗಿ ಮೈಸೂರು, ಮಂಡ್ಯ ಪ್ರದೇಶಗಳಲ್ಲಿ ಬಿ.ಎಸ್.ಪಿ. (ಬಹುಜನ ಸಮಾಜಪಕ್ಷ)ಯ ಚುನಾವಣೆಗಳು ವಿದ್ಯಾರ್ಥಿ ಯುವಜನರ ನಡುವೆ ಇದಕ್ಕಿದ್ದಂತೆ ಜಾಸ್ತಿಯಾಗಿದೆ. ವಿಪರೀತ ಹಣದ ಖರ್ಚುಗಳು ನಡೆದಿವೆ. ಅವರ ಒಂದೇ ಪ್ರಚಾರ ಕಮ್ಯುನಿಸ್ಟ್ ವಿರೋಧ. ಶೋಷಿತ ಜನರ ಹೋರಾಟ ದುರ್ಬಲಗೊಳಿಸುವಂತಹ ಚಟುವಟಿಕೆಗಳು. ಇದ್ದು ಗಮನಿಬೇಕಾಗಿದೆ.

ನೀರಿನ ಬವಣೆ ನೀಗಿತೆ?

ಬಿಸಿಲು ಕಣ್ಣಿಗೆ ಹರಕೊಂಡ ಹೋರಿಯಂಗೆ ಅಂಕೆಗೆ ಸಿಗದೇ ಹುಚ್ಚಾಪಟ್ಟೆ ಓಡುತ್ತಲೇ ಇದೆ. ಉತ್ತರ ಕರ್ನಾಟಕದ ಎಲ್ಲಾ ಜಿಲ್ಲೆಗಳು ಬಿಸಿಲಿನ ಅಟ್ಟಹಾಸದಲ್ಲಿ ಬೇಯುತ್ತಿವೆ. ಹಾಸ್ಯ ಲೇಖಕ, ಬಳ್ಳಾರಿಯ ಬೀಚಿಯವರು ಹೇಳಿದಂತೆ 'ನಮ್ಮಲ್ಲಿ ಇರುವ ಮೂರು ಕಾಲವೂ ಒಂದೇ, ಬಿಸಿಲು, ಬಿರುಬಿಸಿಲು, ಕಡು ಬಿಸಿಲು' ಎಂಬಂತಾಗಿ ಎಲ್ಲವೂ ಏಕಾಏಕಿ ಬೆಸೆದುಕೊಂಡಿದೆ. ಕರಾವಳಿ ತೀರವೂ ಈ ಸ್ಥಿತಿಗೆ ಹೊರತೇನಲ್ಲ. ರಾತ್ರಿ ಬೀಸುವ ಗಾಳಿಯೂ ಬಿಸಿಯುಸಿರೇ.

ಇದು ಹೇಳಿಕೇಳಿ ಬರಗಾಲದ ವರುಷ, ಹಿಂದಿನದ್ದು ಅಷ್ಟೇ. ಹೀಗಾಗಿ ವಾತಾವರಣವೂ ಕಲುಷಿತ. ಅಲರ್ಜಿಯ ರೋಗಗಳೂ ಹೆಚ್ಚಳ. ಬರಸಿಡಿಲು ಬಡಿದಂತಹ ಸುದ್ದಿಗಳೂ ಬಿತ್ತರಗೊಳ್ಳುತ್ತಿವೆ. ಮುಂದಿನ ವರುಷವೂ ಮಳೆಯಿಲ್ಲ ಎಂಬುದು ಬರಗಾಲವೇ ಬರಗಾಲ ಎಂದು. ಈಗಾಗಲೇ ಜನ-ಜಾನುವಾರು ನೀರು-ಮೇವಿಲ್ಲದೆ ತತ್ತರಿಸುತ್ತಿವೆ. ಬೆಳೆಯೂ ಕೈಗೆ ಹತ್ತದೇ ರೈತರೂ ಕಂಗಾಲಾಗಿದ್ದಾರೆ. ಕೂಲಿಕಾರರು ಕಳೆದುಕೊಳ್ಳಲು ಪ್ರಾಣವೊಂದೇ ಇರುವುದರಿಂದ ಎಲ್ಲಾದರೂ, ಎಂತಹದ್ದೋ ಒಂದು ಕೆಲಸ, ಸ್ವಾರೆಗಂಜಿ ಸಿಕ್ಕೀತೆಂದು ವಲಸೆ ಹೋಗುತ್ತಲೇ ತಿರುಗುತ್ತಾರೆ. ಈ ತಿಂಗಳೊಪ್ಪತ್ತಿನಿಂದ ಮಳೆಯಾಗದಿದ್ದರೆ ಬೋರ್‌ವೆಲ್‌ಗಳೂ ಬತ್ತಲಿವೆ. ಕುಡಿವ ನೀರೂ ಇಲ್ಲವಾಗಲಿದೆ ಎಂಬ ಅಳಲು ಬಹುತೇಕ ಕಡೆಗಿದೆ.



ಕುಡಿವ ನೀರಿನ ಬವಣೆ ಗ್ರಾಮಾಂತರದಲ್ಲಿ ಹೇಳತೀರದು. ಒಂದೊಂದು ಕಡೆಯ ಪ್ರಸಂಗಗಳೂ ಕಿರಿಕಿರಿಯೆನಿಸುವಂತೆ ಬರುವಂತಹವು. ನೀರು ಹುಡುಕಿ ದೂರ ದೂರ ತಿರುಗಬೇಕಾಗಿದೆ. ಪಟ್ಟಣಗಳಲ್ಲಿ ವಾರದಲ್ಲಿ ಎರಡು ಸಲ ಮಾತ್ರ ಪೂರೈಕೆಯಾಗುತ್ತಿದೆ. ಈ ನೀರಿಗೂ ಮೈಲುದ್ದದ ಸಾಲುಗಳು, ಜಗಳಗಳು. ಪೋಲೀಸ್ ಮೆಟ್ಟಲು ಹತ್ತಿದ ಪ್ರಕರಣಗಳೂ ಇವೆ.

ಅಂತೂ ಶಾಸಕರು ಬೆಂಗಳೂರಿನ ಹವಾಮಾನದಿಂದ ತಮ್ಮೂರಿನ ಹವಾಮಾನಕ್ಕೆ ಪ್ರವೇಶಿಸಿದ ಬಳಿಕ ಬಿಸಿತಾಗಿ ವಿಧಾನಸೌಧದಲ್ಲಿಯೂ ಸರ್ಕಾರದೆದುರು ಪ್ರಸ್ತಾಪಿಸಿದ್ದಾರೆ. ಇದಕ್ಕೆ ಉತ್ತರಿಸಿದ ಮುಖ್ಯಮಂತ್ರಿಗಳು ಕುಡಿವ ನೀರು ಪೂರೈಕೆಗೆ ಬದ್ಧವೆಂದೂ ಅದಕ್ಕಾಗಿ 100 ಕೋಟಿ ಹಣ ಒದಗಿಸಿದ್ದಾಗಿ ಹೇಳಿ ಪ್ರಚಾರ ಗಿಟ್ಟಿಸಿದರು.

156 ತಾಲೂಕುಗಳಲ್ಲಿ ಸಮಸ್ಯೆ ತೀವ್ರವಿದ್ದು ತಾಲೂಕಿಗೆ 15 ಲಕ್ಷ ರೂ.ಗಳನ್ನು ಹಂಚಿದರು. ಆದರೆ ಈ ಸಮಸ್ಯೆ ತೀವ್ರತೆ ಗಮನಿಸಿದರೆ ಪೂರ್ಣ ಹಣ ಸದ್ಬಳಕೆಯಾದರೂ ಏನೂ ಸಾಲದು. ಕಂಟ್ರಾಕ್ಟರದಾರರೂ, ಅಧಿಕಾರಿಗಳು, ಪುಡಾರಿ ಪುಣ್ಯ ಪುರುಷರು ತಿಂದು-ಕುಡಿದು ಹೊರಬಿಟ್ಟ ಮೇಲೆ ಉಳಿಯುವುದಾದರೂ ವಿಷ್ಟು? ಜನರ ಪಾಲಿಗೆ ಹಂಚಿದ್ದೇ ಹಳ್ಳ, ಉಳಿದಿದ್ದೇ ತೀರ್ಥವಷ್ಟೇ. ಆದ್ದರಿಂದ ಸರ್ಕಾರ ಅರೆಬರೆ ಯತ್ನ ಮಾಡದೆ, ಪೂರ್ಣ ಪ್ರಮಾಣದಲ್ಲಿ ಸಮರೋಪಾದಿಯಲ್ಲಿ ಇಳಿಯಬೇಕು. ಜನ-ದನ ಕರುಗಳಿಗೂ ಮೇವು-ನೀರು ಪೂರೈಸಬೇಕು.

ಪುಟ 10 ಕ್ಕೆ

ಸಿಇಟಿ ವ್ಯವಸ್ಥೆ ಮುಂದುವರೆದ ಬಿಕ್ಕಟ್ಟು: ವಿದ್ಯಾರ್ಥಿ-ಪೋಷಕರ ಪ್ರತಿಭಟನೆ

ಏಪ್ರಿಲ್ 17ನೇ ತಾರೀಖು ಕರೆದಿದ್ದ ಅಂತಿಮ ಸುತ್ತಿನ ಮಾತುಕತೆಯೂ ಮುರಿದುಬಿದ್ದಿದೆ. ಖಾಸಗಿ ವೃತ್ತಿಶಿಕ್ಷಣ ಸಂಸ್ಥೆಗಳ ಮಾಲೀಕರು ಮತ್ತೆ ತಮ್ಮ ಲಾಭಕೋರ ನಿಲುವಿಗೆ ಅಂಟಿಕೊಂಡು ಕುಳಿತಿದ್ದರಿಂದ ಸಮಸ್ಯೆಯ ಪರಿಹಾರದ ದಿಕ್ಕಿನಲ್ಲಿ ಯಾವ ತೀರ್ಮಾನಕ್ಕೂ ಬರಲು ಸಾಧ್ಯವಾಗಿಲ್ಲ. ಈಗಾಗಲೇ ಹೇಳಿರುವಂತೆ ಸರ್ಕಾರವೂ ಯಾವುದೇ ದೃಢ ನಿರ್ಧಾರ ಕೈಗೊಳ್ಳಲು ಮುಂದಾಗುತ್ತಿಲ್ಲ. 17 ರಂದು ನಡೆದ ಸಭೆಯಲ್ಲಿ ದ್ದಂತಹ ಆಡಳಿತ ಮಂಡಳಿ ಪ್ರತಿನಿದಿಗಳು ಮತ್ತು ಸರ್ಕಾರದ ಪ್ರತಿನಿಧಿಗಳನ್ನು ಗಮನಿಸಿದರೆ ಸರ್ಕಾರ ಎಷ್ಟು ದೃಢವಾಗಿ ಹೆಜ್ಜೆಯಿಡಬಹುದು ಎಂದು ಅಂದಾಜು ಮಾಡಬಹುದು. ಆಡಳಿತ ಮಂಡಳಿಯ ಪ್ರತಿನಿಧಿಗಳಾಗಿ ಇದ್ದವರು ಕಾಂಗ್ರೆಸ್ಸಿನ ಹಿರಿಯ ಮುಖಂಡ, ಹಾಲಿ ಲೋಕಸಭಾ ಸದಸ್ಯ ಶ್ಯಾಮನೂರು ಶಿವಶಂಕರಪ್ಪ, ಕಾಂಗ್ರೆಸ್ಸಿನ ಲೋಕಸಭಾ ಸದಸ್ಯ ಆರ್.ಎಲ್.ಜಾಲಪ್ಪ, ಅಭ್ಯರ್ಥಿ ಡಿ.ಪ್ರೇಮಚಂದ್ರಸಾಗರ, ಪ್ರಭಾಕರ ಕೋರೆ ಮುಂತಾದವರು ಸರ್ಕಾರದ ಪರವಾಗಿ ಉನ್ನತ ಶಿಕ್ಷಣ ಸಚಿವ, ಸಿದ್ದಾರ್ಥ ಶಿಕ್ಷಣ ಸಂಸ್ಥೆಗಳ ಮಾಲೀಕ ಜಿ.ಪರಮೇಶ್ವರ್, ಡಿ.ಬಿ. ಚಂದ್ರೇಗೌಡ ಇತರರು, ಅಂದರೆ ಇಂತಹ ಸಂಯೋಜನೆ ಯಿಂದ ಪ್ರಬಲ ಜನಾಂದೋಲನ ವಾಗದೇ ಉತ್ತಮ ತೀರ್ಮಾನ ನೀರಿಕ್ಷಿಸುವುದು ತಪ್ಪಾಗುತ್ತದೆ.



ಇಂಜನಿಯರಿಂಗ್‌ನಲ್ಲಿ ಶೇ.50 ಸೀಟುಗಳನ್ನು ಬಿಟ್ಟುಕೊಡುತ್ತೇವೆ ಎಂದು ಹೇಳಿದ್ದ ಆಡಳಿತ ಮಂಡಳಿಗಳು ಮತ್ತೆ ರಾಗ ಬದಲಾಯಿಸಿವೆ. ಮೆಡಿಕಲ್ ಶಿಕ್ಷಣದಲ್ಲಿ ಶೇ.20ಕ್ಕಿಂತ ಹೆಚ್ಚಿನ ಸೀಟುಗಳನ್ನು ಬಿಟ್ಟುಕೊಡುವುದಿಲ್ಲ ಎಂದು ದಮಕಿ ಹಾಕಿ, 3 ಲಕ್ಷ ಶುಲ್ಕ ನೀಡುವುದಾದರೆ ಎಲ್ಲಾ ಸೀಟುಗಳನ್ನು ಸರ್ಕಾರಕ್ಕೆ ಬಿಟ್ಟುಕೊಡುತ್ತೇವೆ ಎಂದು ಪ್ರಭಾಕರ ಕೊರೆ ಗೇಲಿ ಮಾಡಿದ್ದಾರೆ.

ಆದರೆ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಆಧಾರದಲ್ಲೇ ಸಿಇಟಿ ವ್ಯವಸ್ಥೆಯನ್ನು ಉಳಿಸಿಕೊಳ್ಳಲು, ಖಾಸಗಿ ಶಿಕ್ಷಣ ಸಂಸ್ಥೆಗಳ ಲೂಟಿಯನ್ನು ತಡೆಯಲು, ಶುಲ್ಕ ನಿಗದಿಪಡಿಸಲು ಸಾಕಷ್ಟು ಅವಕಾಶಗಳಿವೆ.

ಮೊದಲನೆಯದಾಗಿ, ಕೇವಲ ಅನುದಾನ ರಹಿತ ಖಾಸಗಿ ಅಲ್ಪಸಂಖ್ಯಾತ (ಭಾಷಾ-ಧಾರ್ಮಿಕ) ಶಿಕ್ಷಣ ಸಂಸ್ಥೆಗಳನ್ನು ಆಧರಿಸಿ ಈ ತೀರ್ಪನ್ನು ನೀಡಲಾಗಿದೆ. ಆದ್ದರಿಂದ ಉಳಿದಂತೆ ಖಾಸಗಿ ಅನುದಾನರಹಿತ ಮತ್ತು ಅನುದಾನಿತ ಶಿಕ್ಷಣ ಸಂಸ್ಥೆಗಳು ಈ ತೀರ್ಪನ್ನು ತಮ್ಮ ಅನುಕೂಲಕ್ಕೆ ಬಳಸಿಕೊಳ್ಳಲು ರಾಜ್ಯ ಸರ್ಕಾರ ಅವಕಾಶ ನೀಡಬಾರದು.

ಎರಡನೆಯದಾಗಿ, ಸುಪ್ರಿಂ ಕೋರ್ಟು ತನ್ನ ತೀರ್ಪಿನಲ್ಲಿ ಅತ್ಯಂತ ಸ್ಪಷ್ಟವಾಗಿ ಕ್ಯಾಪಿಟೇಷನ್ ಶುಲ್ಕ ತೆಗೆದು ಕೊಳ್ಳಬಾರದು, ಮತ್ತು ಶಿಕ್ಷಣ ಸಂಸ್ಥೆಗಳನ್ನು ನಡೆಸುವುದು ಲಾಭದ ಉದ್ದೇಶಕ್ಕಲ್ಲ ಎಂದು ಹೇಳಿದೆ. ಆದ್ದರಿಂದ ಈ ಅವಕಾಶವನ್ನು ಬಳಸಿ ಕೊಂಡು ರಾಜ್ಯ ಸರ್ಕಾರವು ವೃತ್ತಿಪರ ಸಂಸ್ಥೆಗಳು ವಸೂಲಿ ಮಾಡುತ್ತಿರುವ ಕ್ಯಾಪಿಟೇಷನ್ ಶುಲ್ಕಗಳನ್ನು ಸಂಪೂರ್ಣವಾಗಿ ನಿಷೇದಿಸಿ, ಕಾನೂನು ಬಾಹಿರವಾಗಿ ಕ್ಯಾಪಿಟೇಷನ್, ಡೊನೇಷನ್ ವಸೂಲಿ ಮಾಡುವ ಶಿಕ್ಷಣ ಸಂಸೆಗಳನ್ನು ಅನುಮತಿ ರದ್ದುಪಡಿಸಬೇಕು. ಶುಲ್ಕವನ್ನು ನಿಗದಿಗೊಳಿಸುವ ಅಧಿಕಾರವನ್ನು ರಾಜ್ಯ ಸರ್ಕಾರಕ್ಕೆ ನೀಡಿರುವು ದರಿಂದ ಈ ಅವಕಾಶವನ್ನು ಬಳಸಿ ಈಗಿರುವ ಶುಲ್ಕ ಪದ್ದತಿಯನ್ನೇ ಮುಂದುವರೆಸಬೇಕು ಮತ್ತು ಗ್ರಾಮೀಣ, ಬಡ, ದಲಿತ ವಿದ್ಯಾರ್ಥಿಗಳಿಗೆ ಶುಲ್ಕಗಳನ್ನು ಮತ್ತಷ್ಟು ಕಡಿಮೆಗೊಳಿಸಬಹುದು. ಮೂರನೆಯದಾಗಿ,



ವಿದ್ಯಾರ್ಥಿಗಳನ್ನು ಕಡ್ಡಾಯವಾಗಿ 'ಮೆರಿಟ್' ಆಧಾರದಲ್ಲೇ ಆಯ್ಕೆ ಮಾಡಬೇಕು ಎಂದು ತೀರ್ಪಿನಲ್ಲಿ ಹೇಳಲಾಗಿದೆ. ಪ್ರತಿಯೊಂದೂ ಶಿಕ್ಷಣ ಸಂಸ್ಥೆಯು ಒಂದೊಂದು ಪರೀಕ್ಷೆ ನಡೆಸುವುದು ಪ್ರಾಯೋಗಿಕವಾಗಿ ಕಾರ್ಯಸಾದುವಲ್ಲವಾದ್ದರಿಂದ ಮತ್ತು ಇಂತಹ ವ್ಯವಸ್ಥೆಯು ವ್ಯಾಪಕ ದುರುಪಯೋಗದ ಸಾಧ್ಯತೆ ಯಿರುವುದರಿಂದ ಮೆರಿಟ್ ಅಳತೆಗೋಲಾಗಿ ಈಗಿರುವ ಪಿಯುಸಿ ಮತ್ತು ಸಿಇಟಿಯನ್ನು ಉಳಿಸಿ ಕೊಳ್ಳಬೇಕು. ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳಲ್ಲಿ ಕಡ್ಡಾಯವಾಗಿ ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಪ್ರವೇಶ ನೀಡುವಂತೆ ನೀತಿರೂಪಿಸಬೇಕು, ಈ ಸಂಸ್ಥೆಗಳಿಗೂ ವಿದ್ಯಾರ್ಥಿಗಳನ್ನು ಆಯ್ಕೆ ಮಾಡುವಾಗ ಸಿಇಟಿ ವ್ಯವಸ್ಥೆಯನ್ನೇ ಪರಿಣಾಮಕಾರಿಯಾಗಿ ಬಳಸಲು ಸಾಧ್ಯವಿದೆ.

ಸುಪ್ರಿಂ ಕೋರ್ಟಿನ ತೀರ್ಪಿನಿಂದ ಶಿಕ್ಷಣ, ವೃತ್ತಿಶಿಕ್ಷಣ ರಂಗದಲ್ಲಿ ಗೊಂದಲ ಮೂಡಿರುವುದು ನಿಜವಾದರೂ, ಖಾಸಗಿ ವೃತ್ತಿಪರ ಶಿಕ್ಷಣ ಸಂಸ್ಥೆಗಳು ಬಯಸುತ್ತಿರುವಂತೆ ಸರ್ಕಾರ ನಿಸ್ಸಹಾಯಕವಲ್ಲ, ಆದರೆ ದೃಢ ತೀರ್ಮಾನ ಕೈಗೊಳ್ಳಲು ಸರ್ಕಾರಕ್ಕೆ ರಾಜಕೀಯ ಬದ್ಧತೆ ಬೇಕು, ಆದರೆ ಈ ಸರ್ಕಾರಕ್ಕೆ ಅಂತಹ ಬದ್ಧತೆಯಿಲ್ಲ.

ಆದ್ದರಿಂದ ಈ ಸರ್ಕಾರದ ಮಂದಗಾಮಿ ದೋರಣೆ ಮತ್ತು ಖಾಸಗಿ ವೃತ್ತಿಪರ ಶಿಕ್ಷಣ ಸಂಸ್ಥೆಗಳ ಲಾಭಕೋರತನದ ಜೊತೆ ಶಾಮೀಲಾಗಿ ದೃಢ ತೀರ್ಮಾನ ಕೈಗೊಳ್ಳಲು ಮೀನಾಮೇಷ ಎಣಿಸುತ್ತಿರುವ ನೀತಿ ವಿರುದ್ದ ಏಪ್ರಿಲ್ 17 ರಂದು ವಿದ್ಯಾರ್ಥಿ- ಪೋಷಕರು ಪ್ರತಿಭಟನೆ ನಡೆಸಿ, ಡೊನೇಷನ್ ಭೂತದಹಿಸಿದರು. ಮೈಸೂರು ಬ್ಯಾಂಕ್ ವೃತ್ತದಲ್ಲಿ ಸೇರಿದ್ದ ಎಸ್.ಎಫ್.ಐ., ಡಿ.ವೈ.ಎಫ್.ಐ, ಜೆ.ಎಮ್.ಎಸ್, ಎ.ಐ.ಎಲ್.ಯು, ಎ.ಐ.ಐ.ಇ.ಎ, ಬಿ.ಆರ್.ಜಿ.ಐ.ಇ.ಎ ಸಂಘಟನೆಯ ಕಾರ್ಯಕರ್ತರು ಸರ್ಕಾರ ಮತ್ತು ಆಡಳಿತ ಮಂಡಳಿಗಳ ವಿರುದ್ಧ ಘೋಷಣೆ ಕೂಗಿ ಡೊನೇಷನ್ ಭೂತವನ್ನು ದಹನ ಮಾಡಿದರು.

ಪ್ರತಿಭಟನಾಕಾರರನ್ನು ಉದ್ದೇಶಿಸಿ ಎಸ್.ಎಫ್.ಐ.ನ ಕೃಷ್ಣೇಗೌಡ.ಟಿ.ಎಲ್, ಲಕ್ಷ್ಮಿ ಕೆ.ಎಸ್, ಎ.ಎಲ್.ಯು ಸಂಘದ ಕೆ.ಆರ್.ವೆಂಕಟೇಶ್ ಗೌಡ,ಜೆ.ಎಂ.ಎಸ್. ಪ್ರಭ ಎಲ್.ಐ.ಸಿ.ಯ ನಾಗರಾಜ್, ಮಾತನಾಡಿದರು. ಬಿ.ರಾಜಶೇಖರ್ ಮೂರ್ತಿ ನಿರೂಪಿಸಿದರು. ನಂತರ ನಿಯೋಗವೊಂದು ತೆರಳಿ ಶಿಕ್ಷಣ ಸಚಿವ ಮತ್ತು ಕಾನೂನು ಸಚಿವರಿಗೆ ಮನವಿ ಪತ್ರ ಸಲ್ಲಿಸಿತು.

ವರದಿ **ಟಿ.ಎನ್. ಕೃಷ್ಣೇಗೌಡ.**

ಅಂಗನವಾಡಿ ನೌಕರರ ಅನಿರ್ಧಿಷ್ಟ ಸಾಮೂಹಿಕ ಧರಣಿ ಸತ್ಯಾಗ್ರಹ ಯಶಸ್ವಿ

ಕರ್ನಾಟಕ ರಾಜ್ಯದಲ್ಲಿ 80 ಸಾವಿರ ಅಂಗನ ವಾಡಿ ನೌಕರರು ಕಾರ್ಯ ನಿರ್ವಹಿಸುತ್ತಿದ್ದಾರೆ. 1975ರಿಂದಲೂ ಕಾರ್ಯ ನಿರ್ವಹಿಸುತ್ತಿರುವ ಇವರಿಗೆ ಐಸಿಡಿಎಸ್ ಮ್ಯಾನ್ಯುಯಲ್ ಪ್ರಕಾರ ನೇಮಕಾತಿಯಿದೆ. ಯಾವುದೇ ಸರ್ಕಾರ ಅಥವಾ ಆಡಳಿತ ಮಂಡಳಿಗಳು ನೇಮಕಾತಿ ಮಾಡಿದವರಿಗೆ ನಿವೃತ್ತಿ ಸೌಲಭ್ಯವನ್ನು ಅಥವಾ ನಿವೃತ್ತಿ ವಯಸ್ಸನ್ನು ನಿಗಧಿ ಮಾಡುವುದು ಕರ್ತವ್ಯವಲ್ಲವೇ? ಆದರೆ ನಮ್ಮ ಸರ್ಕಾರಗಳು ಅಂಗನವಾಡಿ ನೌಕರರು ಗೌರವಧನದ ಆಧಾರದಲ್ಲಿ ಕೆಲಸ ಮಾಡುವು ದರಿಂದ ಇವರಿಗೆ ನಿವೃತ್ತಿಯಿಲ್ಲ. ನಿವೃತ್ತಿಯಿಲ್ಲ ದಿದ್ದರೂ 60 ವರ್ಷ ವಯಸ್ಸು ದಾಟಿದ ಕೂಡಲೇ ಆ ನೌಕರರು ಕೆಲಸ ಮಾಡಲು ನಿಮಗೆ ಅರ್ಹತೆಯಿಲ್ಲವೆಂದೂ (ಅನ್‌ಫಿಟ್) ಪರಿಗಣಿಸಿ; ಅಥವಾ ಕೆಲಸ ಸರಿಯಾಗಿ ನಿರ್ವಹಿಸಿಲ್ಲ. ಪೌಷ್ಟಿಕ ಆಹಾರ ಕದ್ದಿದ್ದೀರಿ ಎಂಬ ಆರೋಪಗಳನ್ನು ಹೊರಿಸಿ ಮನೆಗೆ ಬರಿಗೈಯಲ್ಲಿ ಕಳುಹಿಸುವ ಕೆಲಸ ಅವ್ಯಾಹತವಾಗಿ ನಡೆದಿದೆ.



ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘ ಇದನ್ನು ವಿರೋಧಿಸಿ ನೌಕರರನ್ನು ನೇಮಕಾತಿ ಮಾಡುವ ಸರ್ಕಾರ ನಿವೃತ್ತಿ ಸೌಲಭ್ಯವನ್ನು ಕೊಡಬೇಕೆಂದೂ ಒತ್ತಾಯಿಸಿ ಹಾಗೂ 2002 ಏಪ್ರಿಲ್‌ನಲ್ಲಿ ಹೆಚ್ಚಳವಾದ ಗೌರವಧನದ ಬಿಡುಗಡೆಗಾಗಿ, ರಾಜ್ಯ ಸರ್ಕಾರ ಕೊಡುತ್ತಿದ್ದ 250 ರೂಗಳ ಗೌರವಧನದ ಬಿಡುಗಡೆ, ಸಾಲ ಸೌಲಭ್ಯಗಳಲ್ಲಿ ಅಂಗನವಾಡಿ ಮಹಿಳೆಯರಿಗೆ ಹೆಚ್ಚಿನ ಆದ್ಯತೆ, ಸ್ತ್ರೀಶಕ್ತಿ ಕೆಲಸದ 18 ತಿಂಗಳ ಹೆಚ್ಚುವರಿ ಧನದ ಬಿಡುಗಡೆಗಾಗಿ ಒತ್ತಾಯಿಸಿ ಮಾರ್ಚ್ 4 ರಿಂದ ಅನಿರ್ಧಿಷ್ಟ ಸಾಮೂಹಿಕ ಧರಣಿ ಸತ್ಯಾಗ್ರಹಕ್ಕೆ ಕರೆ ಕೊಡಲಾಗಿತ್ತು. ಈ ಕಾರ್ಯಕ್ರಮದ 3 ತಿಂಗಳ ಮುಂಚಿತವಾಗಿ ತಾಲೂಕು ಮತ್ತು ಜಿಲ್ಲಾ ಸಮಿತಿಗಳ ಸಭೆ, ಕರಪತ್ರಗಳ ಹಂಚಿಕೆ, ಎಲ್ಲಾ ಅಂಗನವಾಡಿ ನೌಕರರಿಂದ ಸಾಮೂಹಿಕ ಪತ್ರ ಚಳುವಳಿ, ತಾಲೂಕು ಸಮಿತಿಗಳಿಂದ ಟೆಲಿಗ್ರಾಂನ್ನು ಸರ್ಕಾರಕ್ಕೆ ಕೊಡಲಾಗಿತ್ತು. ಸಂಘಟನೆಯೊಂದಿಗೆ ಮಾತುಕತೆಗೆ ಒಪ್ಪದ ಸರ್ಕಾರ ಹೋರಾಟ ಸಮಯದಲ್ಲಿ ಮಾತುಕತೆ ಅನಿವಾರ್ಯವಾಗಿತ್ತು. ಮಾರ್ಚ್ 4 ರಂದು 14 ಜಿಲ್ಲೆಗಳ 57 ರಿಂದ 60 ತಾಲೂಕುಗಳಿಂದ 5 ಸಾವಿರ ಅಂಗನವಾಡಿ ನೌಕರರು ತಮ್ಮ ಬೇಡಿಕೆ ಗಳನ್ನು ಘೋಷಣೆಯ ರೂಪದಲ್ಲಿ ಬೆಂಗಳೂರಿನ ರೈಲು ನಿಲ್ದಾಣದಿಂದ ಬನಪ್ಪಪಾರ್ಕ್‌ರವರೆಗೆ ಉರಿಯುವ ಬಿಸಿಲಿನಲ್ಲಿ ಮೆರವಣಿಗೆ ನಡೆಸಿ ಧರಣಿಗೆ ಕುಳಿತರು. ಈ ಧರಣಿ ಒಂದು ರಾತ್ರಿ 2 ಹಗಲು ನಡೆದಿದ್ದು ಕರ್ನಾಟಕ ರಾಜ್ಯದ ಅಂಗನವಾಡಿ ನೌಕರರ ಇತಿಹಾಸದಲ್ಲಿ ಪ್ರಥಮ ಹೋರಾಟವಾಗಿತ್ತು.

ಮಾರ್ಚ್ 5 ರಂದು ಮಧ್ಯಾಹ್ನ 1-30ಕ್ಕೆ ಸರ್ಕಾರದ ಇಲಾಖಾ ಸಚಿವರು, ಇಲಾಖಾ ಕಾರ್ಯದರ್ಶಿ, ನಿರ್ದೇಶಕರು ಹಾಗೂ ಸಹ ನಿರ್ದೇಶಕರು ಸಂಘಟನೆಯಿಂದ ಸಿಐಟಿಯುವಿನ ರಾಜ್ಯ ಕಾರ್ಯದರ್ಶಿಗಳಲ್ಲೊಬ್ಬರಾದ ಪ್ರಸನ್ನಕುಮಾರ್, ಸಂಘದ ಪ್ರಧಾನ ಕಾರ್ಯದರ್ಶಿ ಎಸ್.ವರಲಕ್ಷ್ಮಿ, ಅಧ್ಯಕ್ಷರಾದ ಶಾಂತಾ ಎನ್. ಘಂಟೆ, ಖಜಾಂಚಿ ಬಿ.ಎನ್. ಪ್ರೇಮ ಇತರ

ಪುಟ 10 ಕ

ಮಂಡ್ಯದ ಗುಮ್ಮನಹಳ್ಳಿಯ ಕುಡಿಯುವ ನೀರನ್ನು ದಲಿತರು, ಸವರ್ಣೀಯರು ಮುಟ್ಟುವ-ಬಳಸುವ ರೂಢಿ ಇದ್ದಾಗಲೂ ಮಹಿಳೆಯರೊಬ್ಬರು ಬಟ್ಟೆ ತೊಳೆದ ಘಟನೆಯಿಂದಾಗಿ ಸವರ್ಣೀಯರು ದಲಿತರ ಮೇಲೆ ಆಕ್ರಮಣ ನಡೆಸಿದ್ದಾರೆ. ಅಸ್ಪೃಶ್ಯತೆಯಂತಹ ಅನಿಷ್ಟ ಪದ್ಧತಿ ವಿರುದ್ಧ ಎಲ್ಲಾ ಸುಶಿಕ್ಷಿತ ಜನ ವಿಭಾಗಗಳನ್ನು ಸಂಘಟಿಸಿ ಹೋರಾಡಬೇಕಿರುವಾಗ ಇದಕ್ಕೆ ವ್ಯತಿರಿಕ್ತವಾಗಿ ಜಾತಿ ವೈಷಮ್ಯ ಬೆಳೆಸುವಂತಹ ಬಿಎಸ್‌ಪಿಯ ರಾಜಕೀಯ ದುರುದ್ದೇಶವು ಇದರ ಹಿಂದಿದೆಯು. ಇಂತಹ ಘಟನೆ ನಡೆಯುವ ಬಗ್ಗೆ ಪೂರ್ವ ಮಾಹಿತಿ ಇದ್ದಾಗಲೂ ಜಿಲ್ಲಾಡಳಿತ ಯಾವುದೇ ಮುಂಜಾಗ್ರತ ಕ್ರಮ ಕೈಗೊಂಡಿಲ್ಲ. ಸಮಸ್ಯೆ ಇತ್ಯರ್ಥಕ್ಕೆ ಪ್ರಯತ್ನಿಸಲೂ ಇಲ್ಲ. ಈ ಘಟನಾ ಪ್ರದೇಶಕ್ಕೆ ಖುದ್ದಾಗಿ ಭೇಟಿ ನೀಡಿದ ವರದಿ ಇಲ್ಲಿದೆ.

ಮಂಡ್ಯ ದಲಿತರ ಮೇಲೆ ದೌರ್ಜನ್ಯ

ಮಂಡ್ಯ ಜಿಲ್ಲೆಯ ಪಾಂಡವಪುರ ತಾಲೂಕಿಗೆ ಸೇರಿದ ಒಂದು ಊರು ಗುಮ್ಮನಹಳ್ಳಿ. ಈ ಹಳ್ಳಿಯ ದಲಿತರು ಮತ್ತು ಇತರ ಸವರ್ಣೀಯರ ನಡುವೆ ನಡೆದ ಕೆರೆಯ ನೀರಿನ ಬಗೆಗಿನ ವಿವಾದದಿಂದ ಈ ಹಳ್ಳಿಯತ್ತ ಈಗ ಎಲ್ಲರ ಗಮನ. ತಾಲ್ಲೂಕು ಕೇಂದ್ರದಿಂದ 15 ಕಿ.ಮೀ ದೂರದಲ್ಲಿರುವ ಈ ಗ್ರಾಮದಲ್ಲಿ ಸುಮಾರು 450 ಕುಟುಂಬಗಳಿದ್ದು, ಒಕ್ಕಲಿಗ ಜಾತಿಯ ಸುಮಾರು 150, ಪರಿಶಿಷ್ಟ ಜಾತಿಯ 120 ಸೇರಿದಂತೆ ಲಿಂಗಾಯತ, ಬೆಸ್ತರು, ಗಾಣಿಗ, ಜನಾಂಗದವರು ವಾಸಿಸುತ್ತಿದ್ದಾರೆ.

ಇಲ್ಲಿಯ ಬಹುತೇಕ ಜನರಿಗೆ ಜಮೀನು ಇದೆ. ಇಲ್ಲಿಯ ಪರಿಶಿಷ್ಟ ಜಾತಿಯ ಎಲ್ಲರಿಗೂ 10 ಗುಂಟೆಯಿಂದ ಹಿಡಿದು 3 ಎಕರೆಯವರೆಗೂ ಇದೇ ಅದೇ ರೀತಿ ಒಕ್ಕಲಿಗರಿಗೂ 10 ಗುಂಟೆಯಿಂದ 12 ಎಕರೆಯವರೆಗೂ ಜಮೀನು ಇದೆ. ಮಿಕ್ಕ ಜಾತಿಯ ಜನರು ಕೂಡ ಜಮೀನು ಅಲ್ಪಸ್ವಲ್ಪವುಳ್ಳವರೇ ಹಾಗಾಗಿ ಸಣ್ಣ ಮತ್ತು ಅತಿಸಣ್ಣ ರೈತರು (ರೈತ ಕೂಲಿಕಾರರು) ಅಧಿಕ ಸಂಖ್ಯೆಯಲ್ಲಿದ್ದಾರೆ. ಒಕ್ಕಲಿಗರ ಹೊಲಗದ್ದೆಗಳಿಗಳಲ್ಲಿ ಪರಿಶಿಷ್ಟ ಜಾತಿಯ ಜನರು ಕೂಲಿ ಮಾಡುವುದು ಸಾಮಾನ್ಯ. ಈ ಊರಿನ ಎಲ್ಲಾ ಜಾತಿಯ ಸಣ್ಣ ಮತ್ತು ಅತಿಸಣ್ಣ ರೈತ ಮಹಿಳೆಯರು ಅರೆಕೆಲಸ(ಜೆಲ್ಲಿ ಕೆಚ್ಚುವ) ಕ್ಕೂ ಹೋಗುವರು.

ದೇವಸ್ಥಾನಕ್ಕೆ ಪ್ರವೇಶ ನಿರಾಕರಣೆ

ಪರಿಶಿಷ್ಟ ಜಾತಿಯವರಿಗೆ ಹೊಟೆಲ್‌ಗಳು, ದೇವಸ್ಥಾನ ಪ್ರವೇಶ ನಿಷೇಧ, ಎರಡು ಲೋಟದ ವ್ಯವಸ್ಥೆ ಮತ್ತು ಲೋಟವನ್ನು ಮನೆಯಿಂದ ತರಬೇಕಿರುವ ರೂಢಿಯಂತಹ ಪದ್ಧತಿಗಳು ನಾಗರೀಕ ಪ್ರಪಂಚ ತಲೆತಗ್ಗಿಸುವ ಘಟನೆಗಳಾದರೂ ನಮ್ಮ ನಾಡಿನ ಬಹುತೇಕ ಗ್ರಾಮಗಳಲ್ಲಿ ಇರುವುದು ಸಾಮಾಜಿಕ ವಾಸ್ತವ. ಹಾಗೇಯೇ ಇದಕ್ಕೆ ಗುಮ್ಮನಹಳ್ಳಿ ಕೂಡ ಹೊರತಾಗಿಲ್ಲ.

ಈಗ ವಿವಾದ ಕೇಂದ್ರ ಬಿಂದುವಾಗಿರುವುದು ಈ ಗ್ರಾಮದ ರಸ್ತೆ ಪಕ್ಕದಲ್ಲಿರುವ ಕೆರೆ. ಈ ಕೆರೆಗೆ ದನಕರುಗಳಿಗೆ ನೀರು, ದನಕರು ತೊಳೆಯಲು,



ಹಲ್ಲೆಗೊಳಗಾದ ದಲಿತ ಮುಖಂಡ ಕಾಂತರಾಜು

ಶೌಚಕ್ಕೆ ಹೋದವರ ಶುಚಿಗೆ ಬಳಕೆಯಾಗುತ್ತಿದೆ. ಈ ಕೆರೆಯನ್ನು ದಲಿತರು ಕೂಡ ತಮ್ಮ ದನಕರುಗಳಿಗೆ ನೀರು ಕುಡಿಸಲು, ಮೈ ತೊಳೆಯಲು ತಮ್ಮ ಶೌಚದ ಶುಚಿಗೂ ಬಳಸುತ್ತಿದ್ದು, ದಲಿತ ಯುವಕರನ್ನು ಮಾತನಾಡಿಸಿದಾಗ ತಿಳಿದು ಬಂತು. ಆದರೆ ಕೆರೆಯ ನೀರನ್ನು ಮುಟ್ಟಲು ದಲಿತ ಮಹಿಳೆಯರಿಗೆ ಅವಕಾಶವಿರಲಿಲ್ಲ, ಮಾತ್ರವಲ್ಲ ದಂಡ ಹಾಕಿ ಶಿಕ್ಷಿಸಿರುವುದು ಉಂಟು. ಸುಮಾರು 6-7 ವರ್ಷದ ಹಿಂದೆ ಇದೇ ಊರಿನ ದಲಿತ ಮಹಿಳೆಯೊಬ್ಬರು ತನ್ನ ಮಗುವಿನೊಂದಿಗೆ ನೆಂಟರ ಮನೆಗೆ ಹೊರಡಲು ಬಸ್ಸಿಗೆ ಕಾಯುತ್ತಿದ್ದಾಗ ಮಗು ಕಕ್ಕಸ್ಸು ಮಾಡಿಕೊಂಡಿದೆ ಮನೆಗೆ ಹೋಗಿ ಶುಚಿಗೊಳಿಸಿ ಬರುವ ವೇಳೆಗೆ ಬಸ್ಸು ಹೊರಟು ಹೋಗುವ ಭಯದಿಂದ ಅಲ್ಲೇ ಪಕ್ಕದಲ್ಲಿರುವ ಕೆರೆಯಿಂದ ಬೋಗುಣಿ ಮೂಲಕ ನೀರು ತೆಗೆಯುವ ಯತ್ನದಲ್ಲಿದ್ದಾಗ ಊರಿನ ಯಜಮಾನನೊಬ್ಬ ನೋಡಿ ನಿಂದಿಸಿ ನ್ಯಾಯ ಪಂಚಾಯ್ತಿ ಮಾಡಿ 51 ರೂ.ದಂಡ ಹಾಕಿದ್ದರು. ಅನಂತರ ಅಲ್ಲಿಯ ಮಹಿಳೆಯರು ಕೆರೆಗೆ ಹೋಗುವುದು ನಿಂತಿತ್ತು.

ಹೇಮಾವತಿ ಕಾಲುವೆಯ ವಾಯಿದೆ ನೀರಿನಿಂದ ಭತ್ತ, ರಾಗಿ ಬೆಳೆ ಬೆಳೆಯುತ್ತಾರೆ. ಕಾಲುವೆ ಮತ್ತು ಹಳ್ಳಗಳ ನೀರು ಬಳಸಿಕೊಂಡು ದಲಿತರು ಬಟ್ಟೆ ತೊಳೆಯುತ್ತಿದ್ದರು. ಕೆರೆಗಳಲ್ಲಿ ದಲಿತರನ್ನು ಬಿಟ್ಟು ಮಿಕ್ಕ ಎಲ್ಲಾ ಜಾತಿಯ ಜನ ಬಟ್ಟೆ ತೊಳೆಯಲು ಅವಕಾಶವಿತ್ತು. ಈ ವರ್ಷ ವ್ಯಾಪಕ ಬರದಿಂದ ಕಾಲುವೆ ಹಳ್ಳಗಳ ನೀರಿಲ್ಲದಂತಾಗಿ ಬಟ್ಟೆ ಸೆಣೆಯಲು ನೀರಿಗೆ ಪರದಾಡುವಂತೆ ಆಯಿತು. ಕುಡಿಯುವ ನೀರನ್ನು 2-3 ದಿನಕ್ಕೆ ಒಮ್ಮೆ ಬಿಡುವುದರಿಂದ ಬೋರ್‌ವೆಲ್‌ನ್ನು ಜನರು ಅವಲಂಬಿಸಿದ್ದಾರೆ. ದಲಿತರು ಬಳಸುವ ಬೋರ್‌ವೆಲ್‌ನಿಂದ ಹಲವು ಸವರ್ಣೀಯರು ನೀರು ತೆಗೆದುಕೊಂಡು ಹೋಗುವುದು ಕೂಡ ಇದೆ.

ಘಟನೆಯ ಹಿನ್ನೆಲೆ

ಗುಮ್ಮನಹಳ್ಳಿಯನ್ನು ಕೇಂದ್ರವಾಗಿಟ್ಟುಕೊಂಡು ಸುತ್ತಮುತ್ತಲ ಊರುಗಳು ಆಚರಿಸುವ ಏಳೂರಮ್ಮನ 'ಸಿಡಿ ಹಬ್ಬ' ಯುಗಾದಿ ಹಬ್ಬಕ್ಕಿಂತ ಏಳು ದಿನ ಮುಂಚಿತವಾಗಿ ಮುಕ್ತಾಯವಾಗುತ್ತದೆ. ಈ ಹಬ್ಬ ದಲಿತರು ಹೆಚ್ಚು ಸಂಭ್ರಮದಿಂದ ಆಚರಿಸುವ ಹಬ್ಬ. ಏಳೂರಮ್ಮ ಮೈಮೇಲೆ ಬರುವ ವ್ಯಕ್ತಿ ದಲಿತನೇ ಆಗಿದ್ದು, ಅವನು ಅಂದು ಆ ಕೆರೆಯಲ್ಲಿ ಸ್ನಾನ ಮಾಡಬೇಕಾದದ್ದು ಸಂಪ್ರದಾಯ. ಆ ದಿನ ಅವನಿಗೆ ದೇವಿ ಕಡ್ಡಾಯವಾಗಿ ಬರುವಳು! ದೇವರು ಮೈಮೇಲೆ ಬಂದವನು ದೇವಸ್ಥಾನಕ್ಕೆ ಇದುವರೆವಿಗೂ ಹೋಗಿಲ್ಲ ಮತ್ತು ಹೋಗೂ ಇಲ್ಲ. ದೇವಸ್ಥಾನದ ಒಳಹೋಗಲು ದೇವರಿಗೂ ಭಯ!

ಸ್ವ-ಸಹಾಯ ಸಂಘಗಳ ರಚನೆ ಮೂಲಕ ಮಹಿಳೆಯರಲ್ಲಿನ ಜಾಗೃತಿ ಇತ್ತೀಚೆಗೆ ಸಕ್ರಿಯಗೊಂಡಿದ್ದು ದಲಿತ ಸಂಘರ್ಷ ಸಮಿತಿಯ ಚಟುವಟಿಕೆಗಳ ಪರಿಣಾಮವಾಗಿ ಈ ವರ್ಷ ಕೆಲವು ದಲಿತ ಯುವಕರು ಕೆರೆಯಲ್ಲಿ ನಮಗೂ ಬಟ್ಟೆ ಸೆಣೆಯಲು ಅವಕಾಶ ನೀಡಬೇಕು. ಕ್ಷೌರದ ಅಂಗಡಿಯಲ್ಲೂ ನಮಗೂ ಕ್ಷೌರ ಮಾಡಬೇಕು. ದೇವಸ್ಥಾನಕ್ಕೆ ಪ್ರವೇಶ ನೀಡಬೇಕು ಎಂದು ಊರಿನ ಯಜಮಾನರ ಹತ್ತಿರ ಹೋಗಿ ಹೇಳಿದ್ದಾರೆ. ನಂತರ ಮಾರ್ಚ್ 19 ರಂದು ಊರಿನ 'ಯಜಮಾನರು' ಮತ್ತು ದಲಿತರ ನಡುವೆ ಸಭೆ ನಡೆದದ್ದು, ಕೆರೆ ದಲಿತರಿಗೆ ಸೇರಿದ್ದು, ಏಳೂರಮ್ಮ [illegible] ಒಪ್ಪಿಕೊಂಡರೆ ನಮ್ಮದೇನು ಅಭ್ಯಂತರ ಇಲ್ಲಾ, ಏಳೂರಮ್ಮನ ಹಬ್ಬ ಆಗಲಿ ಎಂದಿದ್ದಾರೆ.

ಸುಮಾರು 7 ದಿನ ಆಚರಿಸುವ ಈ ಹಬ್ಬ ಮತ್ತೆ ದಲಿತ ಯುವಕರು ದೇವಸ್ಥಾನಕ್ಕೆ, ಕೆರೆ ಪ್ರವೇಶಕ್ಕೆ ಪಟ್ಟು ಹಿಡಿದಿದ್ದರಿಂದ ಹಬ್ಬವನ್ನು ಊರಿನ ಯಜಮಾನರು ಅರ್ಧಕ್ಕೆ ನಿಲ್ಲಿಸಿದ್ದಾರೆ.

ಬಿ.ಎಸ್.ಪಿ. ಪಕ್ಷದ ಜೊತೆ ಗುರುತಿಸಿ ಕೊಂಡಿರುವ ದ.ಸಂ.ಸ.ದ ಬಣ ಗುಮ್ಮನಹಳ್ಳಿಯ ದಲಿತ ಯುವಕರನ್ನು ಸಂಘಟಿಸುತ್ತಿದ್ದು, ಅಂಬೇಡ್ಕರ್ ಜಯಂತಿಯ ದಿನ ಕೆರೆಯಲ್ಲಿ ನೀರನ್ನು ಸ್ಪರ್ಶ ಮಾಡುವ ಮತ್ತು ಸಾರ್ವಜನಿಕ ಸ್ಥಳಗಳಿಗೆ ಪ್ರವೇಶ ಮಾಡುವ ದಿನವನ್ನಾಗಿ ಆಚರಿಸಲು ತೀರ್ಮಾನಿಸಿ ದಲಿತರ ಮಧ್ಯೆ ವ್ಯಾಪಕವಾಗಿ ಕರಪತ್ರ ಹಂಚಲಾಗಿದೆ. ಈ ಕಾರಣದಿಂದ ಊರಿನಲ್ಲಿ ಎರಡು ಜಾತಿಗಳ ಜನರ ಮಧ್ಯೆ ಉದ್ವಿಗ್ನತೆ ಉಂಟಾಗಿದೆ.

ಅಸಿಸ್ಟೆಂಟ್ ಕಮಿಷನರ್ ತಹಶೀಲ್ದಾರ್ ಜನಪ್ರತಿನಿಧಿಗಳ ಸಮ್ಮುಖದಲ್ಲಿ ಏಪ್ರಿಲ್ 12 ರ ಶನಿವಾರ ಪಾಂಡವಪುರದಲ್ಲಿ ಶಾಂತಿ ಸಭೆ ನಡೆಸಲಾಗಿದೆ. ಈ ಶಾಂತಿ ಸಭೆಗೆ ಸುತ್ತಲಿನ ಊರಿನ ಮುಖಂಡರು ಮತ್ತು ಗುಮ್ಮನಹಳ್ಳಿಯ ಸುಮಾರು 20 ದಲಿತ ಯುವಕರು ಮತ್ತು ಮಹಿಳೆಯರು ಭಾಗವಹಿಸಿದ್ದರು. ಆ ಶಾಂತಿ ಸಭೆಯಲ್ಲಿ ಸಾರ್ವಜನಿಕ ಸ್ಥಳಗಳ ಪ್ರವೇಶಕ್ಕೆ ಯಾವುದೇ ನಿರ್ಬಂಧ ಹೇರುವಂತಿಲ್ಲ ಎಂದು ಅಧಿಕಾರಿಗಳು ಹೇಳಿದ್ದಾರೆ. ಆಗ ಊರಿನ ಮುಖಂಡರು ಕೆರೆಯನ್ನು ಬಳಸಲು ನಾವು ನಿರ್ಬಂಧ ಹೇರುವುದಿಲ್ಲ. ಊರಿನಲ್ಲಿ ಮುಂದೆ ಗಲಾಟೆಯಾಗದಿರಲು ಕೆರೆಯ ಮಧ್ಯ ಕಲ್ಲು ಕಟ್ಟಿಸಿ ದಲಿತರ ಬಳಕೆಗೆ ನೀಡುವ ಬಗ್ಗೆ ಮೌಖಿಕವಾಗಿ ಒಪ್ಪಿಕೊಂಡಿದ್ದಾರೆ. ಅಂದು ಶಾಂತಿ ಸಭೆ ಮುಗಿಸಿ ಬಂದ ದಲಿತ ಯುವಕರು ಪರೀಕ್ಷೆ ಮಾಡುವ ಸಲುವಾಗಿ ಇಬ್ಬರು ದಲಿತ ಮಹಿಳೆಯರನ್ನು ಬಟ್ಟೆ ಸೆಣೆಯಲು ಕಳುಹಿಸಿದ್ದಾರೆ.

ಬಟ್ಟೆ ತೊಳೆದು ನಾವು ಸವರ್ಣೀಯರ ಮೇಲೆ ವಿಜಯ ಸಾಧಿಸಿದ್ದೇವೆ ಎನ್ನುವ ರೀತಿಯಲ್ಲಿ ವಾತಾವರಣ ಸೃಷ್ಟಿ ಮಾಡಿದ್ದ ದಲಿತರ ವರ್ತನೆ. ಏಪ್ರಿಲ್ 14ರಂದು ಮುಟ್ಟುತ್ತೇವೆ ಎಂದವರು ಶಾಂತಿ ಸಭೆ ನಡೆದ ದಿನವೇ ಕೆರೆಯಲ್ಲಿ ಬಟ್ಟೆ ತೊಳೆದದ್ದನ್ನು ಸಹಿಸಲಾಗದ ಸವರ್ಣೀಯರ ಮಧ್ಯ ಸುಮಾರು 2 ತಿಂಗಳುಗಳಿಂದ ಹೊಗೆಯಾಡುತ್ತಿದ್ದ ದ್ವೇಷ ದಳ್ಳುರಿಗೆ ತಿರುಗಿದೆ. ಈ ಘರ್ಷಣೆಯಲ್ಲಿ ದಲಿತರ ಪೈಕಿ 13 ಜನ ಗಾಯಗೊಂಡಿದ್ದಾರೆ. ಅವರಲ್ಲಿ 7 ಜನ ದೊಣ್ಣೆ, ಮಚ್ಚುಗಳಿಂದ ಹಲ್ಲೆಗೊಳಗಾಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಅವರ ಪೈಕಿ ಮೂರು ಜನರ ಪರಿಸ್ಥಿತಿ ಗಂಭೀರವಾಗಿದೆ. ಸವರ್ಣೀಯರಲ್ಲಿ 20 ಜನ ನ್ಯಾಯಾಂಗ ಬಂಧನದಲ್ಲಿದ್ದಾರೆ. ಅವರಲ್ಲಿ ಐವರನ್ನು ಆಸ್ಪತ್ರೆಯಲ್ಲಿ ಬಂಧಿಸಲಾಗಿದೆ. ದಲಿತರ ಕೇರಿಗೆ ನುಗ್ಗಿ ಮನೆಗಳಿಗೆ ಕಲ್ಲು ತೂರಲಾಗಿದೆ, ಹೆಂಚುಗಳನ್ನು ಹೊಡೆದು ಹಾಕಲಾಗಿದೆ. ನಂತರ ಸರ್ಕಾರ ಹೆಂಚುಗಳನ್ನು ನೀಡಿದೆ ಎಂದು ದಲಿತ ಮುಖಂಡರು ತಿಳಿಸಿದರು.

ಈಗ ಊರಿನಲ್ಲಿ ಪೊಲೀಸರ ಬಂದೋಬಸ್ತು ಇದ್ದು, ಸವರ್ಣೀಯ ಜಾತಿಯ ಯಾವ ಗಂಡಸರು ಮನೆಯಲಿಲ್ಲ. ಬಹುತೇಕ ಮನೆಗಳಿಗೆ ಬೀಗ ಜಡಿದು ಊರು ಖಾಲಿ ಮಾಡಿದ್ದಾರೆ. ಕೆಲವು ಮನೆಗಳಲ್ಲಿ ಮಹಿಳೆಯರು ಮಾತ್ರ ಇದ್ದಾರೆ.

ಅಧಿಕಾರಿಗಳು, ಉಸ್ತುವಾರಿ ಮಂತ್ರಿ ಸೇರಿದಂತೆ ಎಲ್ಲಾ ಪ್ರಮುಖ ಪಕ್ಷಗಳ ಮುಖಂಡರು ಊರಿಗೆ ಭೇಟಿ ಕೊಟ್ಟು ಒಕ್ಕಲಿಗರ ಜೊತೆ ಮಾತನಾಡುವಾಗ ಒಂದು ರೀತಿ ದಲಿತರ ಜೊತೆ ಒಂದು ರೀತಿ ಮಾತನಾಡುತ್ತಾ ಸಮಸ್ಯೆಯನ್ನು ಚುನಾವಣೆಯ ಲೆಕ್ಕಾಚಾರದಲ್ಲಿ ನೋಡುತ್ತಾ ಮೊಸಳೆ ಕಣ್ಣೀರು ಸುರಿಸುತ್ತಿದ್ದಾರೆ.

ಬಿಎಸ್‌ಪಿಯ ಜಾತಿವಾದ ಮತ್ತು ಪೋಲೀಸರ ದಿವ್ಯ ನಿರ್ಲಕ್ಷ್ಯ

ಸಣ್ಣ ರೈತರು, ಅತಿ ಸಣ್ಣ ರೈತರೇ ಅಧಿಕ ಸಂಖ್ಯೆಯಲ್ಲಿ ಇರುವ ಪರಿಶಿಷ್ಟ ಜಾತಿಯಲ್ಲಿರುವಷ್ಟೇ ಪ್ರಮಾಣದ ಕೂಲಿಕಾರರು, ಒಕ್ಕಲಿಗ ಜಾತಿಯಲ್ಲೂ ಇದ್ದಾರೆ. ಎರಡು ಜಾತಿಯ ಮಹಿಳೆಯರು ಒಂದೇ ಕಡೆ ಅರೆ ಕೆಲಸಕ್ಕೂ ಹೋಗುತ್ತಾರೆ. ನಿರ್ದಿಷ್ಟವಾಗಿ ದಲಿತರು ಸಾಮಾನ್ಯವಾಗಿ ಕೂಲಿಕಾರರನ್ನೆಲ್ಲಾ ಭಾದಿಸುವ ಬೆಲೆ ಏರಿಕೆ, ಹಸಿರು ಕಾರ್ಡು,ಭಾಗ್ಯ ಜ್ಯೋತಿಗೆ ಮೀಟರ್ ಅಳವಡಿಕೆ, ಜೀವನ ಅವಶ್ಯಕ ಕೂಲಿಯಂತಹ ಸಮಸ್ಯೆಗಳಿದ್ದು ವ್ಯಾಪಕ ಅತೃಪ್ತಿ ಬೆಳೆದಿದೆ. ಕೂಲಿಕಾರರನ್ನೆಲ್ಲಾ ಒಂದು ಮಾಡಿ ಸಮಾನ ಬೇಡಿಕೆಗಳಿಗೆ ಹೋರಾಟ ಕಟ್ಟಿ ಜೊತೆ ಜೊತೆಯಲ್ಲಿಯೇ ಜಾತಿವಿರೋಧಿ ಭಾವನೆ ಜಾಗೃತಿಗೊಳಿಸುವ, ಆ ಮೂಲಕ ಕೂಲಿಕಾರರ ಮಧ್ಯೆ ಜಾತಿ ಪಿತೂರಿಗಳನ್ನು ಬಯಲುಗೊಳಿಸುವ ಪರಿಹಾರದ ದಾರಿಯ ಬದಲು ಬಿಎಸ್‌ಪಿಯು ದಲಿತರಲ್ಲಿ ಜಾತಿವಾದವನ್ನು ಜಾಗೃತಿಗೊಳಿಸಿ ಪೋಷಿಸುತ್ತಿರುವುದು ಕೂಡ ಸಮಸ್ಯೆ ಉಲ್ಬಣಗೊಳ್ಳಲು ಕಾರಣವಾಗಿದೆ.

ಸುಮಾರು ಎರಡು ತಿಂಗಳುಗಳ ಕಾಲ ಈ ಸಂಬಂಧ ಉದ್ವಿಗ್ನತೆ ಸೃಷ್ಟಿಯಾಗಿ ಯಾವಾಗ ಬೇಕಾದರೂ ಗಲಾಟೆ ನಡೆಯುವ ಸ್ಪಷ್ಟ ಸೂಚನೆ ಇದ್ದಾಗಲೂ ಊರಿನಲ್ಲಿ ಕೇವಲ ಇಬ್ಬರು ಪೋಲೀಸರು ಮಾತ್ರ ಗಸ್ತಿನಲ್ಲಿದ್ದಾರೆ. ಪರಿಸ್ಥಿತಿಯನ್ನು ಸರಿಯಾಗಿ ಅಂದಾಜು ಮಾಡಿ ಸೂಕ್ತ ಬಂದೋಬಸ್ತು ಹಾಗೂ ಸಮಸ್ಯೆ ಇತ್ಯರ್ಥ ಮಾಡಬೇಕಾದ ಪೋಲೀಸರು ದಿವ್ಯ ನಿರ್ಲಕ್ಷ್ಯ ತೋರಿದ್ದಾರೆ. ಈ ಬಗ್ಗೆ ತನಿಖೆ ನಡೆಯಬೇಕಾದ ಅಗತ್ಯವಿದೆ. ತಪ್ಪಿತಸ್ಥ ಆರೋಪಿಗಳ ಮೇಲೆ ಕ್ರಮ ಜರುಗಿಸಿ ಸಾರ್ವಜನಿಕ ಸ್ಥಳಗಳಿಗೆ ದಲಿತರಿಗೆ ಅವಕಾಶ ನೀಡಲು ಅನುಕೂಲವಾಗುವ ಕ್ರಮವನ್ನು ಸರ್ಕಾರ ತೆಗೆದುಕೊಳ್ಳಬೇಕಾಗಿದೆ. ಇಲ್ಲಿ ಜಿಲ್ಲಾ ಆಡಳಿತ ವಿಫಲವಾಗಿದೆ.

— ಕೆ.ಕುಮಾರಿ, ಬಿ.ಯಶವಂತ್

ರಾಜಕಾರಣಿಗಳ ಅಧಿಕಾರಿಗಳ ದಂಡು-ಧಾಳಿ

ಚುನಾವಣೆಗೆ ಸಿದ್ಧತೆಯಾಗಿ ಎಂಬಂತೆ ಎಲ್ಲಾ ಪಕ್ಷಗಳ ರಾಜಕಾರಣಿಗಳು ಎಲ್ಲಾ ಹಂತದ ಅಧಿಕಾರಿಗಳು ಗ್ರಾಮಕ್ಕೆ ಧಾಳಿ ಇಡುತ್ತಿದ್ದಾರೆ.

ದಲಿತರಿಗೆ ಬಟ್ಟೆ ಒಗೆಯಲು ಬೇಕಾದ ದೋಬಿ ಕಟ್ಟೆ, ಮನೆ ನವೀಕರಣಕ್ಕೆ ನೆರವು ದಲಿತರಿಗೆ ಪ್ರತ್ಯೇಕ ಹಾಲು ಉತ್ಪಾದಕರ ಸಹಕಾರ ಸಂಘ ಸ್ಥಾಪನೆ, ಪ್ರತ್ಯೇಕ ಕಲ್ಲುಗಣಿಯಲ್ಲಿ ಕೆಲಸಕ್ಕೆ ಬೇಕಾದ ಸೌಲಭ್ಯಗಳನ್ನು ಒದಗಿಸುವುದಾಗಿ ಸರ್ಕಾರ ಕ್ರಮ ವಹಿಸುತ್ತಿದೆ. ಆ ನಿಟ್ಟಿನಲ್ಲಿ ಕೆಲಸಗಳು ಪ್ರಾರಂಭವಾಗಿವೆ. ಪ್ರತಿ ದಲಿತ ಕುಟುಂಬಕ್ಕೆ 5 ಕೆ.ಜಿ. ಅಕ್ಕಿ, 5 ಲೀಟರ್ ಸೀಮೆಎಣ್ಣೆ, ಅರ್ಧ ಕೆ.ಜಿ ಬೇಳೆ, ಒಂದು ಎಣ್ಣೆ ಪ್ಯಾಕೆಟ್ ನೀಡಲಾಗಿದೆ. ಇಂತಹ ಕ್ರಮಗಳು ತುರ್ತು ಸಹಾಯ ನಿಜ. ಆದರೆ ಮೂಲಭೂತವಾದ ಸಮಸ್ಯೆಗಳ ಇತ್ಯರ್ಥಕ್ಕೆ ಏನೂ ಗಮನ ನೀಡುತ್ತಿಲ್ಲ. ಅಂತೂ ಈಗಿನ ಪರಿಸ್ಥಿತಿ ಹೇಗೋ ಸಾಗಹಾಕಿದರೆ ಸಾಕು ಎಂಬ ಮನೋಭಾವ ಸರ್ಕಾರದಲ್ಲಿದೆ



ದ.ಕ. ದಲ್ಲಿ ಬೀಡಿ ಕಾಮಿಕರ ಚಳುವಳಿಗೆ ದೀರ್ಘ ಇತಿಹಾಸ ಇದೆ. ಬೀದಿ ಉದ್ಯಮ ಅತ್ಯಂತ ಬಿಕ್ಕಟ್ಟು ಎದುರಿಸುತ್ತಿರುವ ಅತ್ಯಂತ ಸಂಕೀರ್ಣವಾದ ಸವಾಲುಗಳು ಚಳುವಳಿ ಮತ್ತು ಸಂಘಟನೆ ಮುಂದಿದೆ. ಆದರೆ ಇತಿಹಾಸವಾಗಲೀ, ವರ್ತಮಾನದ ಸಮಸ್ಯೆಗಳಿಗೆ ಸ್ಪಷ್ಟ ಪರಿಹಾರವಾಗಲೀ ಇಲ್ಲದ ಬೆಳ್ತಂಗಡಿಯ ನಾಗರೀಕ ಟ್ರಸ್ಟ್‌ನಂತಹ ವಿದೇಶಿ ಹಣಕಾಸು ನೆರವಿನ ಸಂಘಟನೆ ಬೀಡಿ ಕಾರ್ಮಿಕರ ಮೇಲೆ ದಿಢೀರನೆ ವಾತ್ಸಲ್ಯ ಉಂಟಾಗಿದೆ! ಕಾರ್ಮಿಕರು ಐಕ್ಯತೆಯಿಂದ ಹೋರಾಡುವ ಅಗತ್ಯವಿರುವಾಗ ಒಡಕು ತರಲು ಹೊರಟಿದೆ. ಬೀಡಿ ಕಾರ್ಮಿಕರ ಮುಂದೆ ವಿಭಜಿತ ಶಕ್ತಿಗಳು ತಲೆ ಎತ್ತಿರುವಾಗ ಕಾರ್ಮಿಕರ ಚಳುವಳಿಯ ಇತಿಹಾಸ ಮತ್ತು ಕರ್ತವ್ಯಗಳ ನೋಟವನ್ನು ಇಲ್ಲಿ ಕೊಟ್ಟಿದ್ದಾರೆ ಸಿಐಟಿಯು ರಾಜ್ಯಾಧ್ಯಕ್ಷ ಬಿ.ಮಾಧವ

ಬೀಡಿ ಕಾರ್ಮಿಕರ ಚಳುವಳಿ ಇತಿ

ಆರಂಭದ ಕಾಲ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೀಡಿ ಕಾರ್ಮಿಕರನ್ನು ಸಂಘಟಿಸುವ ಕೆಲಸ 1934 ರಲ್ಲೇ ಆರಂಭವಾಗಿತ್ತು. ಆಗ ಮಂಗಳೂರಿನ ಪ್ರಖ್ಯಾತ ಸಾಮಾಜಿಕ ಕಾರ್ಯಕರ್ತೆಯರಾಗಿದ್ದ ಕಮಲಾದೇವಿಯವರು (ಮುಂದೆ ಪ್ರೊ.ಹರೀಂದ್ರನಾಥ ಚಟ್ಟೋಪಾಧ್ಯಾಯರನ್ನು ವಿವಾಹವಾಗಿ ಕಮಲಾದೇವಿ ಚಟ್ಟೋಪಾಧ್ಯಾಯ ಎಂಬ ಹೆಸರಿನಲ್ಲಿ ಪ್ರಖ್ಯಾತರಾದರು) ಮಂಗಳೂರಿನ ಮುದ್ರಣ, ಬೀಡಿ ಮತ್ತು ನೇಯ್ಗೆ ಕೈಗಾರಿಕೆಗಳಲ್ಲಿ ಕಾರ್ಮಿಕ ಸಂಘಗಳನ್ನು ಆರಂಭಿಸಿದರು. ಇದೇ ಸಮಯದಲ್ಲಿ ಮಲಬಾರಿನ ತಲಚೇರಿಯಲ್ಲಿ ಬೀಡಿ ಕಾರ್ಮಿಕರಾಗಿದ್ದು ಟ್ರೇಡ್ ಯೂನಿಯನ್ ಚಟುವಟಿಕೆಗಾಗಿ ಕೆಲಸ ಕಳಕೊಂಡ ಸಿ.ಕೆ.ಗೋವಿಂದನ್ ಎಂಬುವರು ಮಂಗಳೂರಿಗೆ ಬಂದು, ಗ್ರೇಟ್ ದರ್ಬಾರ್ ಬೀಡಿಯ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಾ, ಬೀಡಿ ಕಾರ್ಮಿಕರ ಸಂಘಟನೆಗೆ ನೇತೃತ್ವ ನೀಡಿದರು. ಉಡುಪಿಯ ಹರಿದಾಸ ಆಚಾರ ಮತ್ತು ಮಂಗಳೂರಿನ ಕೇಶವ ಕಾಮತ್ ಎಂಬುವರೂ ಅಂದು ಕಮಲಾದೇವಿಯವರ ಜತೆಗೆ ಪ್ರೆಸ್, ಬೀಡಿ ಮತ್ತು ನೇಯ್ಗೆ ಕಾರ್ಮಿಕರ ಸಂಘಟನೆಗಳಲ್ಲಿ ದುಡಿದರು.

1940 ರ ಕೊನೆಯ ವೇಳೆಗೆ ಕಮಲಾದೇವಿಯವರು ಉತ್ತರ ಭಾರತಕ್ಕೆ ಹೋದರು. ಕೇಶವ ಕಾಮತ್ ಪುಣೆಗೂ ಹರಿದಾಸ್ ಆಚಾರ್ಯರು ಕೊಚ್ಚಿಗೂ ಹೋಗಿ ನೆಲೆಸಿದರು.

ಅಂದಿನ ದಕ್ಷಿಣ ಕನ್ನಡ ಜಿಲ್ಲೆಯ ಉತ್ತರ ಶಿರೂರಿನಿಂದ ಆರಂಭಗೊಂಡು ದಕ್ಷಿಣದಲ್ಲೇ ಈಗಿನ ಕಾಸರಗೋಡು ಜಿಲ್ಲೆಯ ದಕ್ಷಿಣ ತುದಿಯಲ್ಲಿರುವ ತ್ರಿಕರಪುರದವರೆಗೆ ವ್ಯಾಪಿಸಿತ್ತು. ಮದ್ರಾಸ್ ಸಂಸ್ಥಾನದ ಭಾಗವಾಗಿದ್ದ ಈ ಜಿಲ್ಲೆಯ ಹೆಚ್ಚಿನ ಕೈಗಾರಿಕೆಗಳು ಮಂಗಳೂರಿನಲ್ಲೇ ಕೇಂದ್ರೀಕೃತವಾಗಿದ್ದವು. ಬೀಡಿ ಕೈಗಾರಿಕೆಯಲ್ಲಿ ಅಂದು ಪಿ.ವಿ.ಎಸ್, ಗ್ರೇಟ್ ದರ್ಬಾರ್, ಸುವಾಸಿನಿ ಮತ್ತು ಗಣೇಶ್ ಪ್ರಸಿದ್ಧ ಕಂಪನಿಗಳಾಗಿದ್ದವು. ಬೀಡಿ ಫ್ಯಾಕ್ಟರಿಗಳಲ್ಲಿ ಗಂಡಸರು ಮಾತ್ರವೇ ಬೀಡಿ ಕಟ್ಟುತ್ತಿದ್ದ ಅಂದಿನ ಕಾಲದಲ್ಲಿ ಜಿಲ್ಲೆಯ ದಕ್ಷಿಣ ಭಾಗವಾಗಿದ್ದ ಕಾಸರಗೋಡು ತಾಲೂಕಿನಿಂದ ಮಾತ್ರವಲ್ಲದೇ ದಕ್ಷಿಣದ ಗಡಿಯಾಚೆಗಿನ ಮಲಬಾರ್ ಪ್ರದೇಶದಿಂದಲೂ ನಿರುದ್ಯೋಗಿ ಯುವಕರು ಬೃಹತ್ ಸಂಖ್ಯೆಯಲ್ಲಿ ಮಂಗಳೂರಿಗೆ ಬಂದು ಇಲ್ಲಿನ ಬೀಡಿ ಫ್ಯಾಕ್ಟರಿಗಳಲ್ಲಿ ಕೆಲಸಕ್ಕೆ ಸೇರುತ್ತಿದ್ದರು.

ಮಲಬಾರ್ ಪ್ರದೇಶದಿಂದ ಬಂದ ಬೀಡಿ ಕಾರ್ಮಿಕರು ಕೇರಳದಲ್ಲಿ ಆಗಲೇ ತೀವ್ರವಾಗಿ ಬೆಳೆದು ಬಂದಿದ್ದ ಟ್ರೇಡ್ ಯೂನಿಯನ್ ಪ್ರಜ್ಞೆಯನ್ನೂ ತಮ್ಮೊಂದಿಗೆ ತಂದರು. ಕೇರಳದ ಕಾರ್ಮಿಕ ಮುಖಂಡರಾಗಿದ್ದ ಪಿ.ಕೃಷ್ಣಪಿಳ್ಳೆ, ಎ.ಕೆ.ಗೋಪಾಲನ್, ಎನ್.ಸಿ.ಶೇಖರ್, ಕೆ.ಪಿ.ಗೋಪಾಲನ್ ಮೊದಲಾದವರು ಆಗಿಂದಾಗ ಮಂಗಳೂರಿಗೆ ಬಂದು ಇಲ್ಲಿನ ಕಾರ್ಮಿಕರನ್ನು ಸಂಘಟಿಸುವುದರಲ್ಲಿ ಮಹತ್ವದ ಪಾತ್ರ ವಹಿಸಿದರು.

1935 ರಲ್ಲಿ, ಅಧ್ಯಾಪಕರಾಗಿದ್ದ ಎಸ್.ಎನ್.ಹೊಳ್ಳರು ಉದ್ಯೋಗ ಕಳಕೊಂಡು ಕಾರ್ಮಿಕ ಚಳುವಳಿಗೆ ಬಂದರು. ಉತ್ತಮ ವಾಗ್ಮಿಯೂ ನಾಟಕಕಾರರೂ ಆಗಿದ್ದ ಹೊಳ್ಳರು ಅಂದಿನ ಕಾಲದಲ್ಲಿ ಕಾರ್ಮಿಕ ವರ್ಗದ ಚಳುವಳಿಯಲ್ಲಿ ಆಯಸ್ಕಾಂತದಂತಹ ಪ್ರಭಾವ ಬೀರಿದರು. ಇದೇ ಸಮಯದಲ್ಲಿ ಕಾಂಗ್ರೆಸ್ ಸೋಶಲಿಸ್ಟ್ ಪಕ್ಷದಲ್ಲಿ ಸಕ್ರಿಯರಾಗಿದ್ದ ಎ.ಕೃಷ್ಣ ಶೆಟ್ಟರು ಕಾರ್ಮಿಕ ವರ್ಗದ ಚಳುವಳಿಯನ್ನು ಪ್ರವೇಶಿಸಿದರು. ಸಿಂಪ್ಸನ್ ಸೋನ್ಸರೂ ಇದೇ ಸಮಯದಲ್ಲಿ ಕಾರ್ಮಿಕ ರಂಗದಲ್ಲಿ ಸಕ್ರಿಯವಾಗಿ



…. ನೂರಾರು ಜಾಥಾಗಳು

ದುಡಿಯಲಾರಂಭಿಸಿದರು. 1939 ರ ನೇಯ್ಗೆ ಕಾರ್ಮಿಕರ ಸಮರಶೀಲ ಹೋರಾಟದಿಂದ ಪ್ರಭಾವಿತರಾಗಿ, ಆಗ ವಿದ್ಯಾರ್ಥಿಯಾಗಿದ್ದ ಬಿ.ವಿ.ಕಕ್ಕಿಲಾಯರು ಕಾರ್ಮಿಕ ಚಳುವಳಿಗೆ ಧುಮುಕಿದರು. ಬೊಂಬಾಯಿಯಲ್ಲಿ ಕಮ್ಯುನಿಸ್ಟ್ ಪಕ್ಷದ ಸಕ್ರಿಯ ಕಾರ್ಯಕರ್ತರಾಗಿದ್ದ ಎ.ಶಾಂತರಾಮ ಪೈಯವರು 1942ರಲ್ಲಿ ಮಂಗಳೂರಿಗೆ ಬಂದು ಇಲ್ಲಿನ ಟ್ರೇಡ್ ಯೂನಿಯನ್ ಚಳುವಳಿಗೆ ಸೇರಿದರು.

ಆರಂಭದಲ್ಲಿ ಬೀಡಿ ಕಾರ್ಮಿಕರು ಸಂಘಟಿತರಾಗುವುದೇ ತುಂಬಾ ಕಷ್ಟಕರವಾಗಿತ್ತು. ಸಂಘದ ಕಾರ್ಯಕರ್ತರೆಂದು ಗುರುತಿಸಲ್ಪಟ್ಟವರಿಗೆ ಮಾಲಕರು ವಿಪರೀತ ಕಿರುಕುಳ ನೀಡುತ್ತಿದ್ದರು. ಮಾಲಕರ ದಬ್ಬಾಳಿಕೆಗೆ ವಿರುದ್ಧವಾಗಿ ಕಾರ್ಮಿಕರು ಗುಟ್ಟಾಗಿ ಒಗ್ಗಟ್ಟಾಗ ತೊಡಗಿದರು. ಮೊದಲ ಹಂತದಲ್ಲಿ ಬೀಡಿ ಕಾರ್ಮಿಕರು ಕೂಲಿ ಏರಿಕೆಯ ಬೇಡಿಕೆಯನ್ನೇನೂ ಮುಂದಿಡಲಿಲ್ಲ. ಬದಲಾಗಿ, ಕೆಲಸ ಕೊಡದೆ ಕಾರ್ಮಿಕರನ್ನು ಹೊರ ಹಾಕುವುದನ್ನು ವಿರೋಧಿಸಿ, ಬೀಡಿಕಟ್ಟಲು ಕುಳಿತುಕೊಳ್ಳುವ ಸ್ಥಳ ನಿರ್ಮಲವಾಗಿರಬೇಕೆಂದು ಒತ್ತಾಯಿಸಿ ಹೋರಾಟ ನಡೆಸಿದರು. ತಂಬಾಕಿನ ಕಸವನ್ನು ಕಾರ್ಮಿಕರೇ ಗಾಳಿಸಿ ತೆಗೆಯಬೇಕೆಂಬುದನ್ನು ವಿರೋಧಿಸಿದರು. ಬೀಡಿ ಕಟ್ಟುವ ನೂಲನ್ನು ಮಾಲಿಕರೇ ಸುತ್ತಿಸಿ ಕೊಡಬೇಕೆಂದು ಒತ್ತಾಯಿಸಿದರು. ಪಿ.ವಿ.ಎಸ್., ಗ್ರೇಟ್ ದರ್ಬಾರ, ಸುವಾಸಿನಿ ಮೊದಲಾದ ಕಾರ್ಖಾನೆಗಳಲ್ಲಿ ಇಂತಹ ಅನೇಕ ಹೋರಾಟಗಳು ನಡೆದು ಕಾರ್ಮಿಕರ ಬೇಡಿಕೆಗಳನ್ನು ಮಾಲಿಕರು ಒಪ್ಪಲೆಬೇಕಾಯಿತು. ಅಷ್ಟೇ ಅಲ್ಲದೆ, ಬೀಡಿ ಕಟ್ಟಲು ಬೇಕಾದ ಸೊಪ್ಪು, ಕುಕ್ಕೆ, ಗೋಣಿತುಂಡು, ಮತ್ತು ತಂಬಾಕು ಹಾಕಿಡುವ ಡಬ್ಬಿಗಳನ್ನು ಮಾಲಿಕರೇ ಒದಗಿಸಬೇಕೆಂಬ ಬೇಡಿಕೆಗಳನ್ನು ಬೀಡಿ ಮಾಲಿಕರು ಒಪ್ಪಿಕೊಳ್ಳಬೇಕಾಯಿತು.

ವರ್ಗ ಪ್ರಜ್ಞೆ ಮತ್ತು ರಾಜಕೀಯ ಪ್ರಜ್ಞೆ

ಆರಂಭದಿಂದಲೇ ಉನ್ನತಮಟ್ಟದ ವರ್ಗಪ್ರಜ್ಞೆಯನ್ನು, ರಾಜಕೀಯ ಪ್ರಜ್ಞೆಯನ್ನು ಹೊಂದಿದ್ದ ಬೀಡಿ ಕಾರ್ಮಿಕರು ತಮ್ಮ ಚಟುವಟಿಕೆಗಳನ್ನು ತಮ್ಮ ಸಮಸ್ಯೆಗಳಿಗಷ್ಟೇ ಸೀಮಿತಗೊಳಿಸಿರಲಿಲ್ಲ. 1942-43 ರಲ್ಲಿ ಎರಡನೇ ಮಹಾಯುದ್ಧ ನಡೆಯುತ್ತಿರುವಾಗ, ಕಾಳಸಂತೆಕೋರರು ಆಹಾರ ಧಾನ್ಯಗಳನ್ನೆಲ್ಲಾ ಬಚ್ಚಿಟ್ಟು ಜನಸಾಮಾನ್ಯರನ್ನು ಉಪವಾಸ ಕೆಡವಿದಾಗ, ಬಚ್ಚಿಟ್ಟ ಆಹಾರ ಧಾನ್ಯಗಳನ್ನು ಬಯಲಿಗೆಳೆಯುವುದರಲ್ಲಿ ಬೀಡಿ ಕಾರ್ಮಿಕ ಸ್ವಯಂಸೇವಕರು ಮಾಡಿದ ಕೆಲಸ ತುಂಬಾ ಮಹತ್ವದ್ದಾಗಿತ್ತು. ರಾತ್ರಿ ವೇಳೆಗೆ ಕಾಳಸಂತೆಕೋರರು ದೋಣಿಗಳಲ್ಲಿ ರಹಸ್ಯವಾಗಿ ಅಕ್ಕಿ ಸಾಗಿಸುತ್ತಿದ್ದಾಗ ರಾತ್ರಿಯೆಲ್ಲಾ ಕಾದು ನಿಂತು ಅದನ್ನು ತಡೆದು, ಅಕ್ಕಿಯನ್ನು ಜನರಿಗೆ ಹಂಚಿದ ಕೀರ್ತಿ ಬಂಟ್ವಾಳದ ಬೀಡಿ ಮಜೂರರದ್ದು. 1946 ರಲ್ಲಿ ಹಂಚಿನ ಕೆಲಸಗಾರರು ಬೋನಸಿಗಾಗಿ ನಡೆಸಿದ ಪ್ರಥಮ ಮುಷ್ಕರದ ಸಮಯದಲ್ಲಿ ಕಾರ್ಖಾನೆಗಳ ಗೇಟಿನ ಮುಂದೆ ಬಾವುಟ ನಿಲ್ಲುವುದು, ಮುಷ್ಕರಕ್ಕೆ ಸಹಾಯ ಸಂಗ್ರಹಿಸುವುದು, ಗಂಜಿ ಕೇಂದ್ರಗಳನ್ನು ನಡೆಸುವುದು, ಇತ್ಯಾದಿ ಕೆಲಸಗಳನ್ನು ಬೀಡಿ ಮತ್ತು ನೇಯ್ಗೆ ಕಾರ್ಮಿಕರು ಮಾಡಿದ್ದಾರೆ.

ಸ್ವಾತಂತ್ರ್ಯಕ್ಕೆ ಮೊದಲು ಜನವರಿ 26ನ್ನು ಸ್ವಾತಂತ್ರ್ಯ ದಿನವೆಂದು ಆಚರಿಸಲಾಗುತ್ತಿತ್ತು. ಸ್ವಾತಂತ್ರ್ಯ ಹೋರಾಟದ ಅಂಗವಾಗಿ ನಡೆಯುತ್ತಿದ್ದ ಈ ಕಾರ್ಯಕ್ರಮಗಳಲ್ಲಿ ಬೀಡಿ ಕಾರ್ಮಿಕರು ಪ್ರತಿ ವರ್ಷವೂ ಉತ್ಸಾಹದಿಂದ ಭಾಗವಹಿಸುತ್ತಿದ್ದರು. ಜನವರಿ 26 ರಂದು ಬೆಳಿಗ್ಗೆ ಬೀಡಿ ಕಾರ್ಮಿಕರು ಪ್ರಭಾತ ಫೇರಿ ಹೊರಟು, ಧ್ವಜಾರೋಹಣ ಮಾಡಿ ಸಭೆ ನಡೆಸುತ್ತಿದ್ದರು. ರಾಷ್ಟ್ರೀಯ ಮುಂದಾಳುಗಳನ್ನು ಬ್ರಿಟಿಷ್ ಸರಕಾರವು ಬಂಧಿಸಿ ಜೈಲಿನಲ್ಲಿರಿಸಿದಾಗ 1945 ರ ಜನವರಿ 26 ರಂದು ಮಂಗಳೂರಿನ ಬೀಡಿ ಕಾರ್ಮಿಕರು ಸ್ವಾತಂತ್ರ್ಯ ದಿನದ ಸಂದೇಶವನ್ನು ಜನರಿಗೆ ತಲುಪಿಸಲು ಮೆರವಣಿಗೆ ನಡೆಸಿ ಬಂಧನಕ್ಕೆ ಒಳಗಾಗಿ ಜೈಲುಶಿಕ್ಷೆಯನ್ನು ಅನುಭವಿಸಿದರು.

ಸಮರಶೀಲ ಹೋರಾಟಗಳು

ಕೂಲಿ ಹೆಚ್ಚಳಕ್ಕಾಗಿ ಬೀಡಿ ಕಾರ್ಮಿಕರ ಮೊತ್ತ ಮೊದಲ ಮುಷ್ಕರ 1940 ರಲ್ಲಿ ಪಿ.ವಿ.ಎಸ್.ಬೀಡಿ ಕಾರ್ಖಾನೆಯಲ್ಲಿ ನಡೆಯಿತು. ಅಲ್ಲಿ 700 ಮಂದಿ ಬೀಡಿ ಕಾರ್ಮಿಕರಿದ್ದರು. ಒಂದು ಸಾವಿರ ಬೀಡಿಗೆ ಆರು ಆಣೆ ಕೊಡುತ್ತಿದ್ದರು. ಮುಷ್ಕರದ ಪರಿಣಾಮವಾಗಿ ಕೂಲಿಯಲ್ಲಿ ಹೆಚ್ಚಳವಾಯಿತು.

1946 ರ ಅಕ್ಟೋಬರ್ ತಿಂಗಳಿನಲ್ಲಿ ದಕ್ಷಿಣ ಕನ್ನಡ ಮತ್ತು ಮಲಬಾರ್ ಜಿಲ್ಲೆಯ ಬೀಡಿ ಕಾರ್ಮಿಕರು ಕೂಲಿ ಏರಿಕೆ ಬೋನಸ್ ಬೇಡಿಕೆಯನ್ನು ಮುಂದಿಟ್ಟು ಮುಷ್ಕರವನ್ನು ಆರಂಭಿಸಿದರು. ಮುಷ್ಕರವನ್ನು ಮುರಿಯುವ ಹತಾಶ ಯತ್ನಗಳ ಅಂಗವಾಗಿ ಮಾಲಿಕರು ಹಳ್ಳಿಗಳಲ್ಲಿ ಬೀಡಿ ತಯಾರಿಸಲು ಆರಂಭಿಸಿದರು. ಹಳ್ಳಿಗಳಿಂದ ಬರುತ್ತಿದ್ದ ಬೀಡಿಯನ್ನು ತಡೆಯಲು ಡಿಪೋಗಳ ಮುಂದೆ ಪಿಕೆಟಿಂಗ್ ನಡೆಸಿದ ನೂರಾರು ಮಂದಿ ಕಾರ್ಮಿಕರನ್ನು ಬಂಧಿಸಲಾಯಿತು. ಹಲವಾರು ಕಡೆಗಳಲ್ಲಿ ಲಾಠೀ ಚಾರ್ಜ್ ನಡೆಯಿತು. ಅನೇಕ ಕಾರ್ಮಿಕರು ಜೈಲು ಶಿಕ್ಷೆಯನ್ನು ಅನುಭವಿಸಿದರು. ಬೀಡಿ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುತ್ತಿದ್ದ ಪ್ರದೇಶಗಳಲ್ಲಿ ಪೋಲೀಸರು ರಾತ್ರಿ ಹೊತ್ತಿಗೆ ಮನೆ ಮನೆಗೆ ನುಗ್ಗಿ ಕಾರ್ಮಿಕರನ್ನು ಹೊಡೆದರು. ಸಿಕ್ಕ ಸಿಕ್ಕಲ್ಲಿ ಕಾರ್ಮಿಕರನ್ನು ತಡೆದು ನಿಲ್ಲಿಸಿ, ಉದ್ದದ ಉಗುರು ಬೆಳೆಸಿದವರನ್ನೆಲ್ಲಾ ಹೊಡೆದರು. ಮಾಲಿಕರ ಹಠಮಾರಿತನ ಮತ್ತು ಪೋಲೀಸರ ದೌರ್ಜನ್ಯಗಳನ್ನು ಎದುರಿಸಿ 59 ದಿನಗಳವರೆಗೆ ಈ ಮುಷ್ಕರ ನಡೆಯಿತು. ಅಂದು ಮದ್ರಾಸ್ ಸರಕಾರದಲ್ಲಿ ಕಾರ್ಮಿಕ ಸಚಿವರಾಗಿದ್ದ ವಿ.ವಿ.ಗಿರಿಯವರು ಮಂಗಳೂರಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಬೀಡಿ ಕಾರ್ಮಿಕರ ಸಂಘದ ಪ್ರತಿನಿಧಿಗಳು ಅವರನ್ನು ಭೇಟಿಯಾಗಿ ಮನವಿ ಅರ್ಪಿಸಿದರು. ಸಚಿವರು ಬೀಡಿ ಕಾರ್ಮಿಕರ

ಬಿ.

ದ ಅವಲೋಕನ

ನ್ನು ಜಿಲ್ಲಾ ನ್ಯಾಯಾಧೀಶರ
ನಿಗೆ ವಹಿಸಿಕೊಟ್ಟದ್ದರಿಂದ
ಹಿಂತೆಗೆಯಲಾಯಿತು.
ನ್ಯಾಯಾಧೀಶರು ಬೀಡಿ ಕಾರ್ಮಿಕರ
ಕುರಿತು ಆರ್ಬಿಟ್ರೇಶನ್
ನ್ನಾಗಲೇ ಈ ವಿಚಾರದಲ್ಲಿ ಕಾರ್ಮಿಕರ
ವಾದಿಸಬೇಕಾಗಿದ್ದ ಬಿ.ವಿ.ಕಕ್ಕಿಲ್ಲಾಯ,
ಬರ್ ಮೊದಲಾದವರನ್ನು ಬ್ರಿಟೀಷ್
ಬಂಧಿಸಿ ಸ್ಥಾನಬದ್ಧತೆಯಲ್ಲಿ ಇರಿಸಿತು.
ಗ್ಗ ಸನ್ನಿವೇಶದಲ್ಲಿ, ಪ್ರಸಿದ್ಧ
ಗಳಾಗಿದ್ದ ರಂಗರಾವ್ ತಲಚೇರಿಕರ್
ಂಗಳೂರಿಗೆ ಬಂದು ಕಾರ್ಮಿಕರ
ವಾದಿಸಿದರು. ಒಂದು ತಿಂಗಳ
ಮತ್ತು ಎರಡಾಣೆ ಕೂಲಿ ಏರಿಕೆ
ಎವಾರ್ಡ್ ನೀಡಲಾಯಿತು. ಈ
ನ್ನು ಜಾರಿಗೊಳಿಸಲು ಕೂಡಾ



…. ಸತ್ಯಾಗ್ರಹಗಳು

ರ್ಮಿಕರು ಸುದೀರ್ಘ ಹೋರಾಟ
ಡಿ ಪೋಲಿಸ್ ದೌರ್ಜನ್ಯಗಳನ್ನು
ಭವಿಸಬೇಕಾಯಿತು.

ಪದ್ಧತಿಯ ಆರಂಭ

ಸ್ವಾತಂತ್ರ್ಯ ಬಂದಾಗ ಅಧಿಕಾರಕ್ಕೆ ಬಂದ
ಸರಕಾರವು 1948 ರಲ್ಲಿ ಅನೇಕ
ಮುಖಂಡರನ್ನು ಬಂಧಿಸಿ
ತು. ಅನೇಕ ಮುಂದಾಳುಗಳು
ದರು. ಟ್ರೇಡ್ ಯೂನಿಯನ್
ಪೊಲೀಸರು ದಾಳಿ ಮಾಡಿ ಬೀಗ
ಈ ದಬ್ಬಾಳಿಕೆಗಳ ಪರಿಣಾಮವಾಗಿ
ಯೂನಿಯನ್ ಚಟುವಟಿಕೆಗಳು
ಗಿತಗೊಂಡವು.
ಮಾಲಿಕರು ಈ ಪರಿಸ್ಥಿತಿಯ
ಲಾಭ ಪಡೆದರು. ಫ್ಯಾಕ್ಟರಿಯಲ್ಲಿ
ತ್ತಿದ್ದ ಕಾರ್ಮಿಕರಿಗೆ ಎಲೆ ತಂಬಾಕು
ನೆಗಳಲ್ಲಿ ಬೀಡಿ ಕಟ್ಟಿ ತರುವಂತೆ
ದರು. ಅನೇಕ ಕಾರ್ಮಿಕರಿಗೆ
ಕಂಟ್ರಾಕ್ಟ್ ಕೊಟ್ಟು ಅವರನ್ನು ಹೊರಗೆ
ು. ಫ್ಯಾಕ್ಟರಿಗಳಲ್ಲಿ ಕಾರ್ಮಿಕರಿಗೆ
ಸವಲತ್ತುಗಳು ಮಾಯವಾದವು.
ಕಸಿದುಕೊಂಡರು. ಬೀಡಿ ಕೈಗಾರಿಕೆ
ಗೆ ಹರಡಿದ್ದರಿಂದ ಮಹಿಳೆಯರೂ
ಡಗಿದರು. ಪೇಟೆ ಪಟ್ಟಣಗಳಲ್ಲಿದ್ದ
ಕೆ ದೂರದ ಹಳ್ಳಿಗಳಲ್ಲಿ ಹರಡಿತು.
ದ 1952 ರೊಳಗಿನ ಸಾಲ್ಕೈದು
ಲ್ಲಿ ಫ್ಯಾಕ್ಟರಿ ಪದ್ಧತಿಯೇ
ಯಿತು. ಕಂಟ್ರಾಕ್ಟ್ ಪದ್ಧತಿ
ಯಿತು.

ಳ ಮುನ್ನಡೆ -

ಜಾಥಾ

ಪ್ರಥಮ ಸಾರ್ವತ್ರಿಕ ಚುನಾವಣೆಗೆ
ಬಂಡಲು ಟ್ರೇಡ್ ಯೂನಿಯನ್



ಚಟುವಟಿಕೆಗಳ ಮೇಲಿದ್ದ ನಿರ್ಬಂಧಗಳನ್ನು ತೆಗೆದು ಹಾಕಲಾಯಿತು. ಜೈಲುಗಳಲ್ಲಿದ್ದ ಮುಖಂಡರ ಬಿಡುಗಡೆಯಾಯಿತು. ಬೀಡಿ ಕಾರ್ಮಿಕರನ್ನು ಸಂಘಟಿಸುವ ಕೆಲಸ ಪುನರಾರಂಭಿಸಲಾಯಿತು.

ರಾಜ್ಯದ ಬೀಡಿ ಕಾರ್ಮಿಕರ ಪ್ರಥಮ ಸಮ್ಮೇಳನ 1954 ರಲ್ಲಿ ಬಂಟ್ವಾಳದಲ್ಲಿ ಜರುಗಿತು. ಬೀಡಿ ಕಾರ್ಮಿಕರಿಗೆ ಕನಿಷ್ಟ ಕೂಲಿಗಾಗಿ ಒತ್ತಾಯಿಸಿ ಚಳುವಳಿ ನಡೆಸಬೇಕೆಂದು ಈ ಸಮ್ಮೇಳನದಲ್ಲಿ ತೀರ್ಮಾನಿಸಲಾಯಿತು ದೀರ್ಘಕಾಲ ನಡೆದ ಈ ಹೋರಾಟಗಳ ಅಂಗವಾಗಿ 1958ರ ನವೆಂಬರ್ ತಿಂಗಳ ಮೊದಲನೇ ವಾರದಲ್ಲಿ ಬೆಂಗಳೂರಿಗೆ ಬೀಡಿ ಕಾರ್ಮಿಕರ ಕಾಲ್ನಡಿಗೆ ಜಾಥಾ ನಡೆಸಲಾಯಿತು. ಉಡುಪಿಯಿಂದ ಹೊರಟು, ಮಂಗಳೂರು, ಬಂಟ್ವಾಳ, ಪುತ್ತೂರು, ಮೈಸೂರಿನಿಂದಾಗಿ ಬೆಂಗಳೂರಿಗೆ ತಲುಪಿದ ಈ ಜಾಥಾದಲ್ಲಿ ಯು.ಕೃಷ್ಣ, ಶೀನ ನಾಯಕ, ಯು.ಜನಾರ್ಧನ ನಾಯಕ, ಬಿ.ಮಂಜುನಾಥ ಸಪಲ್ಯ, ಹೂವಯ್ಯ ಬಂಗೇರ, ಕದ್ರಿ ಕೃಷ್ಣಪ್ಪ, ಬಿ.ವಿಶ್ವನಾಥ ನಾಯಕ ಮೊದಲಾದವರನ್ನು ಒಳಗೊಂಡು ಒಟ್ಟು 45 ಮಂದಿ ಭಾಗವಹಿಸಿದರು. ವಿಧಾನ ಸೌದದ ಮುಂದೆ ಪ್ರದರ್ಶನ ನಡೆಸಿ ಅಂದಿನ ಮುಖ್ಯಮಂತ್ರಿ ಬಿ.ಡಿ.ಜತ್ತಿಯವರಿಗೆ ಮನವಿ ಅರ್ಪಿಸಲಾಯಿತು. ಇದರ ಪರಿಣಾಮವಾಗಿ ಸರಕಾರವು ಬೀಡಿ ಕಾರ್ಮಿಕರಿಗೆ ಕನಿಷ್ಟ ಕೂಲಿ ನಿಗದಿಗೊಳಿಸಲು ಸಮಿತಿಯೊಂದನ್ನು ರಚಿಸಿತು. ದಕ್ಷಿಣ ಕನ್ನಡ ಜಿಲ್ಲೆಯ ಬೀಡಿ ಕಾರ್ಮಿಕರ ಪ್ರತಿನಿಧಿಯಾಗಿ ಯು.ಕೃಷ್ಣ ಅವರು ಸಮಿತಿಯ ಒಬ್ಬ ಸದಸ್ಯರಾಗಿದ್ದರು. ಸಮಿತಿಯ ಶಿಫಾರಸು ಬಂದ ನಂತರ ಸರಕಾರವು ಸಾವಿರ ಬೀಡಿಗೆ ರೂ.1-91 ಕನಿಷ್ಟ ಕೂಲಿ ನಿಗದಿಗೊಳಿಸಿ ಪ್ರಕಟಣೆ ಹೊರಡಿಸಿತು. ಈ ಕನಿಷ್ಟ ಕೂಲಿಯನ್ನು ಜಾರಿಗೊಳಿಸಲು ಬೀಡಿ ಕಾರ್ಮಿಕರು ಸುದೀರ್ಘ ಹೋರಾಟ ನಡೆಸಬೇಕಾಯಿತು.

ಹೋರಾಟದ ಮೂಲಕ ಪಡೆದ ಕಾನೂನು

1963 ರಲ್ಲಿ ಮಂಗಳೂರಿನಲ್ಲಿ ಜರುಗಿದ ಕರ್ನಾಟಕ ರಾಜ್ಯದ ಬೀಡಿ ಕಾರ್ಮಿಕರ ಎರಡನೇ ಸಮ್ಮೇಳನದಲ್ಲಿ ಬೀಡಿ ಕೆಲಸಗಾರರ ಹಿತರಕ್ಷಣಾ ಕಾನೂನೊಂದನ್ನು ಕೂಡಲೇ ಜಾರಿಗೆ ತರಬೇಕೆಂದು ಸರಕಾರವನ್ನು ಒತ್ತಾಯಿಸಲಾಯಿತು. ಜಿಲ್ಲೆಯಾದ್ಯಂತ ಬೀಡಿ ಕಾರ್ಮಿಕರಿಂದ ಈ ಬೇಡಿಕೆಯ ಮನವಿಗೆ ಸಹಿ ಸಂಗ್ರಹಿಸಿ ಸರಕಾರಕ್ಕೆ ಒಪ್ಪಿಸಲಾಯಿತು. ಜಿಲ್ಲಾ ಕೇಂದ್ರದಲ್ಲಿ ಬೀಡಿ ಕಾರ್ಮಿಕರ ಬೃಹತ್ ಪ್ರದರ್ಶನ ನಡೆಸಲಾಯಿತು. ಇವೆಲ್ಲದರ ಪರಿಣಾಮವಾಗಿ ಸರಕಾರವು ಮೈಸೂರು ಬೀಡಿ ಇಂಡಸ್ಟ್ರೀಯಲ್ ಪ್ರೆಮಿಸಸ್ ಆಕ್ಟ್ 1964 ಎಂಬ ಮಸೂದೆಯನ್ನು ತಾ.29-10-1964 ಗಜೆಟ್‌ನಲ್ಲಿ ಪ್ರಕಟಿಸಿತು. ನಂತರ ಅದನ್ನು ವಿಧಾನ ಸಭೆಯಲ್ಲಿ ಅಂಗೀಕರಿಸಿ ಜಾರಿ ಮಾಡಲಾಯಿತು.

ಬೀಡಿ ಕಾರ್ಮಿಕರಿಗೆ ರಾಷ್ಟ್ರಮಟ್ಟದಲ್ಲಿ ಕಾನೂನು ರಚಿಸಬೇಕೆಂದು ಕಾಮ್ರೇಡ್ ಎ.ಕೆ.ಗೋಪಾಲನ್ ಅವರು ಪಾರ್ಲಿಮೆಂಟಿನಲ್ಲಿ ನಿರಂತರವಾಗಿ ಒತ್ತಾಯಿಸಿದ ಪರಿಣಾಮವಾಗಿ 1966 ರಲ್ಲಿ "ದಿ ಬೀಡಿ ಎಂಡ್ ಸಿಗಾರ್ ವರ್ಕರ್ಸ್(ಕಂಡಿಶನ್ಸ್ ಆಫ್ ಎಂಪ್ಲಾಯ್ಮೆಂಟ್) ಆ್ಯಕ್ಟ್ 1966" ಎಂಬ ಕಾನೂನು ಜಾರಿಗೆ ಬಂತು. ಇದರ ಪರಿಣಾಮವಾಗಿ ರಾಜ್ಯ ಸರಕಾರವು ಮೈಸೂರು ಬೀಡಿ ಇಂಡಸ್ಟ್ರೀಯಲ್ ಪ್ರಿಮಿಸಸ್ ಆ್ಯಕ್ಟ್ 1964 ನ್ನು ವಾಪಾಸು ತೆಗೆದುಕೊಂಡು ಕೇಂದ್ರದ ಕಾನೂನನ್ನೇ ಜಾರಿ ಮಾಡಲು ತೀರ್ಮಾನಿಸಿತು.


ಪ್ರೊವಿಡೆಂಟ್ ಫಂಡ್ ಜಾರಿಗಾಗಿ ಧೀರ ಹೋರಾಟ

ಪ್ರೊವಿಡೆಂಟ್ ಫಂಡ್ ಜಾರಿಗಾಗಿ ನಡೆದ ಬೀಡಿ ಕಾರ್ಮಿಕರ ಇತ್ತೀಚಿನ ವರ್ಷಗಳ ಅತ್ಯಂತ ಧೀರ ಹೋರಾಟವಾಗಿತ್ತು. 1978 ರಿಂದ ಬೀಡಿ ಕಾರ್ಮಿಕರಿಗೆ ಪ್ರೊವಿಡೆಂಟ್ ಫಂಡ್ ಅನ್ವಯವಾದ ನಂತರ ಪಿ.ವಿ.ಎಸ್. ಬೀಡಿಯ ಮಾಲಿಕರು ಅದರ ವಿರುದ್ಧ ಸುಪ್ರಿಂ ಕೋರ್ಟಿಗೆ ಹೋದರು. ಇತರ ಮಾಲಿಕರು ಕಾರ್ಮಿಕರ ಕೂಲಿಯಿಂದ ಪ್ರೊವಿಡೆಂಟ್ ಫಂಡಿನ ಹಣವನ್ನು ಕಡಿತ ಮಾಡಿದರಾದರೂ ಅದಕ್ಕೆ ತಮ್ಮ ಪಾಲಿನ ವಂತಿಗೆಯನ್ನು ಸೇರಿಸಿ ಸರಕಾರಕ್ಕೆ ಕಟ್ಟುವ ಬದಲು ಹಣವನ್ನು ತಮ್ಮ ಕೈಗಳಲ್ಲೇ ಉಳಿಸಿಕೊಂಡರು. ಪ್ರೊವಿಡೆಂಟ್ ಫಂಡಿನ ಹೆಸರಿನಲ್ಲಿ ಕೂಲಿಯಿಂದ ಕಡಿತವಾದ ಹಣಕ್ಕೆ ಪ್ರೊವಿಡೆಂಟ್ ಫಂಡ್ ಸಂಸ್ಥೆಯಿಂದ ಸಿಗಬೇಕೆಂದು ಸುಮಾರು 4 ವರ್ಷಗಳ ಕಾಲ ಸಿಐಟಿಯು ನೇತೃತ್ವದಲ್ಲಿ ಕಾರ್ಮಿಕರು ವಿವಿಧ ರೂಪಗಳ ಚಳುವಳಿಗಳ ಮೂಲಕ ಒತ್ತಾಯಿಸಿದರೂ ಸರಕಾರದಿಂದ ಅನುಕೂಲಕರವಾದ ಪ್ರತಿಕ್ರಿಯೆ ಬರಲಿಲ್ಲ. ಈ ಹಿನ್ನೆಲೆಯಲ್ಲಿ 1982 ರ ಏಪ್ರಿಲ್ 24 ಮತ್ತು 25 ರಂದು ಬಂಟ್ವಾಳದಲ್ಲಿ ಜರುಗಿದ ಕರ್ನಾಟಕ ರಾಜ್ಯ

ಪುಟ 9ಕ್ಕೆ

ಕನಿಷ್ಟ ಕೂಲಿಗಾಗಿ ಹೋರಾಟ

ಸಾವಿರ ಬೀಡಿಗೆ 50 ರೂಪಾಯಿ ಕನಿಷ್ಟ ಕೂಲಿ, ಬೆಲೆ ಸೂಚ್ಯಾಂಕದ 1300ಕ್ಕಿಂತ ಮೇಲಿನ ಪ್ರತೀ ಪಾಯಿಂಟ್ ಏರಿಕೆಗೆ 5 ಪೈಸೆಯಂತೆ ತುಟ್ಟಿಭತ್ತೆ ನಿಗದಿ ಮಾಡಿ ಕನಿಷ್ಟ ಕೂಲಿ ಪ್ರಕಟಿಸಬೇಕೆಂದು ಒತ್ತಾಯಿಸಿ 1995 ಏಪ್ರಿಲ್ 25 ರಿಂದ ರಾಜ್ಯವ್ಯಾಪಿ ಮುಷ್ಕರ ನಡೆಸಲು ಕರ್ನಾಟಕ ರಾಜ್ಯ ಬೀಡಿ ಕಾರ್ಮಿಕರ ಫೆಡರೇಶನ್ ಕರೆ ನೀಡಿತು. ಇದರ ಜತೆಗೆ ಜಿಲ್ಲಾ ಮತ್ತು ತಾಲೂಕು ಕಚೇರಿಗಳ ಮುಂದೆ ಹಾಗೂ ಬೆಂಗಳೂರಿನಲ್ಲಿ ವಿಧಾನಸೌಧದ ಮುಂದೆ ಧರಣಿ ನಡೆಸಲು ತೀರ್ಮಾನಿಸಲಾಯಿತು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಮುಷ್ಕರ ಮತ್ತು ಧರಣಿ ಕಾರ್ಯಕ್ರಮಗಳು ಅಭೂತಪೂರ್ಣವಾಗಿ ಯಶಸ್ವಿಯಾದವು. ಈ ಸಂದರ್ಭದಲ್ಲಿ ಏಪ್ರಿಲ್ 26 ರಂದು ಬೆಂಗಳೂರಿನಲ್ಲಿ ರಾಜ್ಯ ಕಾರ್ಮಿಕ ಸಚಿವ ಗುರುನಾಥ್ ಅವರ ಸಮ್ಮುಖದಲ್ಲಿ ಬೀಡಿ ಮಾಲಿಕರ, ಸರಕಾರಿ ಪ್ರತಿನಿಧಿಗಳ ಮತ್ತು ಕಾರ್ಮಿಕ ನಾಯಕರ ಸಭೆ ನಡೆದು, ಬೀಡಿ ಕಾರ್ಮಿಕರ ಬೇಡಿಕೆಗಳನ್ನು ಈಡೇರಿಸಲು ಕ್ರಮ ಕೈಗೊಳ್ಳುವುದಾಗಿ ಸಚಿವರು ಭರವಸೆ ನೀಡಿದುದರಿಂದ ಮುಷ್ಕರವನ್ನು ತಾ.28-4-1995 ರಂದು ಹಿಂತೆಗೆಯಲಾಯಿತು. ಆದರೆ ಭರವಸೆ ಕೊಟ್ಟಂತೆ ನಡೆದುಕೊಳ್ಳುವುದರಲ್ಲಿ ಸಚಿವರು ವಿಫಲವಾದುದರಿಂದ ತಾ.4.5.1995 ರಿಂದ ಮುಷ್ಕರವನ್ನು ಪುನರಾರಂಭಿಸಲಾಯಿತು. ತಾ.10.5.1995 ರಂದು ಬೆಂಗಳೂರಿನಲ್ಲಿ ಅಂದಿನ ಮುಖ್ಯಮಂತ್ರಿ ಎಚ್.ಡಿ.ದೇವೇಗೌಡರ ಗೃಹ ಕಚೇರಿ 'ಕೃಷ್ಣಾ'ರ ಮುಂದೆ ಸಿಐಟಿಯು ರಾಜ್ಯಾಧ್ಯಕ್ಷ ಎಸ್.ಸೂರ್ಯನಾರಾಯಣ ರಾವ್, ರಾಜ್ಯ ಪ್ರಧಾನ ಕಾರ್ಯದರ್ಶಿ ವಿ.ಜೆ.ಕೆ.ನಾಯರ್ ಮೊದಲಾದವರ ನೇತೃತ್ವದಲ್ಲಿ ರಾಜ್ಯದ ವಿವಿಧ ಭಾಗಗಳಿಂದ ಬಂದ ಸಾವಿರಗಟ್ಟಲೆ ಬೀಡಿ ಕಾರ್ಮಿಕರು ಮತ್ತು ಅಸಂಘಟಿತ ಕ್ಷೇತ್ರದ ಇತರ ಕಾರ್ಮಿಕರು ಧರಣಿ ನಡೆಸಿದರು. ಈ ಎಲ್ಲಾ ಹೋರಾಟಗಳ ಪರಿಣಾಮವಾಗಿ ರಾಜ್ಯ ಸರಕಾರವು ಬೀಡಿ ಕಾರ್ಮಿಕರಿಗೆ ಸಾವಿರ ಬೀಡಿಗೆ ರೂ.36.85 ಕನಿಷ್ಟ ಕೂಲಿ ಮತ್ತು ಗ್ರಾಹಕ ಬೆಲೆ ಸೂಚ್ಯಾಂಕದ 1513 ಅಂಶಗಳ ನಂತರದ ಪ್ರತೀ ಪಾಯಿಂಟಿಗೆ 3 ಪೈಸೆ ತುಟ್ಟಿಭತ್ತೆ ನಿಗದಿಗೊಳಿಸಿ ಕರಡು ಪ್ರಕಟಣೆ ಯನ್ನು ಹೊರಡಿಸಿತು. ಈ ಪ್ರಕಟಣೆಯ ಆಧಾರದಲ್ಲಿ ಅಂತಿಮ ಪ್ರಕಟಣೆಯನ್ನು ಶೀಘ್ರ ಹೊರಡಿಸಬೇಕೆಂದು ಒತ್ತಾಯಿಸಿ ಮಂಗಳೂರಿನ ಪುರಭವನದಲ್ಲಿ ತಾ.13.6.1995 ರಂದು ಬೀಡಿ ಕಾರ್ಮಿಕರ ಜಿಲ್ಲಾ ಮಟ್ಟದ ಬೃಹತ್ ಸಮಾವೇಶ ನಡೆಸಲಾಯಿತು. ಕೊನೆಗೆ ರಾಜ್ಯ ಸರಕಾರವು ತಾ.31.7.1995 ರ ಕರ್ನಾಟಕ ರಾಜ್ಯ ಪತ್ರದಲ್ಲಿ ಕನಿಷ್ಟಕೂಲಿಯ ಅಂತಿಮ ಅಧಿಸೂಚನೆಯನ್ನು ಪ್ರಕಟಿಸಿತು. ಈ ಪ್ರಕಟಣೆಯ ವಿರುದ್ಧ ಬೀಡಿ ಮಾಲಿಕರು ಕರ್ನಾಟಕ ಹೈಕೋರ್ಟಿನಲ್ಲಿ ಸಲ್ಲಿಸಿದ ರಿಟ್ ಅರ್ಜಿಯ ಮೇಲಿನ ಅಂತಿಮ ತೀರ್ಪು ಈ ತನಕ ಬಂದಿಲ್ಲ. ಆದರೆ ತುಟ್ಟಿ ಭತ್ತೆಗೆ ಸಂಬಂಧಿಸಿದಂತೆ ಹೈಕೋರ್ಟು ತಾ.16.4.1997 ರಂದು ತಾತ್ಕಾಲಿಕ ತೀರ್ಪು ನೀಡಿ, ತುಟ್ಟಿಭತ್ತೆ ಪಾಯಿಂಟಿಗೆ 2.5 ಪೈಸೆ ಇರತಕ್ಕದ್ದೆಂದು ಆದೇಶಿಸಿತು. ಈಗ 2.5 ಪೈಸೆಯ ದರದಲ್ಲಿ ತುಟ್ಟಿ ಭತ್ತೆ ಜಾರಿಯಲ್ಲಿದೆ.



ಸಮಾವೇಶವೊಂದರಲ್ಲಿ ವಿಜೆಕೆ ನಾಯರ್, ಮಾಧವ, ಶ್ರೀಯಾನ್, ಶಂಕರ್ ಮತ್ತಿತರರು

ಇನ್ಯಾತಕೆ ಕುಂತಿರುವಿರೋ ಇನ್ನಾದರೂ ಎದ್ದೇಳಿರೋ

ಜೋಯ್ಡದ ಅಭಿವೃದ್ಧಿ ಬಾಯ್ಮಾತು ಆಗುತಿದೆ

ಉತ್ತರಕನ್ನಡದ ಜೋಯ್ಡಾ ತಾಲೂಕು ಪರಿಸ್ಥಿತಿ ಬಗ್ಗೆ ಹೇಳಿದರೆ ಅಷ್ಟು ಅರ್ಥವಾಗಲಿಕ್ಕಿಲ್ಲ. ನೋಡಿಯೇ ಅನುಭವಿಸಬೇಕು. ಕನಿಷ್ಠ ನಾಗರೀಕ ಸೌಲಭ್ಯಗಳೂ ಇಲ್ಲದ. ಹಲವಾರು ಕುಗ್ರಾಮಗಳನ್ನು, ದಟ್ಟ ದಾರಿದ್ರ್ಯ ಬಡತನವನ್ನು ಒಡಲಲ್ಲಿಟ್ಟುಕೊಂಡೇ ಕಗ್ಗತ್ತಲ ಖಂಡ' ದಂತೆ ಇರುವ ಈ ಪ್ರದೇಶ ಆಳವಾದ ನಿರ್ಲಕ್ಷ್ಯ, ನಿರ್ಲಜ್ಜೆಗೆ ಸಾಕ್ಷಿ. ಇಂತಹ ತೀರಾ ಹಿಂದುಳಿದಿರುವ ಪ್ರದೇಶವನ್ನು ಪರಿಚಯಿಸುತ್ತಾ, ಅಲ್ಲಿ ಹೋರಾಟದ ಧ್ವನಿ ಮೊಳಗುತ್ತಿರುವ ಸಂಘಟಿತರಾಗುತ್ತಿರುವ ಬಗ್ಗೆ ವರದಿಯಿದು.

ಯಮುನಾ ಗಾಂವ್ಕರ್

ಕುಡಿವ ನೀರು ಬೇಕು ಅಂದ್ರೆ ಮೌನತಾಳಿ ನೋಡುತಿದ್ರಿ, ರಸ್ತೆ ಸೇತುವೆ ಅಂತ ಅಂದ್ರೆ ಪೆಚ್ಚು ಮೋರೆ ಮಾಡಿಕೊಂಡ್ರಿ, ಒಬ್ಬರಿಗೊಬ್ಬರು ಖುರ್ಚಿಗಾಗಿ ಪೈಪೋಟಿ ನಡೆಸುವಾಗ ಜನರ ಕಷ್ಟ ಕೇಳದಂತೆ ಆಳೋ ಮಂದಿ ಇರುವಾಗ!!

ಶಾಲೆ ಕಾಲೇಜು ಶಿಕ್ಷಣ ಅಂದ್ರೆ ಮೇಲೆ ಕೆಳಗೆ ಮುಖ ಮಾಡಿ, ಜನಾರೋಗ್ಯ ಎಲ್ಲಾರ್ಗೂ ಅಂದ್ರೆ, ಶ್ರೀಮಂತರ್ಗೆ ಮಾತ್ರ ಅಂದ್ರಿ, ಹಗಲು ದರೋಡೆಕೋರರೆಲ್ಲರ ಗುಟ್ಟೆಲ್ಲಾ ರಟ್ಟಾಗಿದೆ., ಆಶ್ವಾಸನೆ ಜಾರಿ ಮಾಡ್ದೆ ಜನರ ಓಟು ಕದ್ದುಕೊಂಡ್ರು

ಗಡಿನಾಡ ಸುಧಾರಣೆಗೆ ದುಡ್ಡಿನ ಮೇಲೆ ದುಡ್ಡು ಬಂತು ಹಣದಾಹಿ ಜನರೆಲ್ಲ ಬಾಚಿ ಬಾಚಿ ದೋಚಿಕೊಂಡ್ರು ಶ್ರೀಮಂತರ ರಾಜಕೀಯದಾಗ ರೈತ ಜನರು ಸೋತು ಹೋಗಿ ಅವರ ಸೇವೆ ಮಾಡಿ ಮಾಡಿ ಸೋತು ಸುಣ್ಣವಾದ್ರು.

ಬರಗಾಲದಿ ಬೆಂದು ಬಳಲಿದ ಅಕ್ಕತಂಗಿಯರೆ,
ಹೊಲಗದ್ದೆಗಳು ದುಡಿದುಡಿದು ದೇಹ ಸವೆಸಿದವರೇ
ಅನ್ಯಾಯ ದಬ್ಬಾಳಿಕೆ ಶೋಷಣೆಯ ಧಿಕ್ಕರಿಸಿ
ಒಂದಾಗಿ ಹೋರಾಡಿ ಬೇಡಿಕೆಯ ಗೆಲ್ಲೋಣ

ಎಂದು ರಸ್ತೆಯುದ್ದಕ್ಕೂ ಹಾಡಿ ಜೋಯ್ಡದಿಂದ ಕಾರವಾರದವರೆಗೆ ಕಾಲ್ನಡಿಗೆ ಜಾಥಾ ಮಾಡಿ ಸಮಸ್ಯೆಯ ತೀವ್ರತೆ ರಾಜ್ಯಕ್ಕೆ ತಿಳಿಸಿ ಸುಮಾರು ಒಂದು ವರ್ಷವಾಗುತ್ತಾ ಬಂತು. ಕರ್ನಾಟಕ ರಾಜ್ಯದಲ್ಲಿ (ನಕಾರಾತ್ಮಕ) 10 ಬೆಳವಣಿಗೆ (ಋಣಾತ್ಮಕವಾಗಿ)ಯ ಈ ತಾಲೂಕಿನಲ್ಲಿ ಜನವಸತಿಯ ಹಳ್ಳಿಗಳು ಕೆಲವಾರು ಮಾತ್ರ.

ಕರ್ನಾಟಕದ ಕಗ್ಗತ್ತಲು ಯಾವುದು?

ಸ್ವತಂತ್ರ ಭಾರತವು ಸ್ವೀಕರಿಸಿದ ಸಂವಿಧಾನದ ಪ್ರಕಾರ ಪ್ರತಿಯೊಬ್ಬ ಭಾರತೀಯನಿಗೂ ಸಿಗಲೇಬೇಕಾದ ಸಂವಿಧಾನಿಕ ಸೌಲಭ್ಯಗಳು ಈ ಪ್ರದೇಶಕ್ಕಿನ್ನೂ ದಕ್ಕಿಲ್ಲ. ಕಗ್ಗತ್ತಲ ಖಂಡ ಆಫ್ರಿಕಾದಂತೆ, ಕರ್ನಾಟಕದ ಕಗ್ಗತ್ತಲು ಯಾವುದೆಂದರೆ ಸಕಲ ಸಂಪದ್ಭರಿತ ವಿಶಾಲ ಭೂಪ್ರದೇಶ ಹೊಂದಿದ ಉತ್ತರ ಕನ್ನಡ ಜಿಲ್ಲೆಯ ಅತಿದೊಡ್ಡ ತಾಲೂಕು ಜೋಯ್ಡ!

ಸುಮಾರು 1890 ಚ.ಕಿ.ಮೀ ವಿಸ್ತೀರ್ಣದ ವಿಶಾಲ ಮೇಲ್ಮೈ ಹೊಂದಿದ ಹಚ್ಚ ಹಸಿರಿನಿಂದ ಕೂಡಿದ ವಿವಿಧ ಪ್ರಭೇದ, ಜಾತಿಯ ಮರ, ಗಿಡಬಳ್ಳಿಗಳು, ಕಪ್ಪು ಕಾಳಿ ನದಿಯ ಉಗಮ ಸ್ಥಾನದಿಂದ ಕಾರವಾರದ ಗಡಿ ಬರುವವರೆಗೂ ಅಲ್ಲಲ್ಲಿ ಆಣೇಕಟ್ಟುಗಳು, ರಾಜ್ಯಕ್ಕೆ ಬೆಳಕು ನೀಡುವ ಜೋಯ್ಡ, ಸುಂದರ ಪ್ರಕೃತಿಯನ್ನು ಹೊಂದಿ ನೋಡುಗರ ಕಣ್ಣಿಗೆ ಖುಷಿ ಕೊಡುತ್ತದೆ. ಆದರೆ ತನ್ನೊಳಗೆ ವ್ಯಥೆಯ ಕಥೆಯನ್ನು ನುಂಗಿಕೊಂಡಿದೆ. ಇದೇ ಜೋಯ್ಡ ತಾಲೂಕಿನ ವಿಪರ್ಯಾಸ.

ದಾಖಲೆಯ ಹಿಂದುಳಿದಿರುವಿಕೆ

ಕರ್ನಾಟಕ ರಾಜ್ಯದ ಅತ್ಯಂತ ಹಿಂದುಳಿದ ಹೈದ್ರಾಬಾದ್ ಕರ್ನಾಟಕದ ಕೆಲವು ತಾಲೂಕುಗಳ ಜೊತೆಗೆ ಜೋಯ್ಡ ತಾಲೂಕು ಕೂಡ ಒಂದು. ಉತ್ತರಕನ್ನಡ ಜಿಲ್ಲೆಯ ವಿವಿಧ ತಾಲೂಕಿನ ಬೆಳವಣಿಗೆಯೊಂದಿಗೆ ಸಮೀಕರಿಸಿದರೆ



ತಾಲ್ಲೂಕು ಅಭಿವೃದ್ಧಿಗಾಗಿ ಒತ್ತಾಯಿಸಿ ಕಾರವಾರಕ್ಕೆ ಕಾಲ್ನಡಿಗೆ ಜಾಥಾ.

ಜೋಯ್ಡದ್ದು ಮಾತ್ರ-10 (ಋಣಾತ್ಮಕ ಹತ್ತು ಬೆಳವಣಿಗೆ) ಬೆಳವಣಿಗೆ ಎಂದರೆ ಹುಬ್ಬೇರಿಸುವಂತಾದೀತು. ಸರ್ಕಾರಿ ಅಂಕಿ ಸಂಖ್ಯೆಗಳ ಪ್ರಕಾರವೇ ಇಷ್ಟಾದರೆ ಇನ್ನು ವಾಸ್ತವಿಕವಾಗಿ ಅತ್ಯಂತ ಕೆಳಮಟ್ಟದ ಬೆಳವಣಿಗೆ.

ಬೆಳೆಗಳು

ಈ ತಾಲೂಕಿನ ಪ್ರಮುಖ ಬೆಳೆ ಏಕದಳ ಧಾನ್ಯ ಭತ್ತವಾದರೆ ರಾಗಿ, ಹುರುಳಿ ಅತ್ಯಲ್ಪ ಪ್ರಮಾಣದಲ್ಲಿ ಉದ್ದು, ಹೆಸರು, ಅಲಸಂದಿಯಂಥ ದ್ವಿದಳ ಧಾನ್ಯ ಕೂಡ ಅಲ್ಲಲ್ಲಿ ಬೆಳೆಯುತ್ತಾರೆ. ಕಬ್ಬು, ತೆಂಗು, ಅಡಿಕೆ, ಮಾವು, ಬಾಳೆ ಮುಂತಾದ ತೋಟಗಾರಿಕಾ ಬೆಳೆಗಳೂ, ಅನಾನಸು, ಗೋಡಂಬಿ ಮೆಣಸಿನ ಕಾಯಿಯಂಥ ಮಸಾಲೆ ಪದಾರ್ಥಗಳನ್ನು ರೈತರು ಅಲ್ಪಸ್ವಲ್ಪ ಪ್ರಮಾಣದಲ್ಲಿ ಬೆಳೆಯುತ್ತಾರೆ. ಆದರೆ ಪ್ರತ್ಯೇಕವಾಗಿ ಅಲ್ಲಿ ಒಂದು ರೀತಿಯ ಮಿಶ್ರ ಬೇಸಾಯ ಪದ್ಧತಿ. ವರ್ಷದಲ್ಲಿ ಸರಾಸರಿ 92 ದಿನದ ಮಳೆಯನ್ನೇ ಆಶ್ರಯಿಸಿದ ಬೇಸಾಯವೇ ಇಲ್ಲಿ ಹೆಚ್ಚು.

ಭೌಗೋಳಿಕತೆ

ತಾಲೂಕಿನಲ್ಲಿ 3 ಹೋಬಳಿಗಳು, 15 ಗ್ರಾಮ ಪಂಚಾಯತಗಳು ಇದ್ದು, ಇವುಗಳಲ್ಲಿ 116 ಊರುಗಳು ಜನವಸತಿಯ ಪ್ರದೇಶಗಳಾಗಿವೆ. ರಾಮನಗರ, ಗಣೇಶಗುಡಿ, ಜೋಯ್ಡ, ಗುಂದ, ಉಳವಿ, ಜಗಲಪೇಟ ಮುಂತಾದವು ಹೆಚ್ಚಿಗೆ ಜನವಸತಿಯಿರುವ ಪ್ರದೇಶಗಳು. ಸುಮಾರು 47,000 ಜನಸಂಖ್ಯೆ ಹೊಂದಿದ್ದು, ಪ್ರಮುಖವಾಗಿ ಕುಣಬಿ ಜನಾಂಗ ಕಾಡಿನ ಮಧ್ಯೆ ವಾಸಿಸುವವರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ವ್ಯವಸಾಯ ಯೋಗ್ಯ ಒಟ್ಟು 1,91,069 ಹೆಕ್ಟೇರು ಪ್ರದೇಶವಿದ್ದು, ಸಾಗುವಳಿಗೆ ಲಭ್ಯವಿಲ್ಲದ ಭೂಮಿ 15,539 ಹೆಕ್ಟೇರು ಪ್ರದೇಶ, ಸಾಗುವಳಿ ಯೋಗ್ಯ ಬಂಜರು ಭೂಮಿ 1043 ಹೆಕ್ಟೇರು, ಬೀಳು ಭೂಮಿ 2395 ಹೆಕ್ಟೇರು ಇದೆ.

ರಾಜಕೀಯವಾಗಿ ಕಾರವಾರ ವಿಧಾನ ಸಭಾಕ್ಷೇತ್ರ ಸಹಪಾಲುದಾರ, ಒಟ್ಟು 324 ಮಜರೆಗಳಿವೆ. ವಿದ್ಯುಚ್ಛಕ್ತಿ ಪಡೆದ 108 ಗ್ರಾಮುಗಳು, 42 ವಾಸಗ್ರಾಮಗಳು, 222 ನೀರಾವರಿ ಪಂಪ್‌ಸೆಟ್‌ಗಳು 19 ಗ್ರಾಮೀಣ ನ್ಯಾಯಬೆಲೆ ಅಂಗಡಿಗಳಿವೆ. ಸುಮಾರು 3457 ಜನ ಹರಿಜನ-ಗಿರಿಜನರಿದ್ದಾರೆ.

ಜನಸಂಖ್ಯೆಯಲ್ಲಿ ಸಿರ್ಸಿ ತಾಲೂಕು ಮುಂದಾದರೆ ಕಡಿಮೆ ಜನಸಂಖ್ಯೆ ಹೊಂದಿರುವುದರಲ್ಲಿ ಜೋಯ್ಡ ನಂಬರ್1. ರಾಷ್ಟ್ರೀಯ ರಾಜ್ಯ ಹೆದ್ದಾರಿ ಜಿಲ್ಲಾ ಮುಖ್ಯ ರಸ್ತೆ ಎಲ್ಲವನ್ನು ಒಳಗೊಂಡು 800 ಕಿ.ಮಿಗಳಷ್ಟು ರಸ್ತೆಯನ್ನು ಹೊಂದಿವೆ. ತಾಲೂಕಿನ ನಾಗರೀಕ ಸೌಲಭ್ಯಕ್ಕೆ ಕೋಟಿಗಟ್ಟಲೆ ರೂಪಾಯಿ ಈಗಾಗಲೇ ಖರ್ಚಾಗಿದೆ. ಆದರೆ 'ಎಲ್ಲಿ' 'ಯಾಕೆ' 'ಹೇಗೆ' ಎಂದು ಆ ಊರುಗಳಿಗೆ ಹೋಗಿಯೇ ನೋಡೋಣ ಬನ್ನಿ.

ತಾಲೂಕಿನ ವಾಸ್ತವಿಕತೆ ಏನು?

ಜನರ ಬಾಯಿಂದಲೇ ಕೇಳೋಣ ಬನ್ನಿ 'ಹೌದು, ಒಂದೇ ಒಂದು ಸುಸಜ್ಜಿತ ಆಸ್ಪತ್ರೆ ಇಲ್ಲ. ಪದವಿ ಪೂರ್ವ- ಪದವಿವರೆಗಿನ ಶಿಕ್ಷಣ ಕೇಂದ್ರಗಳಿಲ್ಲ. ಬಹುತೇಕ ಕಡೆಗಳಲ್ಲಿ ಕುಡಿವ ನೀರಿಗೆ ಬರ. ಒಂದೊಂದು ಊರೂ ಕೂಡ ಸೇತುವೆ ಇಲ್ಲದಿದ್ದರೆ ಮಳೆಗಾಲದಲ್ಲಿ ದ್ವೀಪವೇ ಸರಿ. ನಾಗರೀಕ ಜಗತ್ತಿನ ಸಂಪರ್ಕ ಕಡಿತವಾಗಿ ಏನೇ ದುರಂತ ಸಂಭವಿಸಿದರೂ ಜಿಲ್ಲಾಡಳಿತಕ್ಕೆ ತಿಳಿಯದು. ಕಾಡು ಪ್ರಾಣಿಗಳ ಭಯವಂತೂ ಸದಾ ಇರುತ್ತದೆ. ಹಲವಾರು ಊರುಗಳಿಗೆ ರಸ್ತೆಗಳಲ್ಲಿ, ರೇಷನ್ ಅಂಗಡಿಗಳಲ್ಲಿ ಅನಕ್ಷರತೆ ಬಡತನಗಳದ್ದೇ ಮೇಲುಗೈಯಾದರೂ ಈ ತಾಲೂಕಿನ ಕೆಲವೆಡೆ ಸ್ವಲ್ಪ ಸುದಾರಣೆ ನೋಡಬಹುದು. ಕಾಳಿ ನದಿ ಯೋಜನೆ ಸುತ್ತಮುತ್ತ, ತಲೂಕಿನ ಪ್ರಮುಖ ಮುಖಂಡರಿರುವ ಊರುಗಳು ಕೆಲವು ಸೌಲಭ್ಯಗಳನ್ನು ಹೊಂದಿವೆಯಾದರೂ ತೃಪ್ತಿಕರ ಪ್ರಮಾಣದಲ್ಲಲ್ಲ' ಎನ್ನುತ್ತಾರೆ.

ನಾಗರಿಕ ಸೌಲಭ್ಯಗಳಿಲ್ಲದ ಊರುಗಳು

ಡಿಗ್ಗಿ, ಮಾಯರೆ, ವಾಗಬಂದ್, ಮುಡಿಯೇ, ಕಾರಚೋಳಿ, ತಡಸದ, ಮಾರ್ಲಿಗುಳಿ, ಗಡಾವಳಿ, ತಾಂಡಹೊಳೆ, ಕಾಳಪೆ, ಕಿಂದಳಿ, ಬಾಜಾರಕುಣಂಗ, ಅಸುಳ್ಳಿ, ಬೊಂಡೇಲಿ, ಕುಂಡಲ, ಕೆಲೋಲಿ, ಕುರಾವಲಿ, ಗಾಂಗೋಡ, ಕರಂಬಾಳಿ, ಸಿದೋಳಿ ಚಂದ್ರಾವಳಿ, ಮಲ್ಕರಣಿ, ಕುಂಬೋಲಿ, ಕಾಣಗಾಂವ, ವಾಗೇಲಿ, ಅನಮೋಡ, ಅಂಬೋಳಿ, ತುಪ್ಪೇಗಾಗಿ, ಅಂಬಾಳಿ ಹೀಗೆ ಊರುಗಳ ಪಟ್ಟಿ ಬೆಳೆಯುತ್ತ ಸಾಗುತ್ತದೆ. ಕಾರವಾರ-ಬೆಳಗಾಂ - ದಾಂಡೇಲಿ ರಸ್ತೆಯ

ಇಕ್ಕೆಲಗಳಲ್ಲಿ ಸುಮಾರು 25-30 ಕಿ.ಮೀ...
ಊರು ಸೇರಬೇಕು. ಕೆಲವು ಹಳ್ಳಿಗಳಿಗೆ 5...
ನಡೆದು ಹೋಗಬೇಕು.

ತಾಲೂಕಾ ಕೇಂದ್ರ ನಿರ್ಲಕ್ಷ್ಯದಲ್ಲಿ

ಬಹುಶಃ ತಾಲೂಕಾ ಕೇಂದ್ರದ ಆಯ...
ಅಷ್ಟು ಸಮಂಜಸ ಸ್ಥಳ ಎನಿಸಲಾ...
ದೂರದಲ್ಲಿದೆ 1975ರಲ್ಲಿ ಸೂಪಾ...
ಕಾಳಿಡ್ಯಾಂ ನಿಂದ ಮುಳುಗಡೆಯಾಗುವಾಗ...
ತಾಲೂಕಿಗೆ ಯಾವುದು...
ಸ್ಥಳವಾಗಬೇಕೆಂಬುದು ಅಂದಿನ ಜಿ...
ಫಲವಾಗಿ ಜೋಯ್ಡದ...
ಅನಿವಾರ್ಯವಾಗಿರಬಹುದು. ಆದರೆ ಸ...
ರಾಜಕೀಯ ಇಚ್ಛಾಶಕ್ತಿ ಈ ಕಡೆ ಮುಖ...
ಇಲ್ಲ. ಈ ಪ್ರದೇಶದ ಅಭಿವೃದ್ಧಿಗೆ ...
ಹಾಕಿಕೊಳ್ಳಲಿಲ್ಲ. ಸರ್ಕಾರದ ಬೊಕ್ಕಸಕ್ಕೆ...
ಸಂಪನ್ಮೂಲಗಳನ್ನು ಕ್ರೂಢೀಕರಿ...
ಜಲವಿದ್ಯುತ್ ಯೋಜನೆಗಳನ್ನು ...
ಯೋಜನಾಪೂರ್ವ ತಯಾರಿಗೆ ಲಕ್ಷ್ಯ...
ಸಾವಿರಾರು ಸಂಖ್ಯೆಯ ರೈತ ಕುಟುಂಬವ...
ದುಡಿಮೆ ಕಳಕೊಂಡು ನಿರಾಶ್ರಿತರ...
ಉದ್ಯೋಗವೂ ಇಲ್ಲದೇ ಸರಿಯಾಗಿ ಪರಿ...
ಸಿಗದೇ ಅತಂತ್ರರಾದರು. ಸತತವಾ...
ಆರ್ಥಿಕ ವರ್ಷದಲ್ಲಿ ಇತ್ತ ನಿ...
ತೋರಲಾಗಿದೆ. ತಾಲೂಕಾ ಕೇಂದ್ರದ...
ಸಮುಚ್ಚಯ ಕೂಡ ಇಲ್ಲ.

ಇಂಥ ತಾಲೂಕಿನ ಕೆಲವು ...
ಗ್ರಾಮಪಂಚಾಯತ ವ್ಯಾಪ್ತಿಯಲ್ಲಿ ಕ...
ಪ್ರಾಂತ ರೈತ ಸಂಘ ತನ್ನ ಹೋರಾಟದ
ರೈತರನ್ನು ಪ್ರಜ್ಞಾವಂತರನ್ನಾಗಿಸುತ್ತಿದೆ.
ಹಲವಾರು ಗಮನಾರ್ಹ ಹೋರಾಟ ಮ...
ಮೊದಲ ರೈತ ಸಮ್ಮೇಳನವನ್ನು ಕಳೆದ ...
ನಡೆಸಿತು.

ಸಮ್ಮೇಳನಕ್ಕೆ ಆಗಮಿಸಿದ ಪ್ರತಿನಿ...
ಮಾತಾಡಿಸಿದಾಗ ಕೇಳಿ ಬಂದ ಮಾ...
(ಕೊಂಕಣಿಯಲ್ಲಿ ಹೇಳಿದ್ದನ್ನು ಕನ...
ಬರೆಯಲಾಗಿದೆ)

"ನಾವು ಈ ಸಮ್ಮೇಳನಕ್ಕೆ ...
ಮಧ್ಯರಾತ್ರಿಯಿಂದ ನಡೆದೇ ಬಂದೆವು.
ತಲುಪಿದ್ವಿ". "ನಮ್ಮ ಕಾಳಿನದಿ ಹುಟ್ಟುವ...
'ಡಿಗ್ಗಿ' ಇಲ್ಲಿಂದ 48-50 ಕಿ.ಮೀ.
ಸರಿಯಾಗಿ ರಸ್ತೆ ಇಲ್ಲ ವಾಹನವಂತೂ ಸಿ...
ಇಲ್ಲ. ಆದ್ರೂ ನಾವು ಸಂಘ ಕಟ್ಟಿ ಹ...
ಮಾಡ್ಲಿಕ್ಕೆ ನಡೆದೇ ಬಂದಿದ್ದೇವೆ. ನಾನು...
ಪಂಚಾಯತ್ ಸದಸ್ಯೆ ಇದ್ದೇನೆ. ನಮ್ಮೂರ...
ಪಂಚಾಯತ್‌ದಲ್ಲಿ ಹೇಳಿದ್ರೆ ಮೇಲಿಂದ...
ರಾಜಕಾರಣಿಗಳು ಕೇಳೋದ್ದೆ
'ಕೋಯ್ತಾ-ಹತೋಡಾ' (ಕತ್ತಿ ಸುತ್ತಿಗೆ)
ನೀವು ಸುಮ್ಮನಿರಿ ಅಂತಾರೆ. ಆದ್ರೂ...
ವಾದಮಾಡಿ ಊರಿಗೆ ಬೇಕಾಗೋದನ್ನು
ತಯಾರಾಗಿದ್ದೇವೆ. 'ನಾವು ಸೀಕಾದ್ರೆ ಕಂಬ...
ಕಟ್ಕೊಂಡು ಬರ್ತೇವೆ. ಜೀವ ಇದ್ರೆ ...
ಹೋಗೋದು. ನಮ್ಗೆ ಜೋಯ್ಡ ಮುತ್ತು...
ಸಮಾನ ದೂರ. ಒಂದ್ಸಾರೆ ಗ...
ಮಹಿಳೆಯನ್ನು ಕಂಬಿಯಲ್ಲಿ ಕಟ್ಟಿ ಗು...
ಆಸ್ಪತ್ರೆಗೆ ಹೋದಾಗ ಅಲ್ಲಿ ಒಬ್ರು ಕ...
ಪಾರ್ಟಿಯವರು ದಾಂಡೇಲಿಯ ಅಡ್ರೆಸ್...
ಅಲ್ಲಿಂದ ನಾವು ಹಿಂದಿರುಗಿ ಮುಖ...
ಸಂಪರ್ಕಿಸಿ ಕಿಸಾನ್ ಸಭಾ
ತೀರ್ಮಾನಿಸಿದೆವು. ಹಳ್ಳಿ ಹಳ್ಳಿ ತಿರುಗಿ ...
ಸಾವಿರ ಸದಸ್ಯತ್ವ ಮಾಡಿದ್ವಿ. ಸರ್ಕಾರದ ...
ಮಾಡಿಸಿಕೊಳ್ಳಬೇಕೆಂದು ರೈತಸಂಘ ...
"ಇದು ಜೋಯ್ಡ ತಾಲೂಕಾ ಕೇಂದ್ರ...
ಗ್ರಾಮಪಂಚಾಯತ್ ಮಾತ್ರ ಇಲ್ಲ...
ಓಡಾಡಲ್ಲ. ಸರಿ ಬಸ್ ಇಲ್ಲ. ಆಸ್ಪತ್ರೆ...
ನೀರಿಗೆ ತತ್ವಾರ, ಯಾವ ಅಧಿಕಾರಿಯ...

ವಾಸ ಮಾಡಲ್ಲ. ಹಲವಾರು ಶಾಲೆಗೆ ಶಿಕ್ಷಕರಿಲ್ಲ, ರೇಷನ್ ಅಂಗಡಿಗೆ 30 ಕಿ.ಮಿ ನಡೀಬೇಕು. ಕೆಲ್ಸ ಇಲ್ದೆ ಗೋವಾಕ್ಕೆ ವಲಸೆ ಹೋಗ್ತಾರೆ". "ನಾವು ಬ್ರಿಟೀಷ್ ಕಾಲದಿಂದ ಕುಂಬ್ರಿ ಜಮೀನು ಸಾಗುವಳಿ ಮಾಡಿದ್ದೇವೆ. ಈಗ ನಮ್ಮನ್ನು ಸರ್ಕಾರ ನೋಟೀಸ್ ಕೊಟ್ಟು ಎಬ್ಬಿಸ್ತಿದೆ. ಮತ್ತೆ ನಮ್ಮ ಊರು ರಾಷ್ಟ್ರೀಯ ಉದ್ಯಾನವನಕ್ಕೆ ಬಿಡಬೇಕಂತೆ' ಹೀಗೆ ಎಲ್ರೂ ಒಂದರ ಮೇಲೊಂದರಂತೆ ರೈತ ಪ್ರತಿನಿಧಿಗಳು ತಮ್ಮ ಊರಿನ ಸಮಸ್ಯೆಯನ್ನು ಹೇಳಿಕೊಳ್ಳುತ್ತಿದ್ದರು.

"ಹೌದೇ? ಇಂಥದ್ದೊಂದು ತಾಲೂಕಿದೆಯೇ, ನಿಮ್ಮ ಹಳ್ಳೀಲಿ ಆಸ್ಪತ್ರೆನೂ ಇಲ್ವೆ? ಶಾಲೆ ಇದೆಯಾ? ಹೋಗ್ಲಿ... ಊರಿನತನಕ ರಸ್ತೆನಾದ್ರೂ ಇದೆಯಾ? ಅಲ್ರಿ 30-40 ಕಿ.ಮೀ ನಡೆದು ತಾಲೂಕಾ ಕೇಂದ್ರಕ್ಕೆ ಬರ್ತೇನೆ ಅಂತೀರಲ್ಲಾ ಇಷ್ಟು ದಿನ ನೀವು ಓಟು ಕೊಟ್ಟು ಗೆಲ್ಲಿಸಿ ಕಳಿಸಿದ ಎಂ.ಎಲ್.ಎ, ಎಂ.ಪಿ. ನಿಮ್ಮ ಊರಿಗೆ ಹೇಗೆ ಬಂದ್ರು? ಅಯ್ಯೋ ಅವ್ರ್ಯಾರೂ ಬರ್ಲೇ ಇಲ್ಲಾ? ಹಂಗಾದ್ರೆ ಈ ಊರುಗಳಲ್ಲೆಲ್ಲ ಜನರು ವಾಸ ಮಾಡ್ತಿದ್ದಾರೆ. ಮೈಮುರಿದು ದುಡಿದು ಆರ್ಥಿಕತೆ ಹೆಚ್ಚಿಸ್ತಾರೆ ಅನ್ನೋದೆ ಆಳುವವರಿಗೆ ಗೊತ್ತಿಲ್ಲ ಅಂತೇನು? ಜನರನ್ನು ಕತ್ತಲಲ್ಲೇ ಇಟ್ಟು ಮೋಸ ಶೋಷಣೆ ಮಾಡುವುದು ಆಳುವವರ ತಂತ್ರ. ರೈತ ಸಂಘ ಕಟ್ಟಿದ್ದಕ್ಕೆ ಹೋರಾಟ ಮಾಡಿ ಮುಂದಕ್ಕೆ ಸಾಗ್ತಿರೋದಕ್ಕೆ ಎಲ್ರಿಗೂ ಈ ತಾಲೂಕು, ಊರು ಹೆಸರು ಗೊತ್ತಾಗೋ ಹಾಗೆ ಆಯ್ತು. ಹೋರಾಟ ಜೋರಾಗಿ ಸಾಗ್ಲಿ. ಬೆಂಗಳೂರಿನಲ್ಲಿ ನಿಮ್ಮ ಸಮಸ್ಯೆಗೆ ಒಂದಾದ್ರೂ ಪರಿಹಾರ ಸಿಗುವರ್ಗೂ ಕದಲೋದಿಲ್ಲ ಅಂತ ಎಸ್.ಎಂ.ಕೃಷ್ಣರ ಮನೆ ಮುಂದೆ ಬೇಕಾದರೆ ಧರಣಿ ಮಾಡುವ ನಾವು ಪ್ರಾಂತ ರೈತ ಸಂಘದೋರು ಸಹಾಯ ಮಾಡ್ತೀವಿ" ಎಂದು ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಜಿ.ಸಿ.ಬಯ್ಯಾರೆಡ್ಡಿ ಸಮ್ಮೇಳನ ಪ್ರಾರಂಭವಾಗುವ ಮುನ್ನ ಜೋಯ್ಡದ ಬೇರೆ ಬೇರೆ ಊರುಗಳಿಂದ ಬಂದ ರೈತರು ಮಹಿಳೆಯರನ್ನು ಕುರಿತು ಚರ್ಚಿಸುತ್ತಿದ್ದರು. ಕಳೆದ ವರ್ಷ ಮಾರ್ಚ್‌ನಲ್ಲಿ ನೂರಾರು ಕಿ.ಮಿ ಜೋಯ್ಡದಿಂದ ಕಾರವಾರದ ಜಿಲ್ಲಾ ಪಂಚಾಯತ್‌ವರೆಗೆ ಪಾದಯಾತ್ರೆ ಮಾಡಿ ತಾಲೂಕಿನ ಸಮಸ್ಯೆಯನ್ನು ರಾಜ್ಯಕ್ಕೆ ತಿಳಿಸಿದ ಹೆಮ್ಮೆಯಿಂದ ರೈತರು ಮಾತನಾಡುತ್ತಿದ್ದರು.

ಕೆ.ಪಿ.ಆರ್.ಎಸ್ ಜಿಲ್ಲಾ ಸಂಚಾಲಕ ಶಾಂತಾರಾಮ ನಾಯಕ ಮಾತನಾಡಿ ಸರ್ಕಾರದ ಉಳ್ಳವರ ಪರನೀತಿ ಹಾಗೂ ರೈತರು ಅನುಭವಿಸುತ್ತಿರುವ ಕಷ್ಟ ಮತ್ತು ಜೋಯ್ಡ ರೈತ ಮುಂದಿನ ಹೋರಾಟದ ದಾರಿಯ ಬಗ್ಗೆ ವಿವರಿಸಿದರು. ಸಿಐಟಿಯು ಜಿಲ್ಲಾ ಅಧ್ಯಕ್ಷರಾದ ಟಿ.ಎಸ್.ನಾಯ್ಕ ಮಾತನಾಡಿದರು. ಅಂ.ಸಾ.ಸಂಘದ ಜಿಲ್ಲಾ ಕಾರ್ಯದರ್ಶಿ ಯಮುನಾ ಗಾಂವ್ಕಾರ್ ಮಾತನಾಡಿ ನಾವು ಸರ್ಕಾರದ ಎದುರು ಭಿಕ್ಷೆ ಬೇಡ್ತಿಲ್ಲ ಹಕ್ಕೊತ್ತಾಯ ಮಾಡ್ತಿದ್ದೇವೆ. ಕಿಸಾನ್ ಸಭಾದ ಹೋರಾಟ ಕಷ್ಟವಾದರೂ ಸಹ ನೈಜ ದಾರಿಯಾಗಿದೆ ಎಂದರು. ಪ್ರಾರಂಭದಲ್ಲಿ ಶಾಂತ ವೇಳೀಪ ಧ್ವಜಾರೋಹಣ ಮಾಡಿದರು. ಹಿರಿಯ ರೈತ ಮುಖಂಡ ಮಂಜುನಾಥ ಫುಲ್ಕರ್ ಅಧ್ಯಕ್ಷತೆ ವಹಿಸಿದ್ದರು. ಪ್ರೇಮಾನಂದ ಸ್ವಾಗತಿಸಿದರು.

ಭಾರತಿ ಗಾಂವ್ಕಾರ್ ರೈತ ಹೋರಾಟದ ಹಾಡುಗಳನ್ನು ಹೇಳಿ ಕೊನೆಯಲ್ಲಿ ವಂದಿಸಿದರು. ಇಡೀ ತಾಲೂಕಿನಾದ್ಯಂತ ರೈತ ಸಂಘ ಕಟ್ಟಲು ಸಮ್ಮೇಳನ ತೀರ್ಮಾನಿಸಿ ಹೊಸ ಸಮಿತಿ ಆಯ್ಕೆ ಮಾಡಿತು.

ನಾರಾಯಣ ವೇಳೀಪ ಅಧ್ಯಕ್ಷರಾಗಿ, ಪ್ರೇಮಾನಂದ ವೇಳೀಪ ಕಾರ್ಯದರ್ಶಿಯಾಗಿ, ಶಾಂತ ವೇಳೀಪ ಖಜಾಂಚಿಯಾಗಿ ಆಯ್ಕೆಯಾದರು. ಉಪಾಧ್ಯಕ್ಷರಾಗಿ ಬಾಳಪ್ಪೋ ವೇಳಿಪ, ವಿಲಾಸ ಕಾಂಬಳೆ ಸಹ ಕಾರ್ಯದರ್ಶಿಗಳಾಗಿ ಜಯಂತ ಗಾವಡಾ, ಅರ್ಜುನ ಗಾಂಗೋಡಾ ಆಯ್ಕೆಯಾದರು.

ಜೋಯ್ಡಾ ತಾಲೂಕಿನಲ್ಲಿ ಮಾನವ ಸಂಪನ್ಮೂಲ ಅಭಿವೃದ್ಧಿ, ಕೃಷಿ, ಕೈಗಾರಿಕೆ ಹಾಗೂ ಮೂಲ ಸೌಕರ್ಯದ ಅಭಿವೃದ್ಧಿಗಳೆಲ್ಲದರಲ್ಲಿ ಅಸಮತೋಲನವು ಎದ್ದು ಕಾಣುತ್ತದೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರ ಕೂಡ ಜೋಯ್ಡದ ಅಭಿವೃದ್ಧಿಗೆ ವಿಶೇಷ ಯೋಜನೆ ಜಾರಿಗೆ ಒತ್ತಾಯಿಸಿದೆ. ಇಲ್ಲಿಯ ಜನಜೀವನ ಹಾಗೂ ಭೌಗೋಳಿತೆಯನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡಿ ಜೋಯ್ಡ ತಾಲೂಕಿನ ಸಮಗ್ರ ಅಭಿವೃದ್ಧಿಗೆ ವಿಶೇಷ ಕಾರ್‍ಯ ಯೋಜನೆ ರೂಪಿಸಲು ಸಮ್ಮೇಳನವು ಆಗ್ರಹಿಸಿತು. ಪ್ರಾಥಮಿಕ-ಪ್ರೌಢಶಿಕ್ಷಣ ಬಲಪಡಿಸಲು, ಪದವಿ ಕಾಲೇಜು ಸ್ಥಾಪಿಸಲು ಪ್ರತೀ ಹಳ್ಳಿಗೆ ಆಸ್ಪತ್ರೆ ಕುಡಿವ ನೀರು ಪೂರೈಸಲು, ವಿದ್ಯುತ್ ಸಂಪರ್ಕ, ರಸ್ತೆ- ಸೇತುವೆ ನಿರ್ಮಾಣಕ್ಕೆ ಅತಿಕ್ರಮಣ ಭೂಮಿ ಸಕ್ರಮಗೊಳಿಸಲು, ಕುಂಬ್ರಿ ಸಾಗುವಳಿ ಸಕ್ರಮಗೊಳಿಸಲು, ಕೃಷಿಉತ್ಪನ್ನಕ್ಕೆ ಸ್ಥಳೀಯ ಮಾರುಕಟ್ಟೆ, ಅರಣ್ಯೋತ್ಪನ್ನ ಮತ್ತು ಕೈಕಸುಬಿಗೆ ಸರ್ಕಾರದ ಸಹಾಯಧನ ಮಾರುಕಟ್ಟೆ ವ್ಯವಸ್ಥೆ, ಕೈಗಾರಿಕಾ ಸ್ಥಾಪನೆ ಹಾಗೂ ಇನ್ನಿತರ ನಾಗರೀಕ ಸೌಲಭ್ಯಕ್ಕೆ ಸರ್ಕಾರವನ್ನು ಆಗ್ರಹಿಸಲಾಯಿತು.

ರೈತ ಸಂಘದ ರಾಜ್ಯ ಸಮಿತಿಗೆ ತಾಲೂಕಿನಿಂದ ಒಂದು ಸಾವಿರ ರೂಪಾಯಿ ಸಂಗ್ರಹಿಸಿ ನೀಡಿದ್ದು ನಿಜಕ್ಕೂ ಅವರ ಕಳಕಳಿ ಹೋರಾಟದ ಮನೋಭಾವವನ್ನು ಸೂಚಿಸಿತು.



ಸಮಾಲೋಚನೆಯಲ್ಲಿ ತಾಲೂಕು ರೈತ ಮುಖಂಡರು

ಸಮ್ಮೇಳನದ ಪ್ರಾರಂಭದಲ್ಲಿ ಹೇಳಿದ

ಆತಾ ಉಠವು ಸಾರೇರಾನ್, ಆತಾ ಪೇಟವು ಸಾರೇರಾನ್

ಶೇತಕರ್‍ಯಾಂಚಾ ರಾಜ್ಯಾ ಸಾರಿ ಬಾಹುಪಣಾಲಾ ಎಂಬ ಮರಾಠಿ ಹಾಡಿನಲ್ಲಿ ರೈತರಿಗೆ ಬೇಡಿಹಾಕಿದ್ದಾರೆ, ಕಾರ್ಮಿಕರು ಕಷ್ಟದಲ್ಲಿದ್ದಾರೆ. ರೈತ-ಕಾರ್ಮಿಕರ ರಾಜ್ಯದ ಸಲುವಾಗಿ ಹೋರಾಡಿ ನಿಜವಾದ ಸ್ವಾತಂತ್ರ್ಯ ಸಿಗ್ತಾಗಿ ಸಂಘ ಕಟ್ಟಬೇಕಾಗಿದೆ. ಎಂಬರ್ಥದ ಈ ಹಾಡು ಶಿಕ್ಷಣದ ಅರಿವಿಲ್ಲದ ಈ ಜನರಿಗೇ ಸ್ಫೂರ್ತಿದಾಯಕವಾಗಿತ್ತು. ಸಮ್ಮೇಳನ ಉದ್ಘಾಟಿಸಿದವರು ಕೆ.ಪಿ.ಆರ್.ಎಸ್ ರಾಜ್ಯ ಪ್ರಧಾನ ಕಾರ್ಯದರ್ಶಿ ಜಿ.ಸಿ.ಬಯ್ಯಾರೆಡ್ಡಿ.

ಬೀಡಿ ಕಾರ್ಮಿಕರ ಚಳುವಳಿ....

ಪುಟ 7 ರಿಂದ

ಬೀಡಿ ಕಾರ್ಮಿಕರ ಫೆಡರೇಶನ್ನಿನ ನಾಲ್ಕನೇ ಸಮ್ಮೇಳನವು 1982 ರ ಜೂನ್ 15 ರಂದು ರಾಜ್ಯಾದ್ಯಂತ ಸಾಮೂಹಿಕ ಪಿಕೆಟಿಂಗ್ ನಡೆಸಲು ಕರೆ ನೀಡಿತು. ಈ ಕಾರ್ಯಕ್ರಮದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಎರಡು ಸಾವಿರಕ್ಕಿಂತಲೂ ಹೆಚ್ಚು ಬೀಡಿ ಕಾರ್ಮಿಕರು ಬಂಧನಕ್ಕೆ ಒಳಗಾದರು. ಇವರಲ್ಲಿ ಶೇಕಡಾ 90 ಕ್ಕಿಂತಲೂ ಹೆಚ್ಚು ಮಹಿಳೆಯರಾಗಿದ್ದರು. ಮಂಗಳೂರಿನಲ್ಲಿ ಜಿಲ್ಲಾಧಿಕಾರಿಯವರ ಕಚೇರಿಯ ಮುಂದೆ ಪಿಕೆಟಿಂಗ್ ನಡೆಸಿದ ಸಾವಿರಾರು ಬೀಡಿ ಕಾರ್ಮಿಕರ ಮೇಲೆ ಪೋಲೀಸರು ಅಮಾನುಷವಾಗಿ ಲಾಠೀ ಚಾರ್ಜ್ ಮಾಡಿದರು. ಪುಟ್ಟ ಹಸುಳೆಗಳನ್ನು ಕಂಕುಳಲ್ಲಿ ಎತ್ತಿಕೊಂಡಿದ್ದ ತಾಯಂದಿರನ್ನೂ ಕ್ರೂರವಾಗಿ ಹೊಡೆದರು. ಹಲವಾರು ಕಾರ್ಮಿಕರು ಗಾಯಗೊಂಡರು. ಫರಂಗಿಪೇಟೆಯಲ್ಲಿ ಕಂಟ್ರಾಕ್ಟರರ ಗೂಂಡಾಗಳು ಕಾರ್ಮಿಕರ ಮೇಲೆ ನಡೆಸಿದ ದಾಳಿಯಿಂದಾಗಿ ಮೂವರು ಮಹಿಳೆಯರ ಸಹಿತ 5 ಮಂದಿ ಬೀಡಿ ಕಾರ್ಮಿಕರು ಗಾಯಗೊಂಡರು.

ಅಂದು ತುರ್ತಾಗಿ ಸಭೆ ಸೇರಿದ ಎಸ್.ಕೆ.ಬೀಡಿ ವರ್ಕರ್ಸ್, ಪ್ರೊವಿಡೆಂಟ್ ಹಣದ ರಶೀದಿಯ ಕುರಿತು ಇತ್ಯರ್ಥ ವಾಗುವವರೆಗೆ ಹೋರಾಟವನ್ನು ಮುಂದುವರಿಸಬೇಕೆಂದು ತೀರ್ಮಾನಿಸಿತು. ಈ ತೀರ್ಮಾನದ ಪ್ರಕಾರ ತಾ.16.6.82 ರಿಂದ ಮಂಗಳೂರಿನಲ್ಲಿ ಜಿಲ್ಲಾಧಿಕಾರಿಯವರ ಕಚೇರಿಯ ಮುಂದೆ ಯು.ಬಿ.ಲೋಕಯ್ಯ, ಜೆ.ಬಾಲಕೃಷ್ಣ ಶೆಟ್ಟಿ, ಗಂಗಾಧರ ಗಟ್ಟಿ, ಸದಾಶಿವ ಕಾರ್ಪೆಂಟರ್, ವಾಸುದೇವ ಆಚಾರಿ, ಜಯಂತ ನಾಯಕ ಮತ್ತು ರಾಮರಾಯ ಶೆಣೈಯವರನ್ನೊಳಗೊಂಡು ಏಳು ಮಂದಿ ಅನಿರ್ದಿಷ್ಟಾವಧಿಯ ಅನ್ನಸತ್ಯಾಗ್ರಹ ನಡೆಸಿದರು. ಈ ಹೋರಾಟವು ಇಡೀ ಜಿಲ್ಲೆಯ ಬೀಡಿ ಕಾರ್ಮಿಕರಲ್ಲಿ ಹೊಸ ಸ್ಫೂರ್ತಿಯನ್ನು ಮೂಡಿಸಿತು. ಜಿಲ್ಲೆಯಾದ್ಯಂತ ಬೀಡಿ ಮಜೂರರು ಬೀಡಿ ಉತ್ಪಾದನೆಯನ್ನು ಸಂಪೂರ್ಣ ಸ್ಥಗಿತಗೊಳಿಸಿದರು. ಸತ್ಯಾಗ್ರಹಿಗಳು ಕುಳಿತ ಶಿಬಿರಕ್ಕೆ ಪ್ರತಿದಿನವೂ ಸಾವಿರಗಟ್ಟಲೆ ಕಾರ್ಮಿಕರು ಬರುತ್ತಿದ್ದರು. ಅನ್ನ ಸತ್ಯಾಗ್ರಹವು ಜಿಲ್ಲೆಯಾದ್ಯಂತ ಕಾರ್ಮಿಕರ ಮನೆಮಾತಾಯಿತು.

ಜೂನ್ 18 ರಂದು ಬೀಡಿ ಕಾರ್ಮಿಕರು ಇತರ ಕೈಗಾರಿಕೆಗಳ ಸಾವಿರಗಟ್ಟಲೆ ಕಾರ್ಮಿಕರ ಜತೆ ಸೇರಿ ಮಂಗಳೂರಿನ ಪ್ರೊವಿಡೆಂಟ್ ಫಂಡ್ ಕಚೇರಿಯ ಮುಂದೆ ಬೃಹತ್ ಪ್ರದರ್ಶನ ನಡೆಸಿದರು. ಹೋರಾಟವು ತೀವ್ರಗತಿಗೆ ಹೋಗುವುದನ್ನೂ, ಕಾರ್ಮಿಕರ ಬೇಡಿಕೆಯ ನ್ಯಾಯಬದ್ಧತೆಯನ್ನೂ ಮನಗಂಡ ಜಿಲ್ಲಾ ಪೊಲೀಸ್ ಅಧಿಕಾರಿಯವರೂ ಜಿಲ್ಲಾಧಿಕಾರಿಗಳೂ ಈ ಪ್ರಶ್ನೆಯನ್ನು ಮಾತುಕತೆ ಮೂಲಕ ಇತ್ಯರ್ಥಪಡಿಸಲು ಪ್ರಯತ್ನಗಳನ್ನು ಆರಂಭಿಸಿದರು. ಜೂನ್ 19 ರಂದು ಜಿಲ್ಲಾ ಪೊಲೀಸ್ ಕಚೇರಿಯಲ್ಲಿ ಮೊದಲ ಸುತ್ತಿನ ಮಾತುಕತೆ ನಡೆಯಿತು. ಎರಡನೇ ಸುತ್ತಿನ ಮಾತುಕತೆ ಜೂನ್ 21 ರಂದು ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಜರುಗಿತು. ಈ ಮಾತುಕತೆಯಲ್ಲಿ ಪ್ರೊವಿಡೆಂಟ್ ಫಂಡ್ ಕಮಿಶನರರೂ, ಜಿಲ್ಲಾ ಪೋಲೀಸ್ ಅಧಿಕಾರಿಯವರೂ, ಜಿಲ್ಲೆಯ ಎಲ್ಲಾ ಬೀಡಿ ಮಾಲೀಕರೂ, ಕಾರ್ಮಿಕರ ಪರವಾಗಿ ಸಿಐಟಿಯು ಮುಖಂಡರಾದ ಪಿ.ರಾಮಚಂದ್ರರಾವ್, ಕೆ.ಮೂಸಬ್ಬ, ಬಿ.ಮಾಧವ, ಕೆ.ಆರ್.ಶ್ರೀಯಾನ್, ಯು ಜನಾರ್ಧನ ನಾಯಕ ಕಮಲಾಕ್ಷ ಬಂಗೇರ, ಜೆ.ವೀರಪ್ಪ, ಕೆ.ಬಾಬು ದೇವಾಡಿಗ, ಕೆ.ಪೂವಪ್ಪ ಸಾಲ್ಯಾನ್ ಮೊದಲಾದವರನ್ನೊಳಗೊಂಡ 12 ಮಂದಿ ಪ್ರತಿನಿಧಿಗಳೂ ಭಾಗವಹಿಸಿದರು. ತಾ.1.8.1978 ರಿಂದ ಬೀಡಿ ಕಾರ್ಮಿಕರಿಗೆ ಪ್ರೊವಿಡೆಂಟ್ ಫಂಡ್ ಜ್ಯಾರಿ ಮಾಡಲು ಮಾಲಿಕರು ಒಪ್ಪಿದರು. ಇದಕ್ಕೆ ಆಗತ್ಯವಿರುವ ಎಲ್ಲಾ ಫಾರ್ಮುಗಳನ್ನು ಮಾಲಿಕರಿಗೆ ಒದಗಿಸಲು ಮತ್ತು ಕಾರ್ಮಿಕರ ಹೆಸರುಗಳಲ್ಲಿ ಖಾತೆಗಳನ್ನು ತೆರೆದು ರಶೀದಿ ನೀಡಲು ಬೇಕಾದ ವ್ಯವಸ್ಥೆಗಳನ್ನು ಮಾಡಲು ಪ್ರೊವಿಡೆಂಟ್ ಫಂಡ್ ಕಮಿಷನರರೂ ಒಪ್ಪಿದರು. ಒಪ್ಪಂದದ ಪ್ರತಿಯೊಂದಿಗೆ ಮುಖಂಡರು ಬಂದ ನಂತರ ಅನ್ನ ಸತ್ಯಾಗ್ರಹವನ್ನು ಕೊನೆಗೊಳಿಸಲಾಯಿತು.

ತುಟ್ಟಿಭತ್ಯೆಗಾಗಿ ಹೋರಾಟ

ಬೀಡಿ ಕಾರ್ಮಿಕರು ಇಂದು ಅನುಭವಿಸುತ್ತಿರುವ ತುಟ್ಟಿಭತ್ತೆಯ ಸವಲತ್ತು ದೊರೆತದ್ದು 1983 ರ ಚಾರಿತ್ರಿಕ ಹೋರಾಟದಿಂದ.



ಪ್ರಮುಖ ಪಾತ್ರವಹಿಸಿದ ಪಿ.ರಾಮಚಂದ್ರರಾವ್

1983 ರ ವಿಧಾನಸಭಾ ಚುನಾವಣೆಗಿಂತ ಮೊದಲು ಅಧಿಕಾರದಲ್ಲಿದ್ದ ಗುಂಡೂರಾವ್ ಸರಕಾರವು ಕನಿಷ್ಠ ಕೂಲಿ ಸಲಹಾ ಸಮಿತಿಯ ಶಿಫಾರಸುಗಳನ್ನು ತಿರಸ್ಕರಿಸಿ, ಏಕಪಕ್ಷೀಯವಾಗಿ ಸಾವಿರ ಬೀಡಿಗೆ ರೂ.7.40 ಕನಿಷ್ಟ ಕೂಲಿ ನಿಗದಿ ಮಾಡಿ ಪ್ರಕಟಣೆ ಹೊರಡಿಸಿತ್ತು. ಇದನ್ನು ವಿರೋಧಿಸಿ, ಕೂಲಿ ಹೆಚ್ಚಳ, ತುಟ್ಟಿಭತ್ತೆ ಮೊದಲಾದ ಬೇಡಿಕೆಗಳನ್ನು ಮುಂದಿಟ್ಟು ತಾ.5.5.1983 ರಿಂದ ಜಿಲ್ಲೆಯಾದ್ಯಂತ ಬೀಡಿ ಕಾರ್ಮಿಕರಿಂದ ಅನಿರ್ದಿಷ್ಟಾವಧಿಯ ಮುಷ್ಕರ ಮತ್ತು ಮಾಲಿಕರ ಡಿಪೋದ ಮುಂದೆ ಸತ್ಯಾಗ್ರಹ ನಡೆಸಲಾಯಿತು.

ಎಸ್.ಕೆ.ಬೀಡಿ ವರ್ಕರ್ಸ್ ಫೆಡರೇಶನ್ನಿನ ಅಧ್ಯಕ್ಷರಾಗಿದ್ದ ಪಿ.ರಾಮಚಂದ್ರರಾವ್ ಮತ್ತು ಸಿಐಟಿಯು ರಾಜ್ಯಾಧ್ಯಕ್ಷರಾಗಿದ್ದ ಎಸ್.ಸೂರ್ಯನಾರಾಯಣ ರಾವ್ ಅವರು ಆ ಸಮಯದಲ್ಲಿ ಶಾಸಕರಾಗಿದ್ದರು. ಬೀಡಿ ಕಾರ್ಮಿಕರ ಹೋರಾಟದ ತೀವ್ರತೆ ಮತ್ತು ಈ ಇಬ್ಬರು ಸಿಪಿಐ(ಎಂ) ಶಾಸಕರ ಪ್ರಯತ್ನಗಳ ಫಲವಾಗಿ ರಾಜ್ಯದ ಕಾರ್ಮಿಕ ಸಚಿವರು ಕಾರ್ಮಿಕರ ಪ್ರತಿನಿಧಿಗಳೊಂದಿಗೆ ಮಾತುಕತೆಗೆ ದಿನ ನಿಗದಿ ಮಾಡಿದರು. ಈ ಬೆಳವಣಿಗೆಯ ಹಿನ್ನಲೆಯಲ್ಲಿ ಮುಷ್ಕರವನ್ನು ತಾ.8-5-1983 ರಂದು ಕೊನೆಗೊಳಿಸಲಾಯಿತು. ತಾ.19-5-1983 ರಿಂದ ಮಾತುಕತೆ ನಡೆದು ಅಂತಿಮವಾಗಿ ತಾ.26.5.83 ರಂದು ಒಂದು ಒಪ್ಪಂದಕ್ಕೆ ಬರಲಾಯಿತು.

ಈ ಒಪ್ಪಂದದ ಪ್ರಕಾರ ತಾ.1.6.1983 ರಿಂದ ಸಾವಿರ ಬೀಡಿಗೆ ರೂ.8.80 ಕೂಲಿ ನಿಗದಿಯಾಯಿತು. ಮಾತ್ರವಲ್ಲದೆ ರಾಜ್ಯದ ಬೀಡಿ ಕಾರ್ಮಿಕರಿಗೆ ಮೊತ್ತಮೊದಲ ಬಾರಿಗೆ ತಾ.1.3.1984 ರಿಂದ ಪಾಯಿಂಟಿಗೆ 2 ಪೈಸೆಯಂತೆ ಪರಿಮಿತ ತುಟ್ಟಿಭತ್ತೆ ನಿಗದಿ ಮಾಡಲಾಯಿತು.

ಭ್ರಷ್ಟಾಚಾರದ ರಾಜಕೀಯ!!

"ತಲೆಯ ಮೇಲೊಂದು ಸೂರು" ಬೇಕೆಂಬ ಜನಸಾಮಾನ್ಯರಿಂದ ಕಿತ್ತುಕೊಂಡ 15 ಸಾವಿರ ರೂಪಾಯಿಗೂ ಹೆಚ್ಚಿನ ಭ್ರಷ್ಟಾಚಾರ. ಭ್ರಷ್ಟಾಚಾರ ಬಯಲಿಗೆಳೆಯಲು ಕೂಲಿಕಾರ ಸಂಘದ ದೃಢ ನಿಲುವಿನ ಹೋರಾಟ. ಹೋರಾಟ ಸಡಿಲುಗೊಳಿಸಲು ಕಾಂಗ್ರೆಸ್ ಜನಪ್ರತಿನಿಧಿಗಳು ಮತ್ತು ಭೂಮಾಲಿಕ ಶಕ್ತಿಗಳ ಕುತಂತ್ರ ಹಾಗೂ ಸಂಘದ ಕಾರ್ಯಕರ್ತರ ನಡುವೆಯೇ ಆಂತರಿಕ ವೈರುಧ್ಯ ಹುಟ್ಟಿಸುವ ಕರೂರು ಗ್ರಾಮ ಪಂಚಾಯ್ತಿ ಹುನ್ನಾರವನ್ನು ಹೆಜ್ಜೆ ಹೆಜ್ಜೆಗೂ ಎದುರಿಸಿ ಕೂಲಿಕಾರ ಸಂಘ ಯಶಸ್ವಿಯಾದ ಕಥೆ ಇಲ್ಲಿದೆ.

ಎ.ಬಿ.ವಾಜ್ಪೆಯಿ ಮತ್ತು ಎಸ್.ಎಂ.ಕೃಷ್ಣಾರವರು ಇತ್ತೀಚೆಗೆ ಕರ್ನಾಟಕ ರಾಜ್ಯವನ್ನು "ಗುಡಿಸಲುರಹಿತ ರಾಜ್ಯ"ವನ್ನಾಗಿ ಮಾಡುವುದಾಗಿ ಘೋಷಿಸಿದ್ದಾರೆ. ಇವರ ಈ ಮಹತ್ತರದ ಘೋಷಣೆಯಿಂದ ಗ್ರಾಮ ಪಂಚಾಯ್ತಿ ಸದಸ್ಯರು ಮತ್ತು ಅಧಿಕಾರಿಗಳು ಸುಖದ ಸುಪ್ಪತ್ತಿಗೆ ಮೇಲೆ ಮೆರೆಯುವ ಕನಸನ್ನು ಕಂಡಿದ್ದಾರೆ. ಇದರ ನಿಜವಾದ ಹಿನ್ನೆಲೆ "ಖಾಸಗೀಕರಣದ" ಮುಖವಾಡ. ಈ ಹಿಂದೆ ನಿರ್ಗತಿಕರಿಗಾಗಿ, ಆಶ್ರಯ ಇಂದಿರಾ, ಹುಡ್ಕೊ, ವಾಲ್ಮೀಕಿ ಯಂತಹ ಅನೇಕ ಯೋಜನೆಯ ಮನೆಗಳು ಪುಕ್ಕಟೆಯಾಗಿಯೇ ದೊರಕುತ್ತಿದ್ದವು.

ಭ್ರಷ್ಟಾಚಾರದ ಮೂಲಕ ಅಥವಾ ಬಂಧುಬಾಂಧವ್ಯದ ಸ್ವರೂಪಕ್ಕೆ ಮಾತ್ರ) ಆದರೆ ಇದೀಗ ಹೊರಡಿಸಿರುವ ಈ ಮನೆಗಳಿಗೆ ತಿಂಗಳಿಗೆ 150 ರೂ.ಕಂತು, ಎಸ್.ಸಿ, ಎಸ್.ಟಿ, ಯವರಿಗೆ ಸಬ್ಸಿಡಿ, ಒಟ್ಟಾರೆ 180 ಕಂತುಗಳು ಕಟ್ಟದೇ ಹೋದಲ್ಲಿ ಜಪ್ತಿ. ಈ ಹುನ್ನಾರದ ಒಳಗುಟ್ಟನ್ನು ಅರಿಯಲಾರದ ಮುಗ್ಧ ಜನ ಕೇವಲ ಒಂದು ಅಥವಾ ಎರಡು ರೂಪಾಯಿ ಬೆಲೆಬಾಳುವ ಅರ್ಜಿಗೆ 50 ರೂಪಾಯಿ ಕೊಟ್ಟರೇನು? ನೂರು ರೂಪಾಯಿ ಇಟ್ಟರೇನು? ಹೇಗೋ ಹಿಂದೆ ಕೊಡುತ್ತಿದ್ದ ಮನೆಗಳಿಗೆ ಎರಡು ಸಾವಿರದಿಂದ ಮೂರು ಸಾವಿರ ರೂ, ಹಣ ಕೊಡಬೇಕಿತ್ತು. ಅದಕ್ಕಿಂತ ಈ ಹಣವೇನು ದೊಡ್ಡದಲ್ಲವೆಂದು, ಬರಗಾಲದ ಸನ್ನಿವೇಶ ಗಂಭೀರವಾಗಿ ಕಾಡುತ್ತಿದ್ದರೂ ಗ್ರಾಮ ಪಂಚಾಯ್ತಿ ಕೌಂಪೌಂಡಿನ ಸುತ್ತ ನಾ ಮುಂದು ತಾ ಮುಂದು ಎಂದು ಅಣಿನೆರೆದಿದ್ದಾರೆ. ಇನ್ನೂ ಪಂಚಾಯ್ತಿ ಜನಪ್ರತಿನಿಧಿಗಳ ಭರವಸೆಯಂತೂ ಹೇಳತೀರದು.

" ಇದು ನಮ್ಮ ಕೈಗುರ್ತಿನ ಇಂದಿರಾಗಾಂಧಿಯ ಮಗ ರಾಜೀವ್ ಗಾಂಧಿಯ" ಮನೆಗಳು , ಬಡವರು ಯಾರಾದರೂ ಬಂದು ಬರೆಸಬಹುದು, ಒಂದು ಮನೆ ಅರ್ಜಿಗೆ ಕೇವಲ 50ರಿಂದ 100 ರೂ ಮಾತ್ರ ಎಂದು ಮುಗ್ಧ ಜನರನ್ನು ನಂಬಿಸಿ ಸಾವಿರಾರು ರೂಪಾಯಿಗಳಷ್ಟು ಭ್ರಷ್ಟಾಚಾರವೆಸಗಿದ್ದಾರೆ. ಅಂತಹ ಒಂದು ಪ್ರಕರಣ ಸಿರುಗುಪ್ಪ ತಾಲೂಕಿನ ಕರೂರು ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ನಡೆದಿದೆ.

ಕರೂರು ಗ್ರಾಮ ಪಂಚಾಯ್ತಿಯಲ್ಲಿ ಒಟ್ಟಾರೆ 22 ಸದಸ್ಯರು, ಇದರಲ್ಲಿ ಅಧ್ಯಕ್ಷ ಪಂಚಣ್ಣ ಉಪಾಧ್ಯಕ್ಷ ಮಾಧವರೆಡ್ಡಿ, ಇನ್ನುಳಿದ ವಿಭಾಗಕ್ಕೆ ಸಂಬಂಧಿಸಿದಂತೆ, ತಾಲೂಕು ಪಂಚಾಯ್ತಿ ಸದಸ್ಯ ಕರೂರು ಪುರುಷೋತ್ತಮ ಗೌಡ, ಜಿಲ್ಲಾ ಪಂಚಾಯ್ತಿ ಸದಸ್ಯ ಅಮ್ಮಾರೆಡ್ಡಿ, ಕರೂರು, ಗೋಸಬಾಳು, ಬೈರಾಪುರ ಸೇರಿದಂತೆ ಒಟ್ಟಾರೆ 15 ಸಾವಿರಕ್ಕೂ ಹೆಚ್ಚು ಜನಸಂಖ್ಯೆ, ಇಲ್ಲಿ ರೆಡ್ಡಿಗಳದೆ ದರಬಾರು. ಈ ವಿಭಾಗದಲ್ಲಿ ಭೂಮಾಲಿಕರು ಧಣಿಗಳೆಂದರೆ ರಾಜಕೀಯದಲ್ಲಂತೂ ಎತ್ತಿದ ಕೈ. ಕಾರಣ ಎಂ.ಎಲ್.ಎ. ಶಂಕರ್‌ರೆಡ್ಡಿಯವರ ಕೃಪಾಕಟಾಕ್ಷ. ಅನೇಕ ಮಂದಿ ಇಂಜಿನಿಯರುಗಳು ಕೊಂಡುಕೊಳ್ಳುವ ಹಣಕಾಸಿನ ವಿಷಯದಲ್ಲಿ ಹೆಚ್ಚು ಕಮ್ಮಿ ಒದೆ ಕೂಡ ತಿಂದಿದ್ದಾರೆ. ಮುಂಡ್ಲೂರು ದಿವಾಕರ ಬಾಬು ಮಂತ್ರಿಗಳಿಗೆ ಕರೂರು ರೆಡ್ಡಿಗಳ ದರ್ಬಾರ್ ಬಗ್ಗೆ ಯಾರಾದರೂ ದೂರು ನೀಡಿದರೆ "ದೊಡ್ಡೋರಪ್ಪಾ ಅವರು" ಎಂದು ಹೇಳಿ ಕೈ ತೊಳೆದುಕೊಳ್ಳುತ್ತಾರೆ. ಇಂತಹಾ ಮನೆತನದ ಕೈಯ್ಯಲ್ಲಿರುವುದೇ ಗ್ರಾಮ ಪಂಚಾಯ್ತಿ ಆಡಳಿತ.

ಕರೂರು ವ್ಯಾಪ್ತಿಗೆ ಬರುವ ಗೋಸುಬಾಳು, ಬೈರಾಪುರದ ಜನಸಾಮಾನ್ಯರಿಂದ ಒಂದು ಅರ್ಜಿಗೆ 50 ರೂ ಪಡೆದು ಸುಮಾರು 15 ಸಾವಿರ, ರೂಪಾಯಿಗಳಷ್ಟು ಭ್ರಷ್ಟಾಚಾರವೆಸಗಿದ್ದನ್ನು ಕೂಲಿಕಾರ ಸಂಘದ ನಿಯೋಗ ಕಣ್ಣಾರೆ ನೋಡಿ, ಬಿಲ್‌ಕಲೆಕ್ಟರ್ ಮಲ್ಲಯ್ಯ ಇವರಿಗೆ ಎಚ್ಚರಿಕೆ ನೀಡಿ, ಇದನ್ನಾಕೆ ಸಂಗ್ರಹಿಸುತ್ತಿದ್ದೀರೆಂದು ವಿಚಾರಿಸಿದಾಗ, ಮಲ್ಲಯ್ಯ "ನಮ್ಮ" ಬಾಸ್‌ಗಳಾದ ಝಡ್.ಪಿ., ಟಿ.ಪಿ., ಅಧ್ಯಕ್ಷ, ಕಾರ್ಯದರ್ಶಿಗಳು ಎಂದು ಹೇಳಿರುತ್ತಾರೆ. ಮಾಡಿದ ತಪ್ಪನ್ನು ತಿದ್ದಿಕೊಂಡು ಕ್ಷಮೆಯಾಚಿಸಿ, ಅಮಾಯಕರ ಹಣ ವಾಪಸ್ಸು ನೀಡಬೇಕೆಂದು ಕೂಲಿಕಾರ ಸಂಘದ ಮುಖಂಡರು ಸೌಜನ್ಯದಿಂದ ಕೇಳಿದರೂ ಗ್ರಾಮ ಪಂಚಾಯ್ತಿಯ ಆಡಳಿತ ವರ್ಗ ಇದ್ಯಾವುದಕ್ಕೂ ಕಿವಿಗೊಡಲಿಲ್ಲ. ಬದಲಿಗೆ ಹಣ ನೀಡಿದ ಬಡವರಿಗೂ ಮತ್ತು ಸಂಘದ ಕಾರ್ಯಕರ್ತರಲ್ಲಿಯೇ "ಆಡಳಿತ ವೈರುಧ್ಯ" ಹುಟ್ಟಿಸುವ ತಂತ್ರ ಹೂಡಿದರು.

ಸಾಕ್ಷಿಗಳನ್ನು ಮುಚ್ಚಿಹಾಕುವ ಸಲುವಾಗಿ ನಡೆಸುವಂಥ ಗ್ರಾಮ ಪಂಚಾಯ್ತಿಯ ಹುನ್ನಾರವನ್ನು ಅರಿತ ಕೂಲಿಕಾರರ ಸಂಘ ಜನವರಿ 4 ರಿಂದ ಫೆ 6 ರವರೆಗೆ ನಿರಂತರ ಹೋರಾಟಕ್ಕೆ ಕರೆ ನೀಡಿತು. ಆದರೆ ಗ್ರಾಮ ಪಂಚಾಯ್ತಿಯ ಆಡಳಿತ ವರ್ಗ ಇನ್ನೊಂದು ದಾರಿ ತುಳಿಯಿತು.

ರಾತ್ರೋ ರಾತ್ರಿ ಪಿತೂರಿ:

ಮೊದಲನೇ ದಿನದ ಹೋರಾಟಕ್ಕೆ 300 ಜನರಷ್ಟಿದ್ದು 2ನೇ ದಿನಕ್ಕೆ ಕಾಲಿಟ್ಟ ಮೇಲೆ "ದಿಢೀರ್" ಎಂದು 50 ಜನಕ್ಕೆ ಇಳಿಯಿತು. ಇದರ ಒಳ ಹುನ್ನಾರವೇನೆಂದು ಪರೀಕ್ಷಿಸಿದಾಗ "ಕಾಂಗ್ರೆ ಮುಖಂಡರಾದ, ಅಧ್ಯಕ್ಷ ಮಾಧವರೆಡ್ಡಿ ಮತ್ತು ಜಿಲ್ಲಾ ಪಂಚಾಯ್ತಿ ಸದಸ್ಯ ತಿಮ್ಮಾರೆಡ್ಡಿ ಹಾಗೂ ಇವರ ತಮ್ಮನಾದ ಜಯರಾಂ ರೆಡ್ಡಿಯವರ ಸಂಬಳದಾಳುಗಳ ಮನೆಗೆ ಹೋಗಿ ರಾತ್ರೋರಾತ್ರಿಯೇ ಬೆದರಿಕೆ ಒಡ್ಡಿದ್ದಾರೆ. 50 ರೂ ಕೊಟ್ಟಿಲ್ಲವೆಂದು ಹೇಳಿ "ಮನೆ ಕೊಡುವುದು ಪಂಚಾಯ್ತಿ" ಕೂಲಿಕಾರ ಸಂಘವಲ್ಲಾ, ಒಂದು ವೇಳೆ ಕೂಲಿಕಾರ ಸಂಘದ ಹೋರಾಟಕ್ಕೆ ನೀವು ಹೋಗಿದ್ದೇ ನಿಜವಾದರೆ ಪೋಲೀಸರಿಂದ ಹೊಡೆಸಿ 'ಅರೆಸ್ಟ್' ಮಾಡಿಸುತ್ತೇವೆ. ಇಲ್ಲವಾದರೆ ನಮ್ಮ ಸಾಲ ಕಟ್ಟಿ ಎಂದು ಹೇಳಿ ಪ್ರತಿಯೊಬ್ಬ ಸಂಬಳದಾಳಿನಿಂದ 'ಕಂಪ್ಲೆಂಟು' ಬರೆಸಿಕೊಂಡು ಕೂಲಿಕಾರ ಸಂಘದ ಮುಖಂಡರ ಮೇಲೆಯೇ ಆಪಾದನೆ ಹೊರೆಸಲು ಯತ್ನಿಸಿದರು. ಆದರೆ ಇದನ್ನೂ ಕೂಲಿಕಾರ ಸಂಘ ಸೋಲಿಸಿತು.

ಏಟಿಗೆ ತಿರುಗೇಟು!

ಆಂತರಿಕ ವೈರುಧ್ಯ ಹುಟ್ಟಿಸುವ ಹುನ್ನಾರವನ್ನು ಅರಿತ ಕೂಲಿಕಾರರ ಸಂಘದ ವಿಭಾಗೀಯ ಸಮಿತಿ ಅಧ್ಯಕ್ಷ ಬೂದುಗುಪ್ಪ ಗಾದ್ಲಾರಗಪ್ಪ, ಎನ್.ಕುಮಾರ್ ಸುತ್ತಮುತ್ತಲಿನ ಹಳ್ಳಿಗೆ ಕರೆ ನೀಡಿ ಗ್ರಾಮ ಪಂಚಾಯ್ತಿಗೆ ಮುತ್ತಿಗೆ ಹಾಕಲು ತೀರ್ಮಾನಿಸಿತು. ಅದೇ ರೀತಿ ಸುಮಾರು 250 ಜನ ಪಂಚಾಯ್ತಿ ಮುಂದೆ ಅಣಿನೆರೆದರು. ಚರ್ಚೆ ಶುರುವಾಯ್ತು. ಈ ಚರ್ಚೆಯಲ್ಲಿ ಉಪಾಧ್ಯಕ್ಷ ಮಾಧವ್ ರೆಡ್ಡಿ, ಇನ್ಸ್‌ಪೆಕ್ಟರ್ ಮಹಮ್ಮದ್ ಇಸ್ಮಾಯಿಲ್, ಕೂಲಿಕಾರ ಸಂಘದ ಎನ್.ಕುಮಾರ್, ದೇವದಾಸು ಅಲ್ಲದೇ ಪತ್ರಿಕೆಯ ವರದಿಗಾರರು ಭಾಗವಹಿಸಿದ್ದರು. ಆಡಳಿತ ವರ್ಗದ ಕಪಟ ಸೂತ್ರವನ್ನು ಗಮನಕ್ಕೆ ತೆಗೆದುಕೊಂಡ ಕೂಲಿಕಾರ ಸಂಘದ ಮುಖಂಡರು ಹಿಂದಿನ ಭ್ರಷ್ಟಾಚಾರವನ್ನು ಬಯಲಿಗೆಳೆಯಿತು. ಈ ಹಿಂದೆ ಇದೇ ಆಡಳಿತ ವರ್ಗ ಒಂದು ಮನೆಗೆ 3000 ರೂ ಇಲ್ಲದಿದ್ದರೆ ಮನೆ ಇಲ್ಲವೆಂದು ಘೋಷಿಸಿ, ತಲಾ 2000-3000 ರೂ.ನಂತೆ ಕಿತ್ತುಕೊಂಡು ಮನೆ ನೀಡಿದ್ದರೆ, ಹಣ ನೀಡಲು ನಿಶ್ಶಕ್ತರಾದ ಕೂಲಿಕಾರರಿಂದ ದುಡಿಸಿ 'ಜೀತಪದ್ಧತಿ' ರೀತಿಯಲ್ಲಿ ಶೋಷಣೆ ಮಾಡಿದ್ದಾರೆ. ಅದೇ ರೀತಿ ಸಾಲಕ್ಕಾಗಿ ಹೆಚ್ಚೆಚ್ಚು ಲಕ್ಷ್ಮಣ, ಹೊನ್ನೂರಪ್ಪ ಹರಿಜನ, ಆಂಜಿನಪ್ಪ ಹರಿಜನ, ನಾಗಪ್ಪ ಇವರಿಗೆ ನೀಡಿ, ಮಕ್ಕಳು ಮರಿ ಎನ್ನದೇ ದುಡಿಸಿಕೊಂಡಿದ್ದಾರೆ. ಸಂಪೂರ್ಣವಾಗಿ ಬಾಕಿ ಮುಟ್ಟಿದ್ದರೂ ಅಗ್ರಿಮೆಂಟನ್ನು ಸೃಷ್ಟಿಸಿ ವಕೀಲರಿಂದ 'ನೋಟಿಸ್' ಜಾರಿಗೊಳಿಸಿ, ಬಡಜನರನ್ನು ಸುಲಿಗೆ ಮಾಡಿದ್ದಾರೆ. ಪಟ್ಟಾ ನೀಡುತ್ತೇವೆಂದು 500-600 ರೂ ಹಣ ಕಿತ್ತುಕೊಂಡು ರಸೀದಿ ಕೂಡ ನೀಡದೆ ಇನ್ನಷ್ಟು ಹಣ ನೀಡಬೇಕೆಂದು ಒತ್ತಾಯಿಸಿದ್ದಾರೆಂದು ಕೂಲಿಕಾರ ಸಂಘದ ಕಾರ್ಯಕರ್ತರು ಬಲವಾಗಿ ವಾದಿಸಿದರು. ಇದರಿಂದ ಹಗಲು ರಾತ್ರಿ ಕಷ್ಟಪಟ್ಟು ಆಡಳಿತ ವರ್ಗದ ಹುನ್ನಾರ 'ಉಲ್ಟಾಪಲ್ಟಾ'ವಾಗಿ ಸಪ್ಪೆ ಮೋರೆ ಹಾಕಿದರು. ಆದರೂ ಭ್ರಷ್ಟ ಆಡಳಿತಾಧಿಕಾರಿಗಳ ಜಂಭ ಮಾತ್ರ ನಿಂತಿಲ್ಲ.

ಸಂಘ ವಿಸ್ತಾರಕ್ಕೆ ಸಜ್ಜು

ಜನಸಾಮಾನ್ಯರ ವೈರಿಗಳ ವಿರುದ್ಧ ಬೃಹತ್ ಮಟ್ಟದ ಜನಸಮೂಹ ಅಣಿನೆರೆಸಲು ಸುತ್ತಮುತ್ತ ಹಳ್ಳಿಗಳಲ್ಲಿ ಸಂಘಟನೆಗಳನ್ನು ಅಸ್ತಿತ್ವಕ್ಕೆ ತರಲು ತೀರ್ಮಾನಿಸಿದೆ. ಇದೇ ರೀತಿ ಗೋಸುಬಾಳು ಬೈರಾಪುರದಲ್ಲಿ ಸಂಘ ಹುಟ್ಟುಹಾಕಿ ಕೃಷ್ಣ ಸರ್ಕಾರದ ಭ್ರಷ್ಟಾಚಾರವನ್ನು ಬಯಲಿಗೆಳೆಯಲಾಗಿದೆ.

ಕೊನೆಗೂ ಸಂಘದ್ದೇ ಜಯ

ಕೊನೆ ದಿನಕ್ಕೆ ಕಾಲಿಟ್ಟ ಅಧಿಕಾರಿಗಳ ಭ್ರಷ್ಟಾಚಾರದ ಬಗ್ಗೆ ಸೂಕ್ತ ತನಿಖೆ ನಡೆಸಿ ಕ್ರಮ ಕೈಗೊಳ್ಳಲಾಗುವುದು. ಶಿರಿಗೇರಿಗೆ 2 ಲಕ್ಷ, ಕಣ್ಣೂರಿಗೆ 2 ಲಕ್ಷ, ತಾಳೂರು-ಹೊಸಳ್ಳಿಗೆ 2 ಲಕ್ಷ, ಬೂದಗುಪ್ಪ 1 ಲಕ್ಷದಷ್ಟು ಕೂಲಿ ಕೆಲಸ ನೀಡಿದ್ದಾರೆ. ಈ ಹೋರಾಟಕ್ಕೆ ತಾಳೂರು, ಬೂದುಗುಪ್ಪ, ಶಿರಿಗೇರಿ, ಗೋಸುಬಾಳು, ಹೊಸಳ್ಳಿ ಗ್ರಾಮದಿಂದ ಹಮಾಲಿ ಸಂಘ, ಜನವಾದಿ ಮಹಿಳಾ ಸಂಘದಗಳು ಬೆಂಬಲ ನೀಡಿ ಯಶಸ್ವಿಗೊಳಿಸಿದ್ದಾರೆ.

- ಎನ್.ಕುಮಾರ್

ಈ ವಾರ ಕರ್ನಾಟಕ...

ಡೀಸೆಲ್ ಬೆಲೆ ಇಳಿಸಿದರೂ ಏರಿದ ಪ್ರಯಾಣ ದರ

ಬಸ್ ಪ್ರಯಾಣ ದರ ಕಳೆದ ತಿಂಗಳಷ್ಟೇ ಹೆಚ್ಚಾದದ್ದು ಸರ್ಕಾರ ಈ ತಿಂಗಳಲ್ಲಿ ಮತ್ತೆ ಸುಮಾರು ಶೇ 7 ರಷ್ಟು ಹೆಚ್ಚಳಮಾಡಿದೆ. ಕೊಟ್ಟ ಕಾರಣ ಡೀಸೆಲ್ ಬೆಲೆ ಏರಿಕೆ. ಆದರೆ ಡೀಸೆಲ್-ಪೆಟ್ರೋಲ್ ಬೆಲೆ ಅಂತರ್ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಇಳಿದರೂ ಇಳಿಸದೇ ಹೆಚ್ಚಿಸಿರುವುದು ಸರ್ಕಾರದ ದುರ್ಲಾಭದ, ದುರಾಲೋಚನೆ ತೋರುತ್ತದೆ. ಇಂತಹ ಏರಿಳಿತದ ಹೊಣೆಯನ್ನು ಕೇಂದ್ರ ಸರ್ಕಾರವೇ ಹೊರಬೇಕು ಅದೇ ಕಾರಣ, ಈ ಬಗ್ಗೆ ಕೃಷ್ಣರ ಚಕಾರವಿಲ್ಲ. ಈ ಕೂಡಲೇ ಬಸ್ ದರ ಇಳಿಸಲೇಬೇಕು.

ಅಂಗನವಾಡಿ ನೌಕರರ ಸತ್ಯಾಗ್ರಹ ಯಶಸ್ವಿ

ಪುಟ 4 ರಿಂದ

ಪದಾಧಿಕಾರಿಗಳಾದ ನಾಗರತ್ನ, ಬಕುಲಾದೇವಿ, ಯಮುನಾ ಗಾಂವ್ಕರ್, ಸವಿತಾ ತನ್ಮಡಗಿ, ರಂಗಮ್ಮ ಪದ್ಮಾವತಿ ದೇಸಾಯಿ, ಮುನಿರಾಜಮ್ಮ ಸುನಂದಾ, ರಾಜಮ್ಮನವ ರೊಳಗೊಂಡ ನಿಯೋಗ ಸುಮಾರು 2 ಗಂಟೆಗೂ ಹೆಚ್ಚು ಚರ್ಚೆ ನಡೆಸಿತು. ಒಟ್ಟಾರೆ ಹೋರಾಟ ಮಾಡಬಾರದೆಂದೂ ಅಪ್ರತ್ಯಕ್ಷವಾಗಿ ಸರ್ಕಾರದ ಧೋರಣೆ ಸಾಕಷ್ಟು ಬಿಸಿ ಬಿಸಿ ಚರ್ಚೆಯಾಗಿ ಸರ್ಕಾರ ಅನಿವಾರ್ಯವಾಗಿ ಕೆಲವೊಂದು ಬೇಡಿಕೆಗಳನ್ನು ಒಪ್ಪಿಕೊಳ್ಳಬೇಕಾಯಿತು.

ಸರ್ಕಾರದ ಮೇಲೆ ಒತ್ತಡ ತರಲು ಎಲ್ಲಾ ಶಾಸಕರಿಗೂ ನಮ್ಮ ಮನವಿ ಪತ್ರ ಕೊಟ್ಟು ಒತ್ತಾಯ ಮಾಡಲಾಗಿತ್ತು. ಸಾವಿರಾರು ಮಹಿಳೆಯರು ಬೀದಿಯಲ್ಲಿ ಮಲಗಿರುವ ವಿಷಯವನ್ನು ಇಲಾಖಾ ಸಚಿವರಿಗೆ ಹಲವಾರು ಜನ ಮತ್ತು ಪೋಲೀಸ್ ಇಲಾಖೆ ಅದರ ಗಂಭೀರತೆಯನ್ನು ತಿಳಿಸಲಾಗಿತ್ತು. ಇದರಿಂದ ಕ್ಯಾಬಿನೆಟ್ ಮತ್ತು ರಾಜ್ಯ ಕಾಂಗ್ರೇಸಿನ ಮುಖ್ಯಸ್ಥರಲ್ಲೊಬ್ಬರಾಗಿ ಮಹಿಳಾ ಮತ್ತು ಕಲ್ಯಾಣ ಇಲಾಖಾ ಸಚಿವೆ ಮೋಟಮ್ಮರವರಿಗೆ ಈ ಹೋರಾಟ ನುಂಗಲಾರದ ತುತ್ತಾಗಿ ಪರಿಣಮಿಸಿತ್ತು.

ಈಡೇರಿದ ಬೇಡಿಕೆಗಳು:

- ನಿವೃತ್ತಿ ಸೌಲಭ್ಯಕ್ಕೆ ಸಂಬಂಧಿಸಿ ಒಂದು ಹೊಸ ಯೋಜನೆಯನ್ನು ಮಾಡುವುದು.
- ಕೇಂದ್ರದಿಂದ ಬರಬೇಕಾದ 32 ಕೋಟಿ ರೂಗಳ ಬಿಡುಗಡೆ.
- ರಾಜ್ಯ ಸರ್ಕಾರದಿಂದ 1 ಕೋಟಿ ರೂ.ಗಳ ಬಿಡುಗಡೆ.
- ರಾಜೀವ ಗಾಂಧಿ ವಸತಿ ಯೋಜನೆ ಯಡಿಯಲ್ಲಿ 5000 ಮನೆಗಳನ್ನು ಅಂಗನವಾಡಿ ನೌಕರರಿಗೆ ಮೀಸಲು.
- 18 ತಿಂಗಳ ಸ್ತ್ರೀಶಕ್ತಿ ಹಣ ಬಿಡುಗಡೆ ಮುಂದಿನ ದಿನಗಳಲ್ಲಿ ಸಮಸ್ಯೆಗಳು ಬಂದಾಗ ಸಂಘಟನೆಯೊಟ್ಟಿಗೆ ಮಾತುಕತೆ ನಡೆಸಲು ತೀರ್ಮಾನ.

ಈ ಹೋರಾಟಕ್ಕೆ ಎಐಎಲ್‌ಯು ರಾಜ್ಯ ಘಟಕ, ಎಐಐಇಎ, ಕೃಷಿ ಕೂಲಿಕಾರರ ಸಂಘ, ಸಿಐಟಿಯು, ಜೆಎಂಎಸ್, ಎಸ್‌ಎಫ್‌ಐ, ಡಿವೈಎಫ್‌ಐ ಹಾಗೂ ಮುಂತಾದ ಸಂಘಟನೆಗಳ ನಾಯಕರು, ಕಾಂಗ್ರೇಸಿನ ವಿಧಾನ ಪರಿಷತ್ ಸದಸ್ಯರಾದ ಎಲ್.ಹನುಮಂತಯ್ಯ ಸಿಪಿಐ(ಎಂ) ಮಾಜಿ ಶಾಸಕರಾದ ಜಿ.ವಿ.ಶ್ರೀರಾಮರೆಡ್ಡಿ ಯವರು ಭಾಗವಹಿಸಿ ಬೆಂಬಲ ಸೂಚಿಸಿದರು.



ಇರಾಕಿನ ಅತಿಕ್ರಮಣ

ಬುಶ್-ಬ್ಲೇರ್ ಅಪರಾಧಗಳನ್ನು ಚರಿತ್ರೆ ಕ್ಷಮಿಸದು


ಅಮೇರಿಕನ್ ಮತ್ತು ಬ್ರಿಟೀಷ್ ಪಡೆಗಳ ...ಕಿನ ಅತಿಕ್ರಮಣದಿಂದ ಇರಾಕಿ ಜನರ ...ಹಿಕ ಹತ್ಯೆ ಹಾಗೂ ದೊಡ್ಡ ಪ್ರಮಾಣದ ...ವಾಗಿದೆ. ಈ ಕ್ರೂರ ಮತ್ತು ಕ್ರಿಮಿನಲ್ ...ದ್ಧದ ನಿಜವಾದ ಉದ್ದೇಶಗಳು ಕಳೆದ ನಾಲ್ಕು ...ಗಳಲ್ಲಿ ಬಯಲಾಗಿವೆ. ಸಾರ್ವಭೌಮ ಅರಬ್ ...ವೊಂದನ್ನು ಆಕ್ರಮಿಸಿಕೊಂಡು, ಅದರ ...ರ ಸಂಪತ್ತನ್ನು ವಶಪಡಿಸಿಕೊಳ್ಳುವುದು ಈ ...ದ್ಧದ ಉದ್ದೇಶವಾಗಿತ್ತು. ಇದನ್ನು ಸಾಧಿಸಲು ...ೇರಿಕ (ಕ್ಲಸ್ಟರ್ ಬಾಂಬ್, ಸಾವಿರಾರು ...ಗಳು ಮತ್ತು ವಿಶೇಷ ರೀತಿಯ ...ಟಕಗಳಂತಹ) ನರಮೇಧದ ಅಸ್ತ್ರಗಳನ್ನು ...ದೆ. ಬಾಗ್ದಾದ್ ಮತ್ತು ಇತರ ಇರಾಕಿ ...ಗಳ ನಾಗರೀಕರ ನರಮೇಧ ಯುದ್ಧದ ...ಾರ್ಯ ಅಂಗ ಎಂದು ಅಮೇರಿಕನ್ ಮತ್ತು ...ಷ್ ನಾಯಕರು ಹೇಳುತ್ತಿದ್ದಾರೆ. ಆದರೆ ... ಜಾರ್ಜ್ ಬುಷ್ ಮತ್ತು ಟೋನಿ ಬ್ಲೇರ್‌ರ ...ಾಧಗಳನ್ನು ಎಂದೂ ಕ್ಷಮಿಸದು.

... ಯುದ್ಧಕ್ಕೆ ಕೊಡಲಾಗಿದ್ದ ನೆಪಗಳೆಲ್ಲಾ ...ಸೂರಾಗಿವೆ. ನರಮೇಧ ಶಸ್ತ್ರಾಸ್ತ್ರಗಳು, ...ಕಿನಲ್ಲಿ ಇದುವರೆಗೂ ಪತ್ತೆಯಾಗಿಲ್ಲ. ಇರಾಕಿ ... ಅಮೇರಿಕನ್ ಪಡೆಗಳಿಂದ 'ವಿಮೋಚನೆ'ಗೆ ...ುತ್ತಲೂ ಇರಲಿಲ್ಲ. ಬದಲಾಗಿ ಭೀಕರ ಮತ್ತು ...ಬಿಟ್ಟ ಮಿಲಿಟರಿ ದೈತ್ಯ ಬಲದ ಬಳಕೆಗೆ ...ಾದ ಪ್ರತಿರೋಧ ಒಡ್ಡಿದರು.

...ರಾಕ್ ಮತ್ತು ಮನುಕುಲದ ಅಮೂಲ್ಯ ...ತ್ರಿಕ ಸಂಪತ್ತು ಸಂಗ್ರಹಿಸಲಾಗಿದ್ದ ಇರಾಕ್ ...ೀಯ ಮ್ಯೂಸಿಯಂನ್ನು ಲೂಟಿ ಮಾಡಿ ಧ್ವಂಸ ಮಾಡಲಾಗಿದೆ. ಇಂತಹ ಲೂಟಿ ಮತ್ತು ನಾಶವನ್ನು ನೋಡುತ್ತಾ ಕೈಕಟ್ಟಿಕುಳಿತಿದ್ದ ಅಮೇರಿಕನ್ ಬ್ರಿಟೀಷ್ ಪಡೆಗಳು ಈ ಸಾಂಸ್ಕೃತಿಕ ನರಮೇಧಕ್ಕೆ ಹೊಣೆ.

ಅಮೇರಿಕಕ್ಕೆ ಅಡಿಯಾಳಾದ, ಅಮೇರಿಕನ್ ಜನರಲ್ ಒಬ್ಬನ ಅಡಿಯಾಳಾಗಿ ಒಂದು ಸರ್ಕಾರ ರಚಿಸಲು ಪ್ರಯತ್ನ ನಡೆದಿದೆ. ಇಂತಹ ನಾಚಿಕೆಗೇಡಿನ ಕೈಗೊಂಬೆ ಕೃತ್ಯವನ್ನು ಜಗತ್ತು ನೋಡಬೇಕಾಗಿ ಬಂದಿದೆ. ಇರಾಕನ್ನು ನಾಶ ಮಾಡಿದವರು ಇರಾಕಿ ತೈಲದಿಂದ ಬಂದ ಹಣದಿಂದ, ಇರಾಕನ್ನು ಪುನಃ ಕಟ್ಟುವ ಕೆಲಸ ಮಾಡುವ ವಿಚಿತ್ರ ಘಟನೆ ನೋಡಬೇಕಾಗಿದೆ. ಯುದ್ಧಾನಂತರದ ಇರಾಕಿ ಸರ್ಕಾರ ಮತ್ತು ಪುನರ್ರಚನೆ ಕೆಲಸದಲ್ಲಿ ವಿಶ್ವಸಂಸ್ಥೆಗೆ ಪ್ರಮುಖ ಪಾತ್ರ ಕೊಡಲು ಅಮೇರಿಕ ತಯಾರಿಲ್ಲ. ಈ ಬಗ್ಗೆ ಅಜ್ಞಾಪಾಲಕ ದೋಸ್ತು ಬ್ರಿಟನ್ ಈ ಬಗ್ಗೆ ಒತ್ತಾಯಿಸುತ್ತಿದ್ದರೂ ಅಮೇರಿಕ ಅದನ್ನು ಲೆಕ್ಕಿಸಿಲ್ಲ.

ಅಮೇರಿಕದ ಅತಿಕ್ರಮಣದ ಬಗೆಗಿನ ಇಬ್ಬಂದಿ



ನೀತಿಯನ್ನು ವಾಜಪೇಯಿ ಸರ್ಕಾರ ಬಿಟ್ಟು ಕೊಡಬೇಕೆಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಒತ್ತಾಯಿಸುತ್ತದೆ. ಇರಾಕಿನಲ್ಲಿ ತಾತ್ಕಾಲಿಕ ಸರ್ಕಾರ ರಚಿಸಲು ವಿಶ್ವಸಂಸ್ಥೆ ಮುಂದಾಗಬೇಕು. ಅತಿಕ್ರಮಣ ಮಾಡಿರುವ ಅಮೇರಿಕನ್ ಬ್ರಿಟೀಷ್ ಪಡೆಗಳು ವಾಪಸಾಗಬೇಕು. ಅತಿಕ್ರಮಣ ಮಾಡಿಕೊಂಡಿರುವ ಅಮೇರಿಕನ್ನರ ಮೇಲ್ವಿಚಾರಣೆಯಲ್ಲಿ ಪುನರ್ರಚನೆಯ ಕೆಲಸದಲ್ಲಿ ಭಾರತ ಭಾಗವಹಿಸಬಾರದು. ಇರಾಕಿನ ಜನತೆಯ ದುಸ್ಥಿತಿಯಿಂದ, ಅಮೇರಿಕದಿಂದ ಗುತ್ತಿಗೆ ಪಡೆದು ಲಾಭ ಮಾಡುವುದನ್ನು ಭಾರತದ ಜನತೆ ಸಹಿಸದು. ಸರ್ಕಾರ ಇರಾಕ್‌ನಲ್ಲಿ ಮಾನವೀಯ ಪರಿಹಾರ ಕ್ರಮಗಳಿಗೆ ಮಾತ್ರ ಸಹಾಯ ನೀಡಬೇಕು.

ಅನಾಗರಿಕ ನಾಚಿಕೆಗೇಡಿನ ಕ್ರಮ

ಇರಾಕಿನ ಮೇಲೆ ಅಮೇರಿಕದ ಅತಿಕ್ರಮಣ ಹೆಚ್ಚು ಕಡಿಮೆ ಪೂರ್ಣವಾಗಿದೆ. ಅಮೇರಿಕನ್ ಸಾಮ್ರಾಜ್ಯಶಾಹಿ ಸ್ವತಂತ್ರ ಸಾರ್ವಭೌಮ ದೇಶದ ಮೇಲೆ ಚರಿತ್ರೆಯಲ್ಲೇ ಅತ್ಯಂತ ನಗ್ನ ಮತ್ತು ಬರ್ಬರ ದಾಳಿಯನ್ನು ನಡೆಸಿದೆ. ಇಪ್ಪತ್ತನೇ ಶತಮಾನದಲ್ಲಿ ಸ್ವಾತಂತ್ರ್ಯ ಪಡೆದ ಮೊದಲ ದೇಶ, 21ನೇ ಶತಮಾನದಲ್ಲಿ ಪುನಃ ವಸಾಹತು ದೇಶವಾದ ದುರಂತ ನಮ್ಮ ಮುಂದಿದೆ.

ಜಗತ್ತಿನ ಅಮೇರಿಕೀಕರಣ ಇಷ್ಟಕ್ಕೆ ನಿಲ್ಲುವಂತೆ ಕಾಣುತ್ತಿಲ್ಲ. ಇರಾಕಿನ ನೆರೆದೇಶ ಸಿರಿಯಾ ಮೇಲೆ ಅಮೇರಿಕದ ಅಧ್ಯಕ್ಷ ಬುಶ್ ಈಗಾಗಲೇ ಆಪಾದನೆಗಳ ಸುರಿಮಳೆಗೈದಿದ್ದಾರೆ. ರಾಸಾಯನಿಕ ಶಸ್ತ್ರಾಸ್ತ್ರಗಳನ್ನು ಹೊಂದಿದೆ. ಇರಾಕಿ ನಾಯಕರಿಗೆ ಆಶ್ರಯ ಕೊಡಲಾಗಿದೆ ಇವು ಆಪಾದನೆಗಳು ಸಿರಿಯಾ ಅಮೇರಿಕಾಕ್ಕೆ 'ಸಹಕಾರ' ನೀಡಬೇಕು ಎಂದು ಬುಶ್ ಬೆದರಿಸಿದ್ದಾರೆ. ಇರಾಕಿನ ಬರ್ಬರ ವಿಧ್ವಂಸಕಾರಿ ಕೃತ್ಯ ನೋಡಿದವರಿಗೆ, ಅಮೇರಿಕದ ಜತೆ 'ಸಹಕಾರ'ದ ಪರಿಣಾಮಗಳ ಬಗ್ಗೆ ಗೊತ್ತು.

ಅಮೇರಿಕದ ವಿದೇಶ ಮತ್ತು ರಕ್ಷಣಾ ಮಂತ್ರಿಗಳು ಸಿರಿಯಾವನ್ನು 'ದುಷ್ಟ ಪ್ರಭುತ್ವ'ವೆಂದು ಕರೆದಿದ್ದಾರೆ. ಪಶ್ಚಿಮ ಏಶ್ಯಾ ಪ್ರದೇಶದಲ್ಲಿ ರಾಜಕೀಯ ಭೂಪಟವನ್ನು ತನಗೆ ಬೇಕಾದಂತೆ ಬದಲಾಯಿಸಲು ಅಮೇರಿಕ ತನ್ನ ಅಮಾನವೀಯ ಮಿಲಿಟರಿ ತೋಳ್ಬಲ ಪ್ರದರ್ಶನ ನಡೆಸುತ್ತಿದೆ. ಇದು ಆ ಪ್ರದೇಶದಲ್ಲಿ ಇರುವ ಅಮೇರಿಕದ ಏಕಮಾತ್ರ ಸಹಚರ ಇಸ್ರೇಲಿಗೆ ಅನುಕೂಲಕರವಾಗಲಿದೆ. ಸಮಾಜವಾದಿ ಕ್ಯೂಬಾ ಮತ್ತು ಕೋರಿಯಾಗಳ ಮೇಲೂ ಇಂತಹುದೇ 'ದಾಳಿ' ಆರಂಭವಾಗಿದೆ.

ಈ ನಡುವೆ ಇರಾಕಿನ ಮೇಲಿನ ಅತಿಕ್ರಮಣವನ್ನು ಗಟ್ಟಿಗೊಳಿಸುವ ಪ್ರಯತ್ನದಲ್ಲಿದೆ. ಮಾಜಿ ಅಮೇರಿಕನ್ ಜನರಲ್ ಜಮ್ ಗಾರ್ನರ್‌ನ್ನು ಇರಾಕ್‌ನಲ್ಲಿ ಪುನರ್ರಚನೆಯ ಮುಖ್ಯಸ್ಥನೆಂದು ನೇಮಿಸಲಾಗಿದೆ. ಈವರೆಗೆ ಎಲ್ಲಾ ದೇಶಗಳು ಇರಾಕಿನ ಮೇಲೆ ಅಮೇರಿಕನ್ ಅತಿಕ್ರಮಣವನ್ನು ನೋಡಿಯೂ ಕೈಕಟ್ಟಿ ಕುಳಿತಿದ್ದವು. ಈಗಲಾದರೂ ಈ ದೇಶಗಳು ಎದ್ದು ನಿಂತು ವಿಶ್ವಸಂಸ್ಥೆ ಮೇಲ್ವಿಚಾರಣೆಯಲ್ಲೇ ಇರಾಕ್‌ನ ಪುನರ್ರಚನೆಯ ಕೆಲಸ ಆಗಬೇಕು ಎಂದು ಒತ್ತಾಯಿಸಬೇಕಾಗಿದೆ.

ಸಾರ್ವಜನಿಕ ಒತ್ತಡ ಇದ್ದರೂ, ಅಮೇರಿಕನ್ ಅತಿಕ್ರಮಣವನ್ನು ಖಂಡಿಸಲು ಹಿಂಜರಿದ ವಾಜಪೇಯಿ ಸರ್ಕಾರ, ಕನಿಷ್ಟ ಯುದ್ಧಾನಂತರದ ಇರಾಕ್‌ನಲ್ಲಿ ವಿಶ್ವಸಂಸ್ಥೆಗೆ ಮಹತ್ವದ ಪಾತ್ರದ ವಿಷಯವನ್ನು ಕೈಗೆತ್ತಿಕೊಳ್ಳಬೇಕು. ಅಮೇರಿಕನ್ ಅತಿಕ್ರಮಣದ ಪರಿಸ್ಥಿತಿಯಲ್ಲಿ ಇರಾಕ್‌ನಲ್ಲಿ, ಭಾರತ ಅಥವಾ ಅದರ ಕಂಪನಿಗಳ ಆದೇಶದ ಪುನಃ ಕಟ್ಟುವ ಕಾಂಟ್ರಾಕ್ಟ್‌ಗಳಲ್ಲಿ ಭಾಗಿಯಾಗುವುದಿಲ್ಲ ಎಂಬುದನ್ನಾದರೂ ಸರ್ಕಾರ ಘೋಷಿಸಬೇಕಾಗಿದೆ.

ಅಮೇರಿಕನ್ ಪಡೆಗಳು ಬಾಗ್ದಾದ್ ಮತ್ತಿತರ ನಗರಗಳ ಮೂಲಕ ಹೇಗೆ ಮೃಗಗಳಂತೆ ಹಾದು ಹೋದರು ಎಂಬ ಬಗ್ಗೆ ಬರುತ್ತಿರುವ ವರದಿಗಳು, ನಡುಕ ಹುಟ್ಟಿಸುವಂತಹವು. ಅಮಾಯಕ ಜನರ ಹತ್ಯೆ, ನಾಗರಿಕ ಮೂಲ ಸೌಲಭ್ಯ ಮತ್ತು ಆಸ್ಪತ್ರೆಗಳ ನಾಶ (ಇವನ್ನು ಅಂತರಾಷ್ಟ್ರೀಯ ಒಪ್ಪಂದಗಳ ಪ್ರಕಾರ ಪ್ರತಿಬಂಧಿಸಲಾಗಿದೆ) ಅಭೂತಪೂರ್ವ ಅಪರಾಧಗಳು ಇವನ್ನೆಲ್ಲ 'ವಿಮೋಚನೆ'ಯ ಹೆಸರಲ್ಲಿ ನಡೆಸಲಾಗುತ್ತಿದೆ ಎಂಬುದು ನಾಗರಿಕತೆಗೆ ನಾಚಿಕೆಗೇಡಿನ ವಿಚಾರ.

ಇವುಗಳಲ್ಲೆಲ್ಲಾ ಅತ್ಯಂತ ಪೈಶಾಚಿಕ ಕೃತ್ಯವೆಂದರೆ ಇರಾಕ್ ಮತ್ತು ಮನುಕುಲದ ನಾಗರಿಕತೆಯ ಚಾರಿತ್ರಿಕ ಸಂಪತ್ತಿನ ಲೂಟಿ ಮತ್ತು ನಾಶ. ಈ ಲೂಟಿಗೆ ಬಡ ಇರಾಕಿಗಳೇ ಕಾರಣ ಎಂಬ ಆಪಾದನೆ ಶುದ್ಧ ಸುಳ್ಳು. 1991 ರ ಯುದ್ಧದಲ್ಲಿ ದಕ್ಷಿಣ ಇರಾಕಿನಲ್ಲಿ ಅಮೇರಿಕನ್ ವಶದಲ್ಲಿದ್ದಾಗ ಬಸ್ರಾ ಎಂಬ ನಗರದಲ್ಲಿ ಮ್ಯೂಸಿಯಂನ್ನು ಇದೇ



ರೀತಿ ಲೂಟಿ ಮಾಡಲಾಗಿತ್ತು. ಆದರೆ ಈ ಅಪೂರ್ವ ಕಲಾಕೃತಿಗಳು ಮಾರುಕಟ್ಟೆಯಲ್ಲಿ ಕಾಣಿಸಿಕೊಂಡವು. ಉಳಿದವು, ಯುರೋಪಿನ ರಾಜಧಾನಿಗಳ ಮಾರುಕಟ್ಟೆಯಲ್ಲಿ ಪ್ರತ್ಯಕ್ಷವಾದವು. ಇರಾಕಿನ ಮ್ಯೂಸಿಯಂನಲ್ಲಿದ್ದ ಕಲಾಕೃತಿಗಳು ಕ್ರಿಸ್ತಪೂರ್ವ ನಾಲ್ಕು ಸಾವಿರ ವರ್ಷಗಳ ಹಿಂದಿನ ಅತ್ಯಂತ ಪ್ರಾಚೀನ ನಾಗರೀಕತೆಗೆ ಸಂಬಂಧಿಸಿದವು. ಬೆಬಿಲಾನಿನ ನೆಬುಚಾದ್ ನೆಜರ್‌ನಲ್ಲಿರುವ ಸುಪ್ರಸಿದ್ಧ 'ತೂಗುವ ತೋಟ' ವನ್ನು ಪುನರ್ರಚಿಸುವ ಕೆಲಸ ನಡೆದಿತ್ತು. ಬಾಗ್ದಾದ್‌ನಲ್ಲಿರುವ ಮ್ಯೂಸಿಯಂನಲ್ಲಿರುವ ವಸ್ತುಗಳು ಇದಕ್ಕೆ ಸಹಾಯಕವಾಗಿದ್ದವು. ಇಂತಹ ಕೆಲಸಕ್ಕೆ ಅಮೇರಿಕನ್ ಆಕ್ರಮಣ ಮಾರಣಾಂತಿಕ ಏಟು ಕೊಟ್ಟಿದೆ.

ಮಾನವ ನಾಗರಿಕತೆಯ ಮಹಾನ್ ಪರಂಪರೆಯನ್ನು ಅಮೇರಿಕನ್ ಮಸಣ ವ್ಯಾಪಾರಿಗಳು ಧ್ವಂಸ ಮಾಡಿದ್ದಾರೆ. ಈಗಲೂ ಅದರಲ್ಲಿ ಉಳಿದಿದ್ದನ್ನು ರಕ್ಷಿಸಿಕೊಳ್ಳುವ ಯಾವುದೇ ಗಂಭೀರ ಪ್ರಯತ್ನಗಳಿಲ್ಲ.

ತಮ್ಮನ್ನು 'ವಿಮೋಚನೆ' ಮಾಡಲು ಬಂದ ಅಮೇರಿಕನ್ ಪಡೆಗಳನ್ನು ಇರಾಕಿಗಳು 'ಸ್ವಾಗತ' ಮಾಡುತ್ತಿದ್ದಾರೆ ಎಂಬ ಅಬ್ಬರದ ಅಮೇರಿಕನ್ ಪ್ರಚಾರ ನಡೆದಿದೆ. ಆದರೆ ಶಿಯಾ ಮುಸ್ಲಿಮರು(ಸದ್ದಾಂ - ವಿರೋಧಿ ಎಂದು ಅಮೇರಿಕ ಬೆಂಬಲ ನೀಡುತ್ತಿದ್ದ ಹಲವು ಗುಂಪುಗಳು) ಭಾರಿ ಅಮೇರಿಕನ್-ವಿರೋಧಿ ಪ್ರದರ್ಶನಗಳನ್ನು ನಡೆಸಿದ್ದಾರೆ. ಇಂತಹ ಪ್ರದರ್ಶನಗಳನ್ನು ಅಮೇರಿಕನ್ ಪಡೆಗಳು ಹತ್ತಿಕ್ಕುತ್ತವೆ ಎಂಬ ಬಗ್ಗೆ ಸಂಶಯವಿಲ್ಲ. ಇರಾಕ್‌ನ ಸಂಪನ್ಮೂಲಗಳನ್ನು ವಶಪಡಿಸಿಕೊಳ್ಳುವುದು, ಮತ್ತು ಭೌಗೋಳಿಕ - ರಾಜಕೀಯ ಗುರಿಗಳನ್ನು ಸಾಧಿಸುವತ್ತ ಮಾತ್ರ ಅಮೇರಿಕ ಗಮನ ಕೊಡುತ್ತದೆ. ಅಮೇರಿಕದ ಪಡೆಗಳು ತಕ್ಷಣ ವಾಪಸಾಗ ಬೇಕು. ಇರಾಕ್ ಪುನರ್ರಚನೆಯ ಕಷ್ಟ ಕೆಲಸವನ್ನು ವಿಶ್ವಸಂಸ್ಥೆ ವಹಿಸಿಕೊಳ್ಳಬೇಕು ಎಂದು ಅಂತರಾಷ್ಟ್ರೀಯ ಸಮುದಾಯ ಒತ್ತಾಯಿಸಬೇಕು. ವಾಜಪೇಯಿ ಸರ್ಕಾರ ಇಂತಹ ನೀತಿಯನ್ನು ಅಂಗೀಕರಿಸಬೇಕು ಮತ್ತು ಈ ಗುರಿಯತ್ತ ಅಂತರಾಷ್ಟ್ರೀಯ ಅಭಿಪ್ರಾಯ ರೂಪಿಸುವ ಕೆಲಸದಲ್ಲಿ ತೊಡಗಬೇಕು.

...ೊಸ ಇರಾಕಿ ಸರ್ಕಾರದ ನಾಟಕ ...ಸ್ಕ್ರಿಪ್ಟ್ ಪ್ರಕಾರ ಹೋಗುತ್ತಿಲ್ಲ

ಅಮೇರಿಕ ಸಂಘಟಿಸಿದ ಎಲ್ಲಾ ಇರಾಕಿ ...ರೋಧ ಪಕ್ಷಗಳ ಸಮ್ಮೇಳನ, ಅಮೇರಿಕನ್ ...ೋಜನೆಗಳ ಪ್ರಕಾರ ಹೊಗುತ್ತಿಲ್ಲ. ...ಮುಖ ಶಿಯಾ ಗುಂಪುಗಳು ಈ ...ೆಯನ್ನು ಬಹಿಷ್ಕರಿಸಿದವು. ಹಲವು ...ಂಪುಗಳು ತಮ್ಮ ಕಿರಿಯ ನಾಯಕನ ...ದಲು ಪ್ರತಿನಿಧಿಗಳನ್ನು ಕಳಿಸಿದವಷ್ಟೆ. ...ತ್ಯಂತ ಅಮೇರಿಕನ್ ಪರ ಇರಾಕಿ ...ಶನಲ್ ಕಾಂಗ್ರೆಸ್ ನಾಯಕ ಸಹ ಇದರಲ್ಲಿ ...ಗವಹಿಸಲಿಲ್ಲ, ಕಿರಿಯ ಪ್ರತಿನಿಧಿ ...ಬ್ಬನನ್ನು ಕಳಿಸಿದ್ದ. ಸಭೆಯಲ್ಲೂ ಸಾಕಷ್ಟು ...ಂದಲವಿತ್ತು. ಸಾಲದ್ದಕ್ಕೆ ಹೊರಗೆ ಭಾರಿ ...ಮೇರಿಕನ್- ವಿರೋಧಿ ಪ್ರದರ್ಶನಗಳು ...ದವು. ಸಾವಿರಾರು ಇರಾಕಿಗಳು ಇದರಲ್ಲಿ ...ಗವಹಿಸಿದ್ದರು. ಬಾಗ್ದಾದ್ ಮತ್ತು ಇತರ ... ಇಂತಹ ಹಲವು ಪ್ರದರ್ಶನಗಳು ...ದಿವೆ. ಇರಾಕಿ ಜನರ ಕೋಪ ಈಗ ...ಮೇರಿಕನ್ನರ ಮೇಲೆ ತಿರುಗುತ್ತಿದೆ. ...ುಷ್, ನೀರು, ಒಳಚರಂಡಿ - ನೀವು ...ಮಾಡಿದ್ದು ಸರಿಪಡಿಸಿ, ಜಾಗ ಖಾಲಿ ... ಎಂಬ ಘೋಷಣೆಗಳು ಎಲ್ಲಾ ಕಡೆ ...ಬರುತ್ತಿವೆ.

ಎರಡು ಸಚಿವ ಖಾತೆಗಳು ಮಾತ್ರ ಲೂಟಿಯಾಗಲಿಲ್ಲ ಅದು ಹೇಗೆ!

ಅಮೇರಿಕನ್ ಪಡೆಗಳು ಬಾಗ್ದಾದ್ ವಶಪಡಿಸಿಕೊಂಡ ನಂತರದ ಭಾರೀ ಲೂಟಿ -ವಿಧ್ವಂಸಕ ಕೃತ್ಯಗಳು ನಡೆದವು. ಅವನ್ನು ಅಮೇರಿಕನ್ ಪಡೆಗಳಿಗೆ ತಡೆಯಲು ಸಾಧ್ಯವಾಗಲಿಲ್ಲ ಎಂದು ಅಮೇರಿಕನ್ ವರದಿಗಳು ಹೇಳುತ್ತವೆ. ಸಾಧ್ಯವಾಗಲಿಲ್ಲವೇ ಅಥವಾ ಮನಸ್ಸಿರಲಿಲ್ಲವೆ? ಎಂದು ಕೇಳುತ್ತಾರೆ ಸ್ವತಂತ್ರ ವರದಿಗಾರರು. ಕನಿಷ್ಟ ಸರ್ಕಾರದ ಸಚಿವಖಾತೆಗಳಿದ್ದ ಕಟ್ಟಡಗಳನ್ನು, ವಿದೇಶಿ ರಾಯಭಾರ ಕಚೇರಿ, ವಿಶ್ವಸಂಸ್ಥೆ ಕಛೇರಿ ಮತ್ತು ಇತರ ಅಂತರಾಷ್ಟ್ರೀಯ ಸಂಘಟನೆಗಳ ಕಛೇರಿಗಳನ್ನು ರಕ್ಷಿಸುವುದು ಅಂತರಾಷ್ಟ್ರೀಯ ಒಪ್ಪಂದಗಳ ಪ್ರಕಾರ ಅಮೇರಿಕನ್ ಪಡೆಗಳ ಕರ್ತವ್ಯವಾಗಿತ್ತು. ಅಮೇರಿಕನ್ ಪಡೆಗಳು ಕೇವಲ ಎರಡು ಖಾತೆಗಳನ್ನು ಮಾತ್ರ ರಕ್ಷಿಸಿದವು. ನೀವು ಊಹಿಸಬಹುದಾದಂತೆ ಅವು ತೈಲ ಮತ್ತು ಗೃಹಖಾತೆ. ಈ ಕಟ್ಟಡಗಳ ಮುಂದೆ ಅಮೇರಿಕನ್ ಪಡೆಗಳ ಒಂದು ತುಕಡಿ ಇತ್ತು. ಅಷ್ಟೇ ಕಾರಣ. ಇದನ್ನೆ ಎಲ್ಲಾ ಕಡೆ ಮಾಡಿದ್ದರೆ ಇರಾಕಿ ಮ್ಯೂಸಿಯಂ ಸೇರಿ ಎಲ್ಲಾ ಪ್ರಮುಖ ಕಟ್ಟಡಗಳನ್ನು ರಕ್ಷಿಸಬಹುದಿತ್ತು. ಆದರೆ ಇದನ್ನು ಬರ್ಬರ ಪಡೆಗಳಿಂದ ನಿರೀಕ್ಷಿಸುವುದು ಹೇಗೆ? ಹಲವು ಸಚಿವ ಖಾತೆಗಳು ಅಮೇರಿಕನ್ ಪಡೆಗಳ ಕ್ಷಿಪಣಿಗಳು, ಟ್ಯಾಂಕ್ ದಾಳಿಯಲ್ಲೇ ಧ್ವಂಸವಾಗಿದ್ದವು. ಕೆಲವು ಪ್ರತ್ಯಕ್ಷದರ್ಶಿಗಳು, ಸ್ವತಂತ್ರ ವರದಿಗಾರರ ಪ್ರಕಾರ, ಹಲವು ವಿಧ್ವಂಸಕಾರರು (ಅದರಲ್ಲೂ ಕೆಲವು ಸಚಿವಖಾತೆಗಳನ್ನು, ರಾಯಭಾರ ಕಛೇರಿಗಳು, ವಿಶ್ವಸಂಸ್ಥೆ ಸಂಘಟನೆಗಳು ಮ್ಯೂಸಿಯಂನ್ನು ಸುಟ್ಟ) ಬಸ್‌ಗಳಲ್ಲಿ ಬಂದಿಳಿದು, ಬಸ್‌ಗಳಲ್ಲಿ ಮಾಯವಾದರು. ಇದು ಸಂಘಟಿತ ಕುಕೃತ್ಯವಾಗಿರುವ ಸಾಧ್ಯತೆಗಳಿವೆ.

ಸ್ಫೂರ್ತಿ ಮೂಡಿಸಿದ ಐಕ್ಯರಂಗ ಬರಹಗಾರರ ತರಬೇತಿ ಶಿಬಿರ




ಐಕ್ಯರಂಗ ಬರಹಗಾರರಿಗೆ ರಾಜ್ಯ ಮಟ್ಟದ ಶಿಬಿರವೊಂದು ನಡೆಯಿತು. ಶಿಬಿರದ ಒಳಹೊರಗು, ಮುಂದಿನ ಯೋಜನೆಗಳ ಕುರಿತ ವರದಿ ಇಲ್ಲಿದೆ

ದುಡಿಯುವ ಜನರ ಪ್ರಾಣಮಿತ್ರ ಎಂಬ ಘೋಷಣೆಯನ್ನು ಜಾರಿ ಮಾಡುವತ್ತ, ಐಕ್ಯರಂಗವನ್ನು ಬೆಳವಣಿಗೆಯ ಮುಂದಿನ ಹಂತಕ್ಕೆ ಒಯ್ಯಲು ಬರಹಗಾರರ ತರಬೇತಿ ಶಿಬಿರವನ್ನು ಏಪ್ರಿಲ್ 12-13 ರಂದು ಬೆಂಗಳೂರಿನಲ್ಲಿ ಹಮ್ಮಿಕೊಳ್ಳಲಾಗಿತ್ತು. ಎಂಟು ಜಿಲ್ಲೆಗಳಿಂದ 30ಕ್ಕೂ ಹೆಚ್ಚು ಐಕ್ಯರಂಗದ ವರದಿಗಾರರು, ಬರಹಗಾರರು, ಬಳಗದ ಸದಸ್ಯರು ಭಾಗವಹಿಸಿದ್ದರು.

ಕೇರಳದ ಹಿರಿಯ ಮಾರ್ಕ್ಸ್‌ವಾದಿ ಚಿಂತಕರು, ಕಮ್ಯುನಿಸ್ಟ್ ಪತ್ರಕರ್ತ ಗೋವಿಂದ ಪಿಳ್ಳೆ ಉಪನ್ಯಾಸದೊಂದಿಗೆ ಶಿಬಿರ ಆರಂಭವಾಯಿತು. ಪಿಳ್ಳೆಯವರು 'ಪತ್ರಿಕೋದ್ಯಮದಲ್ಲಿ ಬೂರ್ಜ್ವಾ ಮತ್ತು ಮಾರ್ಕ್ಸ್‌ವಾದಿ ದೃಷ್ಟಿಕೋನ'ದ ಬಗ್ಗೆ ಉಪನ್ಯಾಸ ನೀಡದರು. ಕಮ್ಯುನಿಸ್ಟ್ ಪತ್ರಿಕೋದ್ಯಮ ಅಂತರ್ರಾಷ್ಟ್ರೀಯವಾಗಿ ನಡೆದು ಬಂದ ಹಾದಿಯನ್ನು ಸ್ಥೂಲವಾಗಿ ವಿವರಿಸಿ ಔಪಚಾರಿಕ ಪ್ರಜಾಪ್ರಭುತ್ವ ಹದ್ದುಗಳು ಇರುವ ಬೂರ್ಜ್ವಾ ಸಮಾಜದಲ್ಲಿ ಅದು ಎದುರಿಸಬೇಕಾದ ನಿರ್ದಿಷ್ಟ ಸವಾಲುಗಳ ಬಗ್ಗೆ ಪಿಳ್ಳೆಯವರು ತಿಳಿಸಿದರು. ಮನುಷ್ಯ ಸಮಾಜದಲ್ಲಿ ಸಂವಹನದ ಪಾತ್ರ, ಸ್ವರೋಪದ ಬಗೆಗಿನ ಸೈದ್ಧಾಂತಿಕ ಅಂಶಗಳನ್ನು ವಿವರಿಸಿದರು. ಐಕ್ಯರಂಗ ಕರ್ನಾಟಕದ ದುಡಿಯುವ ಜನರ ಚಳುವಳಿಯ ಬೆಳವಣಿಗೆಯ ಈ ಹಂತದಲ್ಲಿ ವಹಿಸಬೇಕಾದ ಪಾತ್ರದ ಬಗ್ಗೆ, ಧೋರಣೆ ಬಗ್ಗೆ ಅವರು ವಿವರಿಸಿದರು.

ದುಡಿಯುವ ಜನಸಮೂಹದ ಪತ್ರಿಕೆಯಾಗಿ ಬೆಳಸಬೇಕಾದರೆ, ಐಕ್ಯರಂಗ ಅನುಸರಿಸಬೇಕಾದ ಧೋರಣೆ ಬಗ್ಗೆ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ.ಎನ್.ನಾಗರಾಜ್ ತಮ್ಮ ಉಪನ್ಯಾಸದಲ್ಲಿ ವಿವರಿಸಿದರು. ಕಮ್ಯುನಿಸ್ಟ್ ಪತ್ರಿಕೋದ್ಯಮ ಕರ್ನಾಟಕದಲ್ಲಿ ಬೆಳೆದು ಬಂದ ರೀತಿಯನ್ನು ಸ್ಥೂಲವಾಗಿ (ಜನಶಕ್ತಿಯಿಂದ ಆರಂಭಿಸಿ) ವಿವರಿಸಿದರು. ಜನಸಮೂಹದ ಪತ್ರಿಕೆಯಾಗಿಯೇ ಆರಂಭವಾಗಿದ್ದ ಕಾರ್ಯಕರ್ತರ ಪತ್ರಿಕೆಯಾಗಿ ಪರಿವರ್ತಿತವಾಗಲು ಕಾರಣವಾದ ರಾಜಕೀಯ ಚಳುವಳಿಯನ್ನು ವಿವರಿಸಿ, ಪುನಃ ಜನಸಮೂಹದ ಪತ್ರಿಕೆಯಾಗಬೇಕಾದ ಅಗತ್ಯತೆ ಬಗ್ಗೆ ವಿವರಿಸಿದರು.

ಇಂದಿನ ಮಾಧ್ಯಮ ಸನ್ನಿವೇಶದ ಬಗ್ಗೆ ವಿಶ್ಲೇಷಣೆ ಮಾಡಿ, ಆಕ್ರಮಣಕಾರಿ ಪ್ರತಿಗಾಮಿ ಕೋಮುವಾದಿ ಪತ್ರಿಕೆಗಳ ದಾಳಿಯ ಅಪಾಯದ ಬಗ್ಗೆ ವಿವರಿಸಿದರು. ತುರ್ತು ಪರಿಸ್ಥಿತಿ ನಂತರದ ಪ್ರಜಾಸತ್ತಾತ್ಮಕ ಚಳುವಳಿಯ ಅಲೆ ಮೇಲೆ ತೇಲಿ ಬಂದ ಲಂಕೇಶ್ ಪತ್ರಿಕೆ ಮುಖಾಂತರ ಪತ್ರಿಕೆಗಳ ಇಂದಿನ ಇಳಿಮುಖತೆಯ ಕಾರಣಗಳನ್ನು ವಿಶ್ಲೇಷಿಸಿದರು. ರಾಜಕೀಯ ಪತ್ರಿಕೆಗಳು ಎನ್ನಬಹುದಾದ ಹಲವು ಪತ್ರಿಕೆಗಳು ಜನಸಮೂಹದ ಪತ್ರಿಕೆಯಾಗುವಲ್ಲಿನ ನ್ಯೂನ್ಯತೆಗಳನ್ನು ವಿವರಿಸಿ, ಐಕ್ಯರಂಗ ಒಂದೇ ಈ ನಿರ್ವಾತ ತುಂಬುವ ಸಾಧ್ಯತೆ ಬಗ್ಗೆ ಹೇಳಿದರು.



ಕಾಂ. ಗೋವಿಂದ ಪಿಳ್ಳೆ

ಶಿಬಿರದಲ್ಲಿ ಮಂಡಿಸಲಾದ ಯೋಜನೆಗಳು

- ಮೇ ನಲ್ಲಿ ಐಕ್ಯರಂಗ ಹೊಸ ಸ್ವರೂಪದೊಂದಿಗೆ ಪ್ರಕಟಣೆ ಹಲವು ಹೊಸ ಕಾಲಂಗಳ ಜತೆ ದುಡಿಯುವ ಜನ ಸಮೂಹದ ಪತ್ರಿಕೆಯಾಗುವತ್ತ ಇನ್ನೊಂದು ನಿರ್ದಿಷ್ಟ ಹೆಜ್ಜೆ ಇಡಲಿದೆ.
- ಜಿಲ್ಲೆಗಳಲ್ಲಿ ಐಕ್ಯರಂಗ ಬಳಗ, ತಾಲೂಕು ಕೇಂದ್ರಗಳಲ್ಲಿ ಓದುಗರ ವೇದಿಕೆ ರಚನೆ.
- ಎಲ್ಲಾ ಜಿಲ್ಲೆಗಳಲ್ಲಿ ವರದಿಗಾರರ ನೇಮಕ
- ಜೂನ್ 10-25 'ಐಕ್ಯರಂಗ ಪ್ರಸಾರ' ಆಚರಣೆ ಮೂಲಕ ಪ್ರಸಾರ ಹೆಚ್ಚಿಸುವ ಆಂದೋಲನ.
- ಐಕ್ಯರಂಗ ಪ್ರಸಾರವನ್ನು ದ್ವಿಗುಣಗೊಳಿಸುವುದು.

ದುಡಿಯುವ ಜನಸಮೂಹದ ಪತ್ರಿಕೆಯ ಸ್ವರೂಪ, ಧೋರಣೆ, ದೃಷ್ಟಿಕೋನವನ್ನು ವಿವರಿಸಿದ ನಾಗರಾಜ್ ಮಾವೋರ ಪಕ್ಷಗಳ ಬರಹಗಳಲ್ಲಿ ಏಕತಾನತೆಯನ್ನು ವಿರೋಧಿಸಿ ಎಂಬ ಪ್ರಮುಖ ಭಾಷಣದಲ್ಲಿ ಅವರು ಕಮ್ಯುನಿಸ್ಟ್ ಪತ್ರಿಕೆ ಬರಹ ಹೇಗಿರಬೇಕು ಎಂದು ನಿರ್ವಚಿಸಿದ ಸೂತ್ರಗಳನ್ನು ವಿವರಿಸಿ ನಮಗೆ ಈಗಲೂ ಅತ್ಯಂತ ಪ್ರಸ್ತುತವಾಗಿದೆ ಎಂದರು.


ದುಡಿಯುವ ಜನಸಮೂಹದ ಪತ್ರಿಕೆಯಾಗುವಲ್ಲಿ ಐಕ್ಯರಂಗದ ಇಂದಿನ ಸನ್ನಿವೇಶವನ್ನು ಶರತ್ಚಂದ್ರ ಕಳೆದ ಮೂರು ತಿಂಗಳ ಸಂಚಿಕೆಗಳ ಅವಲೋಕನದ ಮೂಲಕ ಮಾಡಿದರು. ಇತರ ಸಾಮೂಹಿಕ ಮಾಧ್ಯಮಗಳನ್ನು ದುಡಿಯುವ ಜನರ ಚಳುವಳಿ ಹೇಗೆ ಬಳಸಬಹುದು ಎಂಬುದನ್ನು ತಮ್ಮ ಸ್ವಾನುಭವದ ಆಧಾರದ ಮೇಲೆ ಪತ್ರಕರ್ತ ವಿಶ್ವಕುಂದಾಪುರ ವಿವರಿಸಿದರು.

ಮುಂದಿನ ಕೆಲವು ತಿಂಗಳುಗಳ ಸಂಚಿ... ಯೋಜನೆ, ಪ್ರಸಾರ, ಸಂಘಟನೆಯನ್ನು ಉತ್ತಮ ಪಡಿಸುವ ಬಗ್ಗೆ ನಿರ್ದಿಷ್ಟವಾದ ಪ್ರಸ್ತಾವಗಳನ್ನು ಸಂಪಾದಕ ಗುರುಶಾಂತ್ ಅವರು ಮಂಡಿಸಿದರು. ಆ ಬಗ್ಗೆ ವಿವರ... ಚರ್ಚೆ ನಡೆದು ಶಿಬಿರದಲ್ಲಿ ಭಾಗವಹಿಸಿದ... ಬರಹಗಾರರು ನಿರ್ದಿಷ್ಟ ಜವಾಬ್ದಾರಿಗಳನ್ನು ವಹಿಸಿಕೊಂಡು ಶಿಬಿರಕ್ಕೆ ಅರ್ಥಪೂರ್ಣತೆ ತಂದರು. ದುಡಿಯುವ ಜನಸಮೂಹದ ಮಾರ್ಗದರ್ಶಕ, ಸಂಘಟಕ, ಸಂದೇಶವಾಹಕನಾಗಬೇಕಾದರೆ, ಐಕ್ಯರಂ... ತನ್ನದೇ ಆದ ನಿರ್ದಿಷ್ಟ ಸಂಘಟನೆಯನ್ನು ಬೆಳೆಸುವುದರತ್ತ ಗಮನ ಕೊಡುವುದು ಇ... ತುರ್ತಿನ ಅಗತ್ಯವೆನ್ನುತ್ತಾ ಸಿಪಿಐ(ಎಂ) ರಾ... ಸೆಕ್ರೆಟಾರಿಯೆಟ್ ಸದಸ್ಯ ನಿತ್ಯಾನಂದ ಸ್ವಾ... ಸಮಾರೋಪ ಭಾಷಣ ಮಾಡಿದರು.

ಐಕ್ಯರಂಗ ಮೇನಲ್ಲಿ ಹೊಸ ಸ್ವರೂಪ.

ಹೊಸ ಸ್ವರೂಪದ ಭಾಗವಾಗಿ ವಿಜ್ಞಾ... ವಿಶೇಷ, ನಿಮಗಿದು ಗೊತ್ತೆ, ಇತಿಹಾಸದ... ಪುಟಗಳಿಂದ, ನಿತ್ಯ ಜೀವನದಲ್ಲಿ ಕಾನೂನ... ಮಾಧ್ಯಮ ಮಂಥನ, ಕಿರುತೆರೆ ವಿಮರ್ಶೆ... ಅಂಕೆ ಸಂಖ್ಯೆಗಳು ಮುಂತಾದ ಕಾಲಂಗಳ... ಆರಂಭವಾಗಲಿವೆ. 'ನಿಮ್ಮ ಪತ್ರ' ನಿಮ್ಮ... ಮನಕಲುಕುವ ಘಟನೆಗಳು, ಪ್ರಶ್ನೋತ್ತರ... ಓದುಗರ ಪತ್ರಗಳ ಮೂಲಕ ಓದುಗರ ... ಸಂವಾದ ಆರಂಭಿಸುವ ಯೋಜನೆ ಇದೆ.

- ಶರತ್...



ಜಿ.ಎನ್.ನಾಗರಾ...

ನಿಮ್ಮ ಪತ್ರ

ಬರಹಗಾರರ ಶಿಬಿರದಲ್ಲಿ ಐಕ್ಯರಂಗಕ್ಕೆ ಹೊಸ ಸ್ವರೂಪ ಕೊಡುವ ನಿರ್ಧಾರ ಕೈಗೊಂಡಿದ್ದೇವೆ. ಓದುಗರ ಜತೆ ಸಂವಾದಕ್ಕೆ 'ನಿಮ್ಮ ಪತ್ರ' ಕಾಲಂ ಆದರಲ್ಲಿ ಒಂದು ಶಿಬಿರಕ್ಕೆ ಬಂದ ಬರಹಗಾರರು ಸ್ವತಃ ಪತ್ರ ಬರೆಯುವುದಲ್ಲದೆ, ಸುದ್ದಿ ಹರಡಿ ನಮಗೆ ಪತ್ರಗಳ ಮಹಾಪೂರ ಬಂದೀತು ಎಂಬ ಭಯ ನಮಗಿತ್ತು. ಸದ್ಯ! ಹಾಗೇನೂ ಆಗಿಲ್ಲ. ಬದಲಾಗಿ ಒಂದೇ ಒಂದು ಪತ್ರ ಬಂದಿದೆ. ಬೇರೆ ಯಾವುದೇ ಪತ್ರ ಬಂದಿಲ್ಲವಾದ್ದರಿಂದ ವಿಧಿ ಇಲ್ಲದೆ, ಈ ಕಾಲಂನ್ನು ಇಂತಹ ಪತ್ರದಿಂದ ಆರಂಭಿಸಬೇಕಾಯಿತಲ್ಲ ಎಂಬ ದುಃಖದಿಂದ ಆರಂಭಿಸುತ್ತಿದ್ದೇವೆ.

- ಸಂಪಾದಕರು

'ಕೊಡಬೇಕಾದದ್ದು ಕೊಡಿ'


ಸಂಪಾದಕರಿಗೆ ವಣಕ್ಕಂ

ನೀವು ಬರಹಗಾರರ ಶಿಬಿರ ನಡೆಸಿದ್ದೀರಿ ಎಂದು ನಮಗೆ ಸುದ್ದಿ ಬಂದಿದೆ. 'ನಿಮ್ಮ ಪತ್ರ' ಕಾಲಂ ಆರಂಭಿಸುತ್ತಿದ್ದೀರಂತೆ ಇದೋ ನನ್ನ ಬೋಣಿ.

ಇತ್ತೀಚೆಗೆ ರಾಜಕುಮಾರ್ ಬಿಡುಗಡೆಗೆ ಒತ್ತೆ ಹಣ ಕೊಟ್ಟಿರುವ ಬಗ್ಗೆ ತನಿಖೆ ಆರಂಭವಾಗಿರುವುದು ನಿಮಗೆ ಗೊತ್ತಿರಬೇಕು. ನನಗೆ ಸ್ವಲ್ಪ ದುಡ್ಡೇನೋ ಬಂದಿದೆ. ಆದರೆ ದಿನಕರ್ ಅವರು ತಮ್ಮ ಪುಸ್ತಕದಲ್ಲಿ ಹೇಳಿದಷ್ಟು ಬಂದಿಲ್ಲ. 'ನಾನು ಕೊಟ್ಟಿಲ್ಲ ನಾನು ಕಟ್ಟಿಲ್ಲ' ಎಂದು ಎಲ್ಲರೂ ಹೇಳೋದು ನೋಡಿದ್ರೆ, ನನಗೆ ಎಲ್ಲರೂ ಸೇರಿ ಮೋಸಮಾಡ್ತ ಇದ್ದಾರೆ ಅಂತ ಅನುಮಾನ ಬರ್ತಾ ಇದೆ. ನನಗೆ ಕೊಡಬೇಕಾದ್ದು ಕೊಟ್ಟಿಲ್ಲ, ಅಂತ ಅವರೇ ಒಪ್ಪಿಕೊಂಡಿದ್ದಾರೆ. ಕರ್ನಾಟಕ ಮತ್ತು ತಮಿಳುನಾಡು ಎರಡೂ ಸರ್ಕಾರಗಳು ಈ ಬಗ್ಗೆ ತನಿಖೆ ಮಾಡಬ... ಯಾರ್‍ಯಾರು ಕೊಟ್ಟಿಲ್ಲ. ಅವರೆಲ್ಲಾ ಕೊಡಬೇ... ಕೊಟ್ಟಿಲ್ಲ ಅಂತ ಗುರುತಿಸಿ ಅವರು ಕೊಡು... ಮಾಡಬೇಕು. ಈ ಮೂಲಕ ನಾನು ಒತ್ತಾಯ... ಇದ್ದೇನೆ. ನಿಮ್ಮ ಪತ್ರಿಕೆನೂ ಇದಕ್ಕೆ ಒತ್ತಾ... ಹಾಕಬೇಕು. ಈ ಪತ್ರವನ್ನು ನೀವು ಖಂಡಿ... ಪ್ರಕಟಿಸುವಿರಿ ಅಂತ ನನಗೆ ನಂಬಿಕೆ ಇದೆ. ನ... ಗೊತ್ತು ನಿಮ್ಮ ಪತ್ರಿಕೆ ಸಣ್ಣದಾದರೂ ನಿಮಗೆ ... ಧೈರ್ಯ ಇದೆ. ಆದರೆ ಒಂದು ವೇಳೆ ಪ್ರಕಟಿಸದ... ಏನಾಗುತ್ತದೆ ಅಂತ ನಿಮಗೆ ಗೊ... ಎಂದುಕೊಂಡಿದ್ದೇನೆ!.

ವಿ.ಸೂ. ; ಈ ಪತ್ರವನ್ನು 'ನಿಮ್ಮ ಕಾಲಂ'ನಲ್ಲಿ ಪ್ರಕಟಿಸಬೇಕು. 'ಅಣಕ' ಕಾಲಿನಲ್ಲಿ ಪ್ರಕಟಿಸಬೇಡಿ ಹುಶಾರ್!

- ವೀರಪ್ಪನ್



PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು - 27 ಫೋನ್ ನಂ. 2236462,
ಮುದ್ರಣ: ಹವಿ ಪ್ರಿಂಟರ್ಸ್, ಕ್ವೀನ್ಸ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor : S.Y.GURUSHANTH